ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ


ಸಂಪುಟ 2 ಸಂಚಿಕೆ 41

ಅಕ್ಟೋಬರ್ 12, 2008

ಕನ್ನಡ ವಾರಪತ್ರಿಕೆ


www.janashakthi.org

ರೂ. 5/-



'ಮತಾಂತರ'ಗೊಳ್ಳುತ್ತಿರುವ ಕರ್ನಾಟಕ







ಕಾಂಗ್ರೆಸ್ ನಡಿಗೆ ಯಾವ ಕಡೆಗೆ ?



ರಕ್ತ ಹರಿಸುತ್ತಿರುವ ಹಿಂದೂ ಓಟ್ ಬ್ಯಾಂಕ್ ರಾಜಕಾರಣ

ಪೆಂಟಗಾನ್ ಮತ್ತು ಯುದ್ಧೋನ್ಮಾದ


ಕುಂದಾಪುರ : ಕುಡಿವ ನೀರಿಗೆ ಬರ ಜನರಿಗೆ ಬರೆ



ಗೋಕರ್ಣದ ಆಸ್ತಿ ನುಂಗಾಯನಮಃ



ನೋಟ



ಡಾ. ಜಿ. ಭಾಸ್ಕರ ಮಯ್ಯ

ಪೆಂಟಗಾನ್ ಮತ್ತು ಯುದ್ಧೋನ್ಮಾದ

ದುಷ್ಟ ಅಮೆರಿಕಾದ ಶಸ್ತ್ರಾಸ್ತ್ರ ಉತ್ಪಾದನೆ, ಮಾರಾಟ ಜಾಲ, ಹಿಡಿತ, ಅದರ ಸಾಮ್ರಾಜ್ಯಶಾಹಿ ಸುಲಿಗೆಕೋರ ಉದ್ದೇಶಕ್ಕೆ, ಯುದ್ಧೋನ್ಮಾದಕ್ಕೆ ಪೂರಕವಾಗಿಯೇ ಇದೆ.

ಜಾಗತಿಕ ಯುದ್ಧಗಳಲ್ಲಿ ಅಮೆರಿಕಾಕ್ಕೆ ಆದ ಹಾನಿ ಅತ್ಯಂತ ಕಡಿಮೆ. ಇದರ ಪರಿಣಾಮವಾಗಿ ಅಮೆರಿಕಾ ಒಂದರಲ್ಲಿಯೇ 22 ಸಾವಿರ ಹೊಸ ಕೋಟ್ಯಾಧಿಪತಿಗಳು ಹುಟ್ಟಿಕೊಂಡರು. ಜಾಗತಿಕ ಯುದ್ಧದಿಂದ ಒಂದೆಡೆ ಬಂಡವಾಳಶಾಹಿ ದುರ್ಬಲಗೊಳ್ಳುತ್ತಿದ್ದರೆ, ಅಮೆರಿಕಾವು ಸಾಮ್ರಾಜ್ಯವಾದದತ್ತ, ವಿಶ್ವ ಗುತ್ತೇದಾರಿಯತ್ತ ದಾಪುಗಾಲು ಹಾಕತೊಡಗಿತು. ಒಟ್ಟು ಔದ್ಯೋಗಿಕ ಉತ್ಪನ್ನ 1939 ರಲ್ಲಿ ಶೇ. 34.9 ಇದ್ದುದು, 1948 ರಲ್ಲಿ ಶೇ. 53.9 ಕ್ಕೆ ಬೆಳೆಯಿತು. ಅಮೆರಿಕಾ ಸಾಮ್ರಾಜ್ಯಶಾಹಿಗಳ ಮುಂದಾಳು 'ಮುಕ್ತ ವಿಶ್ವದ ಉದ್ಧಾರ ಕರ್ತೃ' ವಿನ ರೂಪದಲ್ಲಿ ವಿಶ್ವ ಪ್ರಭುತ್ವದ ತಾಂಡೇಲನಾಗಿ ಬೆಳೆಯಿತು. ಸಮಾಜವಾದಿ ದೇಶಗಳ ವಿರುದ್ಧ ಶೀತ ಸಮರವನ್ನು ಹುರಿಗೊಳಿಸಿತು. ಕೋರಿಯ, ವಿಯಟ್ನಾಂ ಯುದ್ಧಗಳನ್ನು ಆರಂಭಿಸಿತು. ಇದರಿಂದ ಸೈನ್ಯ ಬಜೆಟ್ ಅಭೂತಪೂರ್ವವಾಗಿ ಬೆಳೆಯಿತು.

ಅತಿದೊಡ್ಡ ಶಸ್ತ್ರಾಸ್ತ್ರ ರಫ್ತುದಾರ

ಇಂದು ಅಮೆರಿಕಾ ವಿಶ್ವದಲ್ಲಿ ಅತಿ ದೊಡ್ಡ ಸೈನ್ಯ ಸಾಮಗ್ರಿಯ ರಫ್ತುಗಾರ. ಏಳನೆಯ ದಶಕದಲ್ಲಿ ಅಮೆರಿಕಾದ ಶಸ್ತ್ರ ಮಾರಾಟ ಒಂದು ನೂರು ಕೋಟಿ ಡಾಲರ್ ಆಗಿತ್ತು. ಎಂಟನೆಯ ದಶಕದಲ್ಲಿ ಅದು ಒಂದು ಸಾವಿರ ಕೋಟಿ ಡಾಲರುಗಳಿಗೆ ಬೆಳೆಯಿತು. ಇವುಗಳೆಲ್ಲದರ ಪೂರೈಕೆದಾರರು ಪೆಂಟಗಾನ್ ಗುತ್ತೇದಾರರೇ ಆಗಿದ್ದಾರೆ. 85-90 ರ ಅವಧಿಯಲ್ಲಿ ಪೆಂಟಗಾನ್ 2,00,000 ಕೋಟಿ ಡಾಲರುಗಳನ್ನು ಖರ್ಚು ಮಾಡಿದೆ. ಈ ರಕ್ಷಣಾ ವಿಭಾಗ 32 ದೇಶಗಳಲ್ಲಿ 1,500 ಸೈನ್ಯ ನೆಲೆಗಳನ್ನು ಹೊಂದಿದೆ.

ಭಯಂಕರ ಕಟ್ಟಡ

ವಾಶಿಂಗ್ಟನ್‌ನಲ್ಲಿರುವ ಬಹುಮಾಳಿಗೆಯ 'ಭಯಂಕರ'ವಾದ ಕಟ್ಟಡವೆ 'ಪೆಂಟಗಾನ್'. ಇದರಲ್ಲಿರುವುದೇ ಅಮೆರಿಕಾದ ರಕ್ಷಣಾ ವಿಭಾಗ. ಬಂಡವಾಳಶಾಹಿಯ ವಿಕಾಸದ ಅತ್ಯುನ್ನತ ಹಂತದಲ್ಲಿ ಇಂಥ ಸೈನ್ಯ ಔದ್ಯೋಗಿಕ ಕಾಂಪ್ಲೆಕ್ಸ್ ಅನಿವಾರ್ಯವಾಗಿ ಹುಟ್ಟಿಕೊಳ್ಳುತ್ತದೆಂದು ಮಾರ್ಕ್ಸ್‌ವಾದಿ ಲೆನಿನ್‌ವಾದಿ ಚಿಂತನದಲ್ಲಿ ಸ್ಪಷ್ಟವಾಗಿಯೇ ಹೇಳಲಾಗಿದೆ. ದೊಡ್ಡಮಟ್ಟದ ಸಾಮ್ರಾಜ್ಯವಾದಿ ಶಸ್ತ್ರ ರಫ್ತುಗಾರರ ಕೂಟವೆ ಸೈನ್ಯ ಔದ್ಯೋಗಿಕ ಕಾಂಪ್ಲೆಕ್ಸ್‌ಗೆ ಜನ್ಮವೀಯುತ್ತದೆ. ಇದು ಸೈನ್ಯವಾದದ ಚರಮ ಪರಿಣತಿ. ಇದು ಅಸ್ತಿತ್ವದಲ್ಲಿ ಬರುತ್ತಲೆ ತನ್ನದೇ ಸಂಸ್ಥಾನ, ತನ್ನದೇ ಏಜನ್ಸಿ ಮತ್ತು ಸಮೂಹವನ್ನು ಸೃಷ್ಟಿಸಿಕೊಳ್ಳುತ್ತದೆ. ಇದುವೆ ಮಹೋನ್ನತ ಶಕ್ತಿಯಾಗಿ ಪರಿಣಮಿಸಿ ಶಸ್ತ್ರಾಸ್ತ್ರಗಳ ನಾಗಾಲೋಟಕ್ಕೆ ಚಾಲನೆಯನ್ನು ಕೊಡುತ್ತದೆ.

ಸೈನ್ಯ ಔದ್ಯೋಗಿಕ ಕಾಂಪ್ಲೆಕ್ಸ್ ಅಮೆರಿಕಾದಲ್ಲಿ ಗುತ್ತೇದಾರಿ ಸಂರಚನೆಯ ಪ್ರಮುಖ ಅಂಗವಾಗಿದೆ. ಅಮೆರಿಕಾದ 25 ಸಾವಿರ ಕಂಪೆನಿಗಳು ಮತ್ತು ಏಜೆನ್ಸಿಗಳು ರಕ್ಷಣಾ ವಿಭಾಗ. ವಿಭಿನ್ನ ಶಾಖೆಗಳ ಕಂಟ್ರಾಕ್ಟರರುಗಳು, ಅಮೆರಿಕಾ ಜಲಸೈನ್ಯದ ಹಡಗು ನಿರ್ಮಾಣದ ಶೇ. 75 ಭಾಗವನ್ನು ನಿರ್ಮಾಣ ಮಾಡುವ ಮೂರು ಕಂಪೆನಿಗಳು ಮತ್ತು ಇಲೆಕ್ಟ್ರಾನಿಕ್ಸ್ ಗುತ್ತೇದಾರಿಕೆಯ ಹತ್ತು ನಿಗಮಗಳು ಇದಕ್ಕೆ ಸೇರಿವೆ.

ಸೈನ್ಯ ಔದ್ಯೋಗಿಕ ಕಾಂಪ್ಲೆಕ್ಸ್‌ಗೆ ಅಮೆರಿಕಾದ ಪ್ರಭುತ್ವವು ಅತ್ಯಂತ ಉದಾರವಾಗಿ ಧನಸಹಾಯ ಮಾಡುತ್ತದೆ. ಇದೆಲ್ಲದರ ಪರಿಣಾಮವಾಗಿ ಅಮೆರಿಕಾದ ಅರ್ಥ ವ್ಯವಸ್ಥೆಯಲ್ಲಿ ನಾಗರಿಕ ಕ್ಷೇತ್ರಕ್ಕೆ ಹೋಲಿಸಿದರೆ ಸೈನ್ಯ ಕ್ಷೇತ್ರಕ್ಕೆ ಅತ್ಯಧಿಕ ಪಾಲು ಸಲ್ಲುತ್ತದಲ್ಲದೆ ಅದು ಉತ್ತರೋತ್ತರವಾಗಿ ಬೆಳೆಯುತ್ತಲೇ ಇದೆ. ನಾಗರಿಕ ವ್ಯಾಪಾರ ವ್ಯವಹಾರಕ್ಕಿಂತ ಸಾಮ್ರಾಜ್ಯವಾದಿ ಮತ್ತು ತೃತೀಯ ಜಗತ್ತಿನ ದೇಶಗಳಲ್ಲಿ ಶಸ್ತ್ರ ಮಾರಾಟವೇ ಹೆಚ್ಚು ಅದಕ್ಕೆ ಲಾಭದಾಯಕ.

ಮೂರು ಭಾಗ

ಉಚ್ಚ ಮಟ್ಟದ ಸೈನ್ಯ ಗುತ್ತೇದಾರರನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಮೊದಲ ಭಾಗದಲ್ಲಿ ಜನರಲ್ ಡಯನಮಿಕ್ಸ್, ಲಾಕ್ ಹೀಡ್, ಮಾಕ್ಡೊ ಸಲ್ ಡಗಲಸ್, ನಾರ್ಥರಾಪ್ ಚೇಂಬರ್‌ಲ್ಯೆನ್ಸ್ ಮೆನುಫೆಕ್ಚರಿಂಗ್ ಮೊದಲಾದ 30 ದೊಡ್ಡ ಕಂಪೆನಿಗಳು. ಎರಡನೆಯ ವಿಭಾಗದ ಗುತ್ತೇದಾರರದ್ದು ನಾಗರಿಕ ಮಾರುಕಟ್ಟೆಯಾದರೂ ಸೈನ್ಯ ಗುತ್ತಿಗೆ ಅದರ ಮಹತ್ವಪೂರ್ಣ ಅಂಗವಾಗಿದೆ. ಈ ವಿಭಾಗದಲ್ಲಿ 'ಐ. ಟಿ. ಎಮ್., ಜನರಲ್ ಎಲೆಕ್ಟ್ರಿಕ್ಸ್, ಕ್ರಿಸ್ಲರ್ ವೆಕ್ಸಿಟಿಗ್, ವೆಕಾರ್ಡ್' ಮೊದಲಾದ ನಲವತ್ತು ಕಂಪೆನಿಗಳು ಮೂರನೆಯ ವಿಭಾಗವು ಪೆಂಟಗಾನ್ ನಿಂದ ಗುತ್ತಿಗೆ ಪಡೆಯುತ್ತದಾದರೂ ಪೂರ್ತಿಯಾಗಿ ಅದರ ಮೇಲೆಯೇ ಆಧರಿಸಿಲ್ಲ. ಈ ವಿಭಾಗದಲ್ಲಿ ಗಲ್ಫ್ ಆಯಿಲ್, ಎಕ್ಸೋನ, ಸ್ಟ್ಯಾಂಡರ್ಡ್ ಆಯಿಲ್ ಮುಂತಾದ ಹದಿನೈದು ಕಂಪೆನಿಗಳಿವೆ.

ರಕ್ಷಣಾ ವಿಭಾಗವಲ್ಲದೆ ಅಮೆರಿಕಾದಲ್ಲಿ ಮತ್ತೆರಡು ಸರ್ಕಾರಿ ಏಜನ್ಸಿಗಳಿವೆ. ಅವುಗಳ ಅರ್ಧದಷ್ಟು ಕಾರ್ಯಭಾರವು ಸೈನ್ಯ ಉದ್ದೇಶಕ್ಕೆ ಸಂಬಂಧಿಸಿದವು.

ನಾಸಾದ ಮುಖ್ಯ ಪೂರೈಕೆದಾರರು ಪೆಂಟಗಾನ್‌ನ ಮುಖ್ಯ ಗುತ್ತೇದಾರರೇ ಆಗಿದ್ದಾರೆ. ಸೈನ್ಯ ಕಾಂಪ್ಲೆಕ್ಸಿನ ಗುತ್ತೇದಾರರು ರಾಜಕೀಯ ನಿರ್ಣಯಗಳ ಮೇಲೆ ತಮ್ಮ ಪ್ರಭಾವ ಬೀರಬಲ್ಲವರಲ್ಲದೆ, ತಮ್ಮ ಇಚ್ಛೆಗನುಸಾರವಾಗಿ ನಿರ್ಣಯಗಳನ್ನು ಮಾರ್ಪಡಿಸಬಲ್ಲ ಸಮರ್ಥರೂ ಆಗಿದ್ದಾರೆ.

1950 ರಿಂದ 1980 ರ ಕಾಲಾವಧಿಯಲ್ಲಿ ಪೆಂಟಗಾನ್ ಸೈನ್ಯ ಉದ್ದೇಶಕ್ಕೆ ಖರ್ಚು ಮಾಡಿದ ಹಣ ಹತ್ತು ಸಾವಿರ ಶತಕೋಟಿ ಡಾಲರ್. 1980 ರಿಂದ 86 ರ ಅವಧಿಯಲ್ಲಿ 1,500 ಶತಕೋಟಿ ಡಾಲರ್‌ಗಳನ್ನು ಖರ್ಚು ಮಾಡಿದೆ.

ಪೆಂಟಗಾನ್ 51 ಶತ ಕೋಟಿ ಡಾಲರುಗಳ ಸ್ಥಳ ಮತ್ತು ಕಟ್ಟಡಗಳ ಮಾಲಕ. ಇದರ ಸಿಬ್ಬಂದಿ ವರ್ಗದ ಸಂಖ್ಯೆ 30 ಲಕ್ಷ. ಇದು ಅಮೆರಿಕಾದ ಎಲ್ಲಾ ಸರಕಾರಿ ನೌಕರರ ಶೇ. 40 ರಷ್ಟಾಗುತ್ತದೆ. ಇದರಲ್ಲಿ ಸಶಸ್ತ್ರ ಬಲದ ಜವಾನರ ಸಂಖ್ಯೆಯನ್ನು ಸೇರಿಸಿದರೆ ಅದು ಒಟ್ಟು ನೌಕರರ ಸಂಖ್ಯೆಯ ಮೂರನೆಯ ಎರಡರಷ್ಟಾಗುತ್ತದೆ. ಸೈನ್ಯ ಕಾರ್ಖಾನೆಗಳಲ್ಲಿ ಇಪ್ಪತ್ತು ಲಕ್ಷ ಜನರು ಕೆಲಸ ಮಾಡುತ್ತಿದ್ದಾರೆ. 2,000 ಜನ ಜನರಲ್ ಮತ್ತು ಎಡ್ಮಿರಲ್‌ಗಳು ಸೇನೆಯಲ್ಲಿದ್ದಾರೆ. ಸೈನ್ಯದ ಅಗತ್ಯತೆಗಳನ್ನು ನಿರ್ಣಯಿಸುವವರು ಇವರೆ. ಸಹಜವೆಂಬಂತೆ ಇದರ ಸರ್ವೋಚ್ಚ ಕೇಡರ್‌ಗಳು ಅತ್ಯುಚ್ಚವರ್ಗದ ಹಿನ್ನೆಲೆಯಿಂದಲೇ



ಬಂದವರಾಗಿರುತ್ತಾರೆ.

ಇದೆಲ್ಲದರ ಪರಿಣಾಮವಾಗಿ ಈಗ ನಾಭಿಕೀಯ(ನಭ-ಆಕಾಶ ಸಂಬಂಧಿ)ಶಸ್ತ್ರಗಳ ಅದರಲ್ಲೂ ಮುಖ್ಯವಾಗಿ ವಿಶ್ವದ ಅಣುಶಸ್ತ್ರಗಳ ಭಂಡಾರವೆಷ್ಟಿದೆಯೆಂದರೆ ಸರಿ ಸುಮಾರು 60 ಮೆಗಾವಾಟ್‌ಗಳಷ್ಟು. ಇದು ಹಿರೋಶಿಮಾದಲ್ಲಿ ಹಾಕಿದ ಅಣುಬಾಂಬಿಗಿಂತ 30 ಲಕ್ಷ ಪಟ್ಟು ಹೆಚ್ಚಿನದಾಗಿದೆ. ಇದರ ಒಂದು ಸಣ್ಣ ಭಾಗ ಈ ಪೃಥ್ವಿಯನ್ನು ಜೀವರಹಿತ ಜಡ ಖಗೋಲೀಯ ಪಿಂಡವನ್ನಾಗಿ ಮಾರ್ಪಡಿಸಬಲ್ಲುದು ಎಂಬುದನ್ನು ನೆನೆದರೆ ನಿಜವಾಗಿಯೂ ಮನಸ್ಸು ತಲ್ಲಣಗೊಳ್ಳುತ್ತದೆ.

ಅಮೆರಿಕಾದ ಈ ಸೈನ್ಯವಾದವು ಅಭಿವೃದ್ಧಿಶೀಲ ದೇಶಗಳ ಮೇಲೆ ಬಹಳ ಕೆಟ್ಟ ಪರಿಣಾಮವನ್ನು ಬೀರಿದೆ. ಅವು ತಮ್ಮ ಶಸ್ತ್ರಾಸ್ತ್ರಕ್ಕಾಗಿ ಬಜೆಟ್‌ನಲ್ಲಿ ಅತಿ ಹೆಚ್ಚಿನ ಮೊತ್ತವನ್ನು ಕಾದಿರಿಸುವ ಒತ್ತಡಕ್ಕೆ ಒಳಗಾಗಿವೆ. ಈ ಸಾಮ್ರಾಜ್ಯಶಾಹಿ ದೇಶಗಳ ಶಸ್ತ್ರ ಮಾರಾಟದ ಶೇಕಡಾ 75 ರಷ್ಟು ಭಾಗಕ್ಕೆ ಮಾರುಕಟ್ಟೆ ಈ ಅಭಿವೃದ್ಧಿಶೀಲ ದೇಶಗಳು.

ಖರೀದ ಭರಾಟೆ

1975 ರಿಂದ 79 ರ ನಡುವಣ ಕಾಲಾವಧಿಯಲ್ಲಿ ಹಾಗೂ ಅಭಿವೃಧಿಶೀಲ ದೇಶಗಳು ಶಸ್ತ್ರಾಸ್ತ್ರಕ್ಕಾಗಿ 316 ಶತಕೋಟಿ ಡಾಲರುಗಳನ್ನು ಸಾಮ್ರಾಜ್ಯಶಾಹಿ ದೇಶಗಳಿಗೆ ಕೊಟ್ಟಿವೆ. ವಿಶ್ವ ಸೈನ್ಯ ವ್ಯಯದಲ್ಲಿ ಈ ರಾಷ್ಟ್ರಗಳ ಭಾಗವು 1975 ರಲ್ಲಿ ಶೇ. 19 ಇದ್ದುದು 1980 ರಲ್ಲಿ ಶೇ. 25 ಕ್ಕೆ ವೃದ್ಧಿಸಿತು. 8 ನೆಯ ದಶಕದಲ್ಲಿ ಸೌದಿ ಅರೇಬಿಯಾ 35 ಶತಕೋಟಿ ಡಾಲರ್ ಶಸ್ತ್ರಾಸ್ತ್ರವನ್ನು ಖರೀಸಿತು. ಇರಾನ್ 14 ಶತಕೋಟಿ, ಇಸ್ರೇಲ್ 11 ಶತಕೋಟಿ, ಪಶ್ಚಿಮ ಜರ್ಮನಿ, ದಕ್ಷಿಣ ಕೋರಿಯಾ ಮತ್ತು ಇಂಗ್ಲೆಂಡ್ ತಲಾ 5 ಶತಕೋಟಿ ಡಾಲರ್ ಖರೀದಿಸಿತು. ಇಂದು ಪೆಂಟಗಾನ್ ಪ್ರತಿ ಗಂಟೆಗೆ 2.90 ಕೋಟಿ ಡಾಲರುಗಳನ್ನು ಖರ್ಚು ಮಾಡುತ್ತಿದೆ.

ಒಬ್ಬ ಸೈನಿಕನ ಮೇಲೆ ವೆಚ್ಚವಾಗುವ ಹಣವು ಆಫ್ರಿಕಾದಲ್ಲಿ 13 ವ್ಯಕ್ತಿಗಳ ಆದಾಯಕ್ಕೆ ಸಮವಾದರೆ, ದಕ್ಷಿಣ ಏಶಿಯಾದಲ್ಲಿ 17 ವ್ಯಕ್ತಿಗಳ ಆದಾಯಕ್ಕೆ ಸಮವಾಗುತ್ತದೆ. ಸಂಕಷ್ಟವನ್ನು ಉಂಟುಮಾಡಿದೆ. ಆ ದೇಶಗಳು ಶಾಂತಿಪೂರ್ಣ ಯೋಜನೆಗಳಿಗೆ ಖರ್ಚು ಮಾಡಬೇಕಾದ ಹಣದ ದೊಡ್ಡ ಪಾಲನ್ನು ರಕ್ಷಣಾ ವ್ಯವಸ್ಥೆಗಾಗಿ ಖರ್ಚು ಮಾಡಬೇಕಾದ ಒತ್ತಡಕ್ಕೆ ಒಳಗಾಗಿವೆ. ಅಭಿವೃದ್ಧಿಶೀಲ ದೇಶಗಳ ರೈತ ಕಾರ್ಮಿಕ ವರ್ಗವಂತೂ ತತ್ತರಿಸಿ ಹೋಗಿದೆ.

ಸಿ. ಪಿ. ಡಿ.:

1976 ರ ಸುಮಾರಿಗೆ ಸೈನ್ಯ ಔದ್ಯೋಗಿಕ ಕಾಂಪ್ಲೆಕ್ಸಿನಿಂದ ಇನ್ನೊಂದು ಪ್ರತಿನಿಧಿ ಸಂಸ್ಥೆ ಹುಟ್ಟಿಕೊಂಡಿತು. ಅದುವೇ 'ಕಮಿಟಿ ಆಫ್ ಪ್ರಸೆಂಟ್ ಡೇಂಜರ್' (ಸಿ. ಪಿ. ಡಿ.). ಇದು ಸೋವಿಯತ್ ಸೈನ್ಯ ಪ್ರಭುತ್ವದ ವಿರುದ್ಧ ಆಕ್ರಾಮಕ ಘೋಷಣೆ ಮಾಡಿತು. ಅಮೆರಿಕಾವನ್ನು ಸ್ವತಂತ್ರ ಮತ್ತು ಬಲಶಾಲಿಯನ್ನಾಗಿ ಮಾಡಲು ಮೂರೂ ಸೇನಾ ವಿಭಾಗಗಳಿಗೆ ಅತಿ ಹೆಚ್ಚು ಸಂಪತ್ತನ್ನು ವಿನಿಯೋಗಿಸಲು ನಿರ್ಣಯಿಸಲಾಯಿತು.

ಇದರಲ್ಲಿ 'ಕೋಟ್ಯಾಧಿಪತಿ' (ಈ ಪದಕ್ಕೆ ಮಿತಿಯಿದೆ. ಆದರೆ ಯಾರ ಬಗೆಗೆ ವಿಶೇಷವಾಗಿ ಈ ಪದವನ್ನು ವಿನಿಯೋಗಿಸಲಾಗುತ್ತಿದೆಯೋ ಆ ಪದಕ್ಕೆ ಮಿತಿಯಿಲ್ಲ.) ಜೇಮ್ಸ್ ವೆಕಾರ್ಡ್, ಮಾಜಿ ಹಣಕಾಸು ಮಂತ್ರಿ ಹೆನ್ರಿ ಪಾವುಲರ್, ಮಾಜಿ ರಕ್ಷಣಾ ಮಂತ್ರಿ ಪಾಲ್ ನೀಶಿ, ಸಿ. ಐ. ಎ. ಯ ಮಾಜಿ ನಿರ್ದೇಶಕ ವಿಲಿಯಂ ಕೋಲ್ಬಿ, ಕುಖ್ಯಾತ ಸೈನ್ಯವಾದಿ ಮಾಕ್ಸ್‌ವೆಲ್ ಟೇಲರ್ ಮೊದಲಾದವರಿದ್ದಾರೆ. ಈ ಕೂಟದ ಒಳಸಂಚಿನ ನೇರ ಗುರಿ ಚೀನ ಮತ್ತು ಕಮ್ಯುನಿಷ್ಟರು. ಈ ಕೂಟವು ಸಾಲ್ಟ್ -2 ರ ಒಪ್ಪಂದ ಯುರೋಪ್ ಮತ್ತು ಪಶ್ಚಿಮದ ಸೇನೆಗಳಲ್ಲಿ ಕಡಿತದ ಯೋಜನೆ, ಅಮೆರಿಕಾ ಸೋವಿಯತ್ ವ್ಯಾಪಾರದಲ್ಲಿ ವೃದ್ಧಿ- ಇವುಗಳೆನ್ನೆಲ್ಲಾ ತೀವ್ರವಾಗಿ ವಿರೋಧಿಸಿತ್ತು.

(ಮುಂದುವರಿಯುವುದು)

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಸರ್ವಾಧಿಕಾರದ ಮನೋಭಾವ

ರಾಜ್ಯದಲ್ಲಿನ ವಿರೋಧ ಪಕ್ಷಗಳನ್ನು ಕಾಡು ಪ್ರಾಣಿಗಳಿಗೆ ಹೋಲಿಸಿ ಟೀಕಿಸಿರುವ ಯಡಿಯೂರಪ್ಪನವರ ಕ್ರಮ ಅವರು ಅನುಭವಿಸುತ್ತಿರುವ ಹತಾಶೆಯ ಪರಾಕಾಷ್ಠೆಯನ್ನು ಎತ್ತಿ ತೋರಿಸುತ್ತದೆ. ತಮ್ಮ ಸರ್ಕಾರದ ರೀತಿ ನೀತಿ ಹಾಗೂ ಮುಖ್ಯಮಂತ್ರಿಗಳ ಕಾರ್ಯಶೈಲಿಯನ್ನು ಟೀಕಿಸಿರುವ ವಿರೋಧ ಪಕ್ಷಗಳ ನಾಯಕರ ಟೀಕೆಗಳಿಗೆ ಸೂಕ್ತ ಉತ್ತರ ಕೊಡುವ ಬದಲು ತಾಳ್ಮೆಯನ್ನು ಕಳೆದುಕೊಂಡು ಹೀಯಾಳಿಸಿ ಜರೆದಿರುವುದು ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಅವರು ನೀಡುತ್ತಿರುವ 'ಬೆಲೆ'ಗೆ ಸಾಕ್ಷಿಯಾಗಿದೆ.ಅಸಹನೆಯ ಭರದಲ್ಲಿ ಅವರು ಹಲವಾರು ವರುಷಗಳು ವಿರೋಧ ಪಕ್ಷದ ನಾಯಕರಾಗಿಯೇ ಇದ್ದರು ಎಂಬುದನ್ನು ಮರೆತಿದ್ದಾರೆ. ಹೀಗೆ ಪ್ರಜಾಸತ್ತಾತ್ಮಕ ಅವಕಾಶಗಳನ್ನು ಬಳಸಿ ಬೆಳೆಯುವುದು ನಂತರ ಅದರ ವಿರುದ್ಧ ತನ್ನ ಧಾಳಿ ನಡೆಸುವುದು ಫ್ಯಾಸಿಸ್ಟರ ಒಂದು ವಿಧಾನ.


ಮುಖ್ಯಮಂತ್ರಿಗಳು ತಮ್ಮ ಆಡಳಿತದ ಬಗ್ಗೆ ಟೀಕೆಗಳೇ ಇರಕೂಡದು ಎಂದಿದ್ದರೆ ಅದಕ್ಕೆ ಅವಕಾಶವೇ ಇಲ್ಲದಂತೆ ಪಾರದರ್ಶಕ ಹಾಗೂ ಕಾನೂನುಬದ್ಧ ಆಡಳಿತ ನೀಡಿ ಸೈ ಅನಿಸಿಕೊಳ್ಳಬಹುದಿತ್ತು. ಆದರೆ ಅದರ ಗೋಜಿಗೆ ಹೋಗುವುದು ಮುಖ್ಯಮಂತ್ರಿಗಳಿಗೆ ಬೇಕಿಲ್ಲ. ನಮ್ಮ ಸಂಸದೀಯ ಪ್ರಜಾಪ್ರಭುತ್ವದಲ್ಲಿ ಆಡಳಿತ ಪಕ್ಷಗಳಿಗೆ ಇರುವಷ್ಟೇ ಮಹತ್ವದ ಸ್ಥಾನ ವಿರೋಧ ಪಕ್ಷಗಳಿಗೂ ಇದೆ. ಹಾದಿ ತಪ್ಪುವ, ತಪ್ಪಿಸುವ ಸರ್ಕಾರವನ್ನು 'ಎಚ್ಚರಿಸಿ' ಜನಪರವಾಗುವಂತೆ ಕೆಲಸ ಮಾಡಿಸುವ ಹೊಣೆ ವಿರೋಧ ಪಕ್ಷಗಳಿಗೆ ಇದೆ. ಅಭಿಮತ ಮತ್ತು ಭಿನ್ನಮತಗಳು ಪ್ರಜಾಪ್ರಭುತ್ವದ ಒಂದು ಅಗತ್ಯ ಅಂಶಗಳು.

ಇಂದು ಬಹಳಷ್ಟು ಬಾರಿ ಕಾಂಗ್ರೆಸ್ ಜೆಡಿ(ಎಸ್)ನಂತಹ ಪ್ರಮುಖ ವಿರೋಧ ಪಕ್ಷಗಳು ತಮ್ಮ ಟೀಕೆಗಳನ್ನು ಸಾರ್ವಜನಿಕ ಪ್ರಶ್ನೆಗಳತ್ತ ಕೇಂದ್ರಿಕರಿಸದೇ ವ್ಯಕ್ತಿಗತ ಹಾಗೂ ತೀರಾ ಅನಗತ್ಯ ವಿಷಯಗಳತ್ತ ಎಳೆದಾಡುತ್ತಿರುವ ಸಂದರ್ಭಗಳು ಇಲ್ಲವೆಂದಲ್ಲ. ಆದಾಗ್ಯೂ ಅಂತಹವನ್ನು ಬದಲಾಯಿಸಿಕೊಳ್ಳಲು ಆಗ್ರಹಿಸಬಹುದೇ ಹೊರತು ಅಬಿವ್ಯಕ್ತಿ ಸ್ವಾತಂತ್ರ್ಯವನ್ನು ದಮನಿಸಲು ಒಂದು ಸಂದರ್ಭವಾಗಿ ಆಗಬಾರದು. ವಿರೋಧ ಪಕ್ಷಗಳ ಪಾತ್ರವನ್ನು ನಿರಾಕರಿಸುವುದಾಗಲೀ, ಅಭಿಪ್ರಾಯಗಳ ಅವಹೇಳನವಾಗಲಿ ಅಥವಾ ದಮನವಾಗಲಿ ಅದು ಪ್ರಜಾಪ್ರಭುತ್ವೀಯ ವ್ಯವಸ್ಥೆಗೆ ಹಾನಿ ಹಾಗೂ ಸಂವಿಧಾನದ ಮೇಲೆ ಎಸಗಿದ ಧಾಳಿಯೆಂದೇ ಭಾವಿಸಬೇಕಾಗುತ್ತದೆ.

ಬಿಜೆಪಿ ಅಧಿಕಾರಕ್ಕೆ ಬಂದ ನಂತರದಲ್ಲಿ ಪ್ರಜಾಸತ್ತಾತ್ಮಕ ಹಕ್ಕುಗಳ ದಮನ ಸತತವಾಗಿ ನಡೆಯುತ್ತಲೇ ಇದೆ. ತಮ್ಮ ಬೇಡಿಕೆ- ಕೇಳಿಕೆಗಾಗಿ ಹಕ್ಕು-ನ್ಯಾಯಕ್ಕಾಗಿ ಬೀದಿಗಿಳಿದು ಹೋರಾಟ ಮಾಡುತ್ತಿರುವವರ ಮೇಲೆ ಸೇಡಿಟ್ಟು ಲಾಠಿಚಾರ್ಜು, ಗೋಲಿಬಾರ್‌ಗಳ ಮೂಲಕ ದಮನ ಕಾಂಡ ನಡೆದಿವೆ. ಆಡಳಿತ ಪಕ್ಷಗಳ ಶಾಸಕರುಗಳ ಹಾಗೂ ಅಪರಾಧಿ ಸಚಿವರ ರಕ್ಷಣೆಗೆ ಕಾನೂನು ಕ್ರಮಗಳನ್ನು ನಿರ್ಲಜ್ಯವಾಗಿ ಗಾಳಿಗೆ ತೂರಿ ಆಡಳಿತ ಯಂತ್ರವನ್ನು ದುರ್ಬಳಕೆ ಮಾಡಲಾಗುತ್ತಿದೆ. ಸಂಘ ಪರಿವಾರದ ಸಂಘಟನೆಗಳ ಅಟ್ಟಹಾಸಕ್ಕೆ ಕಡಿವಾಣ ಎಲ್ಲಿ? ಬದಲಾಗಿ ಅದರ ನಿರ್ದೇಶನಗಳ ಜಾರಿಗೆ ಸತತ ಯತ್ನಿಸಲಾಗುತ್ತಿದೆ. ಸಂಘಪರಿವಾರದ ಪ್ರಾಯೋಜಿತ ಸಂಸ್ಥೆಗಳಿಗೆ ಕಾನೂನು ಜನಾಭಿಪ್ರಾಯ ಗಾಳಿಗೆ ತೂರಿ ಸಾರ್ವಜನಿಕ ದೇವಾಲಯ, ಆಸ್ತಿಯನ್ನು ಧಾರೆ ಎರೆಯಲಾಗುತ್ತಿದೆ. ಇಡೀ ಪರಿವಾರದಿಂದ ಧಾರ್ಮಿಕ ಅಲ್ಪಸಂಖ್ಯಾತರ ಪ್ರಾರ್ಥನಾ ಮಂದಿರಗಳ ಮೇಲೆ, ಅಲ್ಪಸಂಖ್ಯಾತರ ಮೇಲೆ ಧಾಳಿಗಳು ನಡೆಯುತ್ತವೆ. ಅಂತಹವರಿಗೆ ಸರ್ಕಾರ ಬೆಂಬಲಿಸುತ್ತದೆ. ಮುಖ್ಯಮಂತ್ರಿಗಳು ಇತ್ತೀಚೆಗೆ 'ಹಿಂದುಗಳನ್ನು ಕೆಣಕಬೇಡಿ' ಎಂದೆಲ್ಲಾ ಉದ್ರಿಕ್ತರಾಗಿ ಭಜರಂಗದಳದಂತೆ ಮಾತನಾಡಿದ್ದಾರೆ. ಅಲ್ಲದೇ ಅಜ್ಞಾನ, ಅಂಧಶ್ರದ್ಧೆ, ಮೂಢನಂಬಿಕೆಗಳನ್ನು, ಮತಾಂಧತೆ, ಜಾತೀಯತೆಯನ್ನು ಸಂವಿಧಾನದ ಮೂಲ ಆಶಯಗಳಿಗೆ ವ್ಯತಿರಿಕ್ತವಾಗಿ ಪ್ರಚಾರಿಸಲಾಗುತ್ತಿದೆ, ಬೆಳೆಸಲಾಗುತ್ತಿದೆ, ಅನುಸರಿಸಲಾಗುತ್ತಿದೆ. ವಿರೋಧ ಪಕ್ಷಗಳ ಮೇಲಿನ ಮುಖ್ಯಮಂತ್ರಿಗಳ ಟೀಕೆಗಳನ್ನು, ಸರ್ಕಾರದ ಮೂಲಕ ವಹಿಸುತ್ತಿರುವ ಕ್ರಮಗಳನ್ನು ಗಮನಿಸಿದರೆ ಯಡಿಯೂರಪ್ಪನವರು ಅಪ್ಪಿರುವ ಫ್ಯಾಸಿಸ್ಟ್ ಮನೋಭಾವಕ್ಕೆ ಸಾಕ್ಷಿಯಾಗಿದೆ.

ಒಟ್ಟಾರೆ ಬಿಜೆಪಿಯ ಆಡಳಿತದ ಈ ಅವಧಿಯು ಪ್ರಜಾಸತ್ತಾತ್ಮಕ ಹಕ್ಕು-ಅವಕಾಶಗಳನ್ನು ದಮನಿಸುವ ದಿಕ್ಕಿನಲ್ಲಿದೆ. ಮುಖ್ಯಮಂತ್ರಿಗಳೇ ಇದಕ್ಕೆ ಕುಮ್ಮಕ್ಕು ಕೊಡುವುದು ಅಪಾಯಕಾರಿಯಾಗಿದೆ. ಇಂತಹ ಪ್ರವೃತ್ತಿಗಳ ವಿರುದ್ಧ ಎಲ್ಲರೂ ದನಿ ಎತ್ತಬೇಕಿದೆ.

ಕಾಂಗ್ರೆಸ್‌ನ ಹಾದಿಯೇನು?




ಕಾಂಗ್ರೆಸ್ ಅಧ್ಯಕ್ಷ, ಕಾರ್ಯಾಧ್ಯಕ್ಷರನ್ನು ನೇಮಿಸಿ ಚುನಾವಣೆಗೆ ಸಿದ್ಧತೆ ಆರಂಭಿಸಿರುವ ಕಾಂಗ್ರೆಸ್ ರಾಜ್ಯದಲ್ಲಿ ಕೋಮುವಾದಿ ಬಿಜೆಪಿಯನ್ನು ಸೋಲಿಸುವ ದಿಕ್ಕಿನಲ್ಲಿ ಕಾರ್ಯವೆಸಗುವುದೇ? ಎಂಬುದು ಜನತೆಯ ಪ್ರಶ್ನೆ. ಆದರೆ ನೂತನ ಅಧ್ಯಕ್ಷ ಆರ್.ವಿ.ದೇಶಪಾಂಡೆಯವರು ಸಂಘದ ಸ್ವಯಂ ಸೇವಕ ರಾಮಚಂದ್ರಾಪುರ ಮಠಾಧೀಶನ ಕಾಲಿಗೆ ಬಿದ್ದಿದು ಅಲ್ಲದೇ ಗೋಕರ್ಣ ದೇವಸ್ಥಾನವನ್ನು ಅಕ್ರಮವಾಗಿ ನೀಡಿದ ಸರ್ಕಾರದ ಕ್ರಮವನ್ನು ಹಿಂದಿನ ನಿಲುವಿಗೆ ವಿರುದ್ಧವಾಗಿ ಸ್ವಾಗತಿಸಿದ್ದು ಅದರ ಸಾಫ್ಟ್ ಹಿಂದುತ್ವದ ಬಗ್ಗೆ ಅನುಮಾನ ಹೆಚ್ಚುವಂತೆ ಮಾಡಿದೆ. ಕಾಂಗ್ರೆಸ್‌ನಿಂದ ಸ್ಪಷ್ಟನೆ ಬಂದೀತೇ?

ಅಂತೂ ಕರ್ನಾಟಕದ ಕಾಂಗ್ರೆಸ್‌ಗೆ 'ದಂಡ' ನಾಯಕರನ್ನು ಹೈಕಮಾಂಡ್ ನೇಮಿಸಿದೆ. ಮುಳುಗೇಳುತ್ತಿರುವ ಕಾಂಗ್ರೆಸ್‌ನ ಹಡಗಿಗೆ ಮಾಜಿ ಸಚಿವ ಆರ್.ವಿ.ದೇಶಪಾಂಡೆ ಅಧ್ಯಕ್ಷ ಹಾಗೂ ಡಿ.ಕೆ.ಶಿವಕುಮಾರ್ ಕಾರ್ಯಾಧ್ಯಕ್ಷ, ಈ ನೇಮಕಾತಿಯು ಕಾಂಗ್ರೆಸ್‌ನ ಹಡಗಿಗೆ ತೇಲುವ ಬೆಂಡೋ ಮುಳುಗಿಸುವ ಗುಂಡೋ ಎಂದು ಲೆಕ್ಕಾಚಾರ ಹಾಕುವುದು, ಊಹಾಪೋಹಗಳನ್ನು ತೇಲಿಬಿಡುವುದು ನಮ್ಮ ಕೆಲಸವಲ್ಲ. ಅದು ಅವರ ಆಂತರಿಕ ವಿಚಾರ, ಅವರ ಹೈಕಮಾಂಡ್‌ನ ನಿರ್ಧಾರ. ಖಾಲಿಯಾಗಿದ್ದ ಕಾಂಗ್ರೆಸ್ ಹುದ್ದೆಗೆ ಯಾರನ್ನು ನೇಮಿಸಬೇಕೆಂಬ ಬಗ್ಗೆ ತೀವ್ರ ಪೈಪೋಟಿಯೂ ನಡೆದಿತ್ತು. ಮುಂಬರುವ ರಾಜಕೀಯ ಬೆಳವಣಿಗೆಗಳಲ್ಲಿ ಯಾರನ್ನು ನೇಮಿಸಿದರೆ ಸೂಕ್ತ ಎಂಬ ಹೈಕಮಾಂಡ್‌ನ ಸಂಶೋಧನೆಯು ತೀವ್ರ ಭಿನ್ನಾಭಿಪ್ರಾಯಗಳನ್ನು ಬಯಲಿಗೆ ತಂದಿತ್ತು.

ಮಾನದಂಡಗಳು

ಕರ್ನಾಟಕ ಪ್ರದೇಶ ಕಾಂಗ್ರೆಸ್‌ಗೆ ಅಧ್ಯಕ್ಷರ ಆಯ್ಕೆಯಲ್ಲಿ ಮತಗಳಿಕೆಯ ಲೆಕ್ಕಾಚಾರವೂ, ಅನಿವಾರ್ಯ ಅಗತ್ಯವಾದರೆ ಇತರರ ಜೊತೆ ಹೊಂದಿಕೊಂಡು ಹೋಗುವ ಅಂಶವೂ, ಒಂದು ಸಂದರ್ಭ ಏರ್ಪಟ್ಟರೆ ಜೆಡಿ(ಎಸ್)ನೊಂದಿಗೆ ಕೈ ಜೋಡಿಸುವ ವಿಚಾರವೂ ಮುಖ್ಯವಾಗಿತ್ತೆಂದು ವಾದ ಮಂಡಿಸುವವರು ಇದ್ದಾರೆ. ಇದರೊಂದಿಗೆ 'ಸಂಪನ್ಮೂಲ' ವ್ಯಕ್ತಿಯಾಗಿರುವುದು ಆಯ್ಕೆಗೆ ಅನಿವಾರ್ಯವೆಂದೂ ಹೇಳುವವರು ಇದ್ದಾರೆ.





ಇವು ಆಯಾ ಪಕ್ಷದವರು 'ಚಿಂತಿಸ'ಬೇಕಾದ ವಿಷಯಗಳು, ಈ ಹಾಗೂ ಇಂತಹ ಪಕ್ಷಗಳಲ್ಲಿ ಪದಾಧಿಕಾರಿ 'ನೇಮಿಸಲು' ಇವೆಲ್ಲ ಮಾನದಂಡಗಳು ಅನಿವಾರ್ಯವಾಗಿದೆ ಎಂದೇ ನಂಬಿಸಲಾಗುತ್ತದೆ. ಮಾತ್ರವಲ್ಲ ಜಾತಿ, ಲೆಕ್ಕಾಚಾರ, ಬಲಾಬಲಗಳ ಎಣಿಕೆಯೂ ಇದೆ. ಹೀಗಾಗಿ ಅಧಕ್ಷರೊಂದಿಗೆ ಹೊಸದಾಗಿ ಕಾರ್ಯಾಧ್ಯಕ್ಷರನ್ನು ನೇಮಿಸಿರುವಾಗಲೇ ಮುಂದೆ ರಾಜ್ಯದಲ್ಲಿ ಕಾಂಗ್ರೆಸ್‌ನ ಪಾತ್ರ ಏನು? ಹೇಗೆ ಎಂಬುದು ಮುಖ್ಯ ಪ್ರಶ್ನೆಯಾಗಿದೆ.

ತುಟಿಯ ಹಿಂದೆ ಹಲ್ಲು ಮಸೆತ

ರಾಜ್ಯದಲ್ಲಿ ಪ್ರಥಮಬಾರಿಗೆ ಕೋಮುವಾದಿ ಬಿಜೆಪಿ ಅಧಿಕಾರ ಹಿಡಿದಿದೆ. ಜನಾದೇಶ 'ಹಿಂದುತ್ವ' ಕ್ಕೆ ಅಲ್ಲವಾಗಿರುವುದರಿಂದ ಅದು 'ಅಭಿವೃದ್ಧಿ'ಯ ನಾಟಕೀಯ ಮಾತುಗಳನ್ನಾಡುತ್ತಾ ಜನರ ಕಣ್ಣಿಗೆ ಮಣ್ಣೆರಚಲು ಯತ್ನಿಸುತ್ತಿದೆ. ಆದರೆ ಅಂತರಂಗದೊಳಗೆ ಕುದಿಯುತ್ತಿರುವ ಕೋಮುವಾದಿ ಫ್ಯಾಸಿಸ್ಟ್ ವಿಷವನ್ನು ಕಕ್ಕದೇ ಇರಲೂ ಅದಕ್ಕೆ ಸಾಧ್ಯವಾಗದೇ ಇರುವುದರಿಂದ 'ಅದಕ್ಕೆ ಗುಜರಾತ್ ಮಾದರಿ'ಯೆಂದೂ ಅದೇ 'ಪ್ರಗತಿಯ ಮಹಾಹೆದ್ದಾರಿ' ಎಂದೆಲ್ಲಾ ಹೇಳುತ್ತಾ ತಿರುಗುತ್ತಿದೆ. ಆದರೆ 'ನೂರು ದಿನಗಳ' ಸಂಭ್ರಮಾಚಾರಣೆಗೆ ತೆರೆ ಬೀಳುತ್ತಿರುವಂತೆಯೇ ತುಟಿಯ ಹಿಂದೆ ಮಸೆಯುತ್ತಿದ್ದ ಅದರ ಹಲ್ಲುಗಳು ಹೊರಚಾಚಿವೆ. ರಾಜ್ಯದಲ್ಲಿ ಬಹುಮತ ಪೂರ್ಣ ಪಡೆಯಲು ಕಾಂಗ್ರೆಸ್-ಜೆಡಿ(ಎಸ್)ನಂತಹ ಪಕ್ಷಗಳಿಗೆ ಶಾಸಕರನ್ನು ರಾಜೀನಾಮೆ ನೀಡಿಸಿ, 'ಮತಾಂತರಕ್ಕೆ' ಮುಂದಾಗಿದೆ. ಪಕ್ಷಾಂತರವೆಂಬ 'ಮತಾಂತರದ (ಮತ ಸೆಳೆವ) ವ್ಯಾಪಾರವನ್ನು ನಾಚಿಕೆ ಇಲ್ಲದೆ ಸಮರ್ಥಿಸಿಕೊಂಡಿದೆ. ಈ ಉಪಚುನಾವಣೆ ಹಾಗೂ ಅಡ್ವಾಣಿಯನ್ನು ಪ್ರಧಾನಿಯಾಗಿಸುವ(?) ಲೋಕಸಭಾ ಚುನಾವಣೆಯಲ್ಲಿ 'ಹಿಂದುತ್ವ' ದ ಅಜೆಂಡಾವನ್ನೇ ಮೂಲವೆಂದು ಘೋಷಿಸಿರುವ ಬಿಜೆಪಿಯು ಅದನ್ನು ಸಾಕಾರಗೊಳಿಸಲೆಂದು ಇಡೀ ರಾಜ್ಯದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ, ಅವರ ಪೂಜಾ ಸ್ಥಳಗಳ ಮೇಲೆ ದಾಳಿಗಳನ್ನು ಸಂಘಟಿಸಿದೆ, ಹರಿಯಬಿಟ್ಟಿದೆ.

ರಾಜ್ಯದ ಜನತೆ ಬೆಲೆಯೇರಿಕೆ, ಆಹಾರ ವಸ್ತುಗಳ ಅಭಾವ, ಮಳೆ ಇಲ್ಲದೇ-ಬರ ಪರಿಹಾರವಿಲ್ಲದೆ ಕಂಗಾಲು, ನಿಲ್ಲದ ರೈತರ ಆತ್ಮಹತ್ಯೆಗಳು, ಕಾರ್ಷಿಕ-ಕೈಗಾರಿಕಾ ಬಿಕ್ಕಟ್ಟು ಇತ್ಯಾದಿ ಹಲವಾರು ಸಂಕಷ್ಟಗಳಲ್ಲಿ ನಲುಗುತ್ತಿರುವಾಗ ಇವು ಪ್ರಶ್ನೆಗಳೇ ಅಲ್ಲವೆಂದು ನಿರ್ಲಜ್ಜವಾಗಿ, ಕ್ರೂರತೆಯಿಂದ ಮೂಲೆಗೊತ್ತಿ ಹಾದಿ ತಪ್ಪಿಸಲು ಕೋಮುದ್ವೇಷದ ದಳ್ಳುರಿ ಹಬ್ಬಿಸುತ್ತಿದೆ. ಅತ್ಯಂತ ಯೋಜಿತವಾಗಿ, ದೊಡ್ಡ ಪ್ರಮಾಣದಲ್ಲಿ ಕ್ರೈಸ್ತರು ಹಾಗೂ ಚರ್ಚ್‌ಗಳ ಮೇಲೆ ದಾಳಿಗಳು ಸಂಯೋಜಿತವಾಗಿ ನಡೆದವು. ಸರ್ಕಾರವೂ ದಾಳಿಕೋರರನ್ನು ಶಿಕ್ಷಿಸಲು ಕಾನೂನು ಕ್ರಮವಹಿಸದೇ ಶಹಬ್ಬಾಸ್ ಗಿರಿ ನೀಡಿ, ಪ್ರೋತ್ಸಾಹಿಸಿ, ರಕ್ಷಿಸುತ್ತಿದೆ. ಇದು ಹಾಡುಹಗಲೇ ಎಳ್ಳಷ್ಟೂ ಅಳುಕಿಲ್ಲದೇ ನಡೆಯುತ್ತಿದೆ. ಇಂತಹ ಗಂಭೀರ ಸಂದರ್ಭದಲ್ಲಿ ಸೆಕ್ಯುಲರ್ ಆಗಿರುವ, ಹಾಗೆಂದು ಹೇಳಿಕೊಳ್ಳುವ ಪಕ್ಷಗಳು ಏನು ಮಾಡಬೇಕು? ಅದರಲ್ಲೂ ವಿಶೇಷವಾಗಿ ಕಾಂಗ್ರೆಸ್ ಪಕ್ಷದ ಕ್ರಮಗಳೇನು? ಕೇವಲ ಪತ್ರಿಕಾ ಹೇಳಿಕೆಗಳಿಂದಲೇ ಕೋಮುವಾದಿಗಳನ್ನು, ಕೋಮುವಾದವನ್ನು ಸೋಲಿಸಿ ಮೂಟೆಗಟ್ಟಬಹುದೇ? ನಿಯೋಗಗಳ ಭೇಟಿಗಳೇ ಸಾಕಾದೀತೇ? ಅಥವಾ ಇವಷ್ಟೂ


ಪುಟ 15 ಕ್ಕೆ


ಸಿಂಗೂರಿನಿಂದ ಟಾಟಾ ನಿರ್ಗಮನ?

ಟಾಟಾ ಮೋಟರ್ಸ್‌ನ ಅಧ್ಯಕ್ಷ ರತನ್ ಟಾಟಾ ತಮ್ಮ ನ್ಯಾನೋ ಸಣ್ಣಕಾರು ಪ್ರಾಜೆಕ್ಟನ್ನು ಸಿಂಗೂರಿನಲ್ಲಿ ನಡೆಯುತ್ತಿರುವ ವಿರೋಧ ಪಕ್ಷಗಳ ಚಳುವಳಿ ಮುಂದುವರಿಯುತ್ತಿರುವುದರಿಂದಾಗಿ ಬಂಗಾಳದಿಂದ ಹೊರಗೆ ಸ್ಥಳಾಂತರಿಸಬೇಕಾಗಿ ಬಂದಿದೆ, ಇದು ತನಗೆ ಅತ್ಯಂತ ಬೇಸರದ ನಿರ್ಣಯ ಎಂದು ಹೇಳಿರುವುದಾಗಿ ವರದಿಯಾಗಿದೆ. ಇದಕ್ಕೆ ಮೊದಲು ಅವರು ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ರವರೊಂದಿಗೆ ಚರ್ಚೆ ನಡೆಸಿದರು ಎಂದೂ ವರದಿಯಾಗಿದೆ.

ಇದಕ್ಕೆ ಮೊದಲು ಎಡರಂಗ ಸರಕಾರ ಈ ಬಗ್ಗೆ ಸೆಪ್ಟಂಬರ್ 30ರಂದು ಸರ್ವಪಕ್ಷ ಸಭೆ ಕರೆದಿತ್ತು. ಇದರಲ್ಲಿ ಎಡಪಕ್ಷಗಳಲ್ಲದೆ ಕಾಂಗ್ರೆಸ್ ಮತ್ತು ಬಿಜೆಪಿ ಭಾಗವಹಿಸಿದ್ದವು. ತೃಣಮೂಲ ಕಾಂಗ್ರೆಸ್, ಎಸ್‌ಯುಸಿಐ ಭಾಗವಹಿಸಲಿಲ್ಲ. ಇದೇನೂ ಅನಿರೀಕ್ಷಿತವಾಗಿರಲಿಲ್ಲ. ಕೈಗಾರಿಕಾ ಮಂತ್ರಿ ನಿರುಪಮ್ ಸೇನ್ ಸರಕಾರದ ಪರಿಷ್ಕೃತ ಪರಿಹಾರ ವ್ಯವಸ್ಥೆಯನ್ನು ಪ್ರಕಟಿಸಿದರು. ಈಗಾಗಲೇ ಪ್ರಕಟಿಸಿದ್ದ, ದೇಶದಲ್ಲೇ ಅತ್ಯುತ್ತಮವೆನಿಸಿದ ಪ್ಯಾಕೆಜನ್ನು ಇನ್ನಷ್ಟು ಉತ್ತಮಗೊಳಿಸಿದ ಈ ಮರುವಸತಿ ಯೋಜನೆಗೆ ಬಿಜೆಪಿ ಒಪ್ಪಿಕೊಂಡಿತು. ಆದರೆ ಕಾಂಗ್ರೆಸ್ ಎಡಬಿಡಂಗಿತನ ಮುಂದುವರೆಯಿತು.

ಸಿಂಗೂರ್ ಯೋಜನೆ ಈಗಾಗಲೇ ಬಹಳ ಜನರಿಗೆ ವಿವಿಧ ರೀತಿಗಳಲ್ಲಿ ಹಣಕಾಸಿನ ಪ್ರಯೋಜನ ತಂದಿದೆ. ಆದರೆ ಇದರ ಭವಿಷ್ಯ ಈಗ ಎಡರಂಗ ಸರಕಾರವನ್ನು ಅವಲಂಬಿಸಿಲ್ಲ ಎಂದು ನಿರುಪಮ್ ಸೇನ್ ಹೇಳಿದರು. ರಾಜ್ಯದ ಜನಗಳಿಗೆ ಬಹಳ ಪ್ರಯೋಜನಕಾರಿಯಾಗಬಹುದಾಗಿದ್ದ ಈ ಯೋಜನೆ ಅಪಾಯ





ಕ್ಕೀಡಾಗಲು ಎರಡು ಕಾರಣಗಳಿವೆ: ಒಂದು, ತೃಣಮೂಲ ಮುಖ್ಯಸ್ಥರ ಹಠಮಾರಿ ಮತ್ತು ಅಭಿವೃದ್ಧಿ-ವಿರೋಧಿ ನಿಲುವು ಹಾಗೂ ಎರಡು, ಪ್ರದೇಶ ಕಾಂಗ್ರೆಸಿನ ಎಡಬಿಡಂಗಿತನ.

ನಿರುಪಮ್ ಸೇನ್ ಹೊಸ ಪ್ಯಾಕೇಜಿನ ಪ್ರಯೋಜನಗಳನ್ನು ವಿವರಿಸಿದರು. ಹಿಂದಿನ ಪ್ಯಾಕೇಜಿನಲ್ಲಿದ್ದಂತೆ ಈ ಯೋಜನೆಗೆ ಸ್ವಾಧೀನ ಪಡಿಸಿಕೊಂಡ ಜಮೀನ ಬೆಲೆಯ 10ಶೇ. ಹೆಚ್ಚುವರಿ ಬೆಲೆಯೊಂದಿಗೆ ಈಗ 50ಶೇ. ಹೆಚ್ಚುವರಿ ಬೆಲೆ ನೀಡಲಾಗುವುದು ಎಂದು ಹೇಳಿದ ಅವರು ಇದನ್ನು ಫಲಾನುಭವಿಗಳು ತಮ್ಮದೇ ವ್ಯವಹಾರ ಆರಂಭಿಸಲು ಅಥವಾ ಈ ಪ್ರದೇಶದಲ್ಲಿ ಬೇರೆಡೆ ಭೂಮಿ ಖರೀದಿಸಲು ಬಳಸಬಹುದು ಎಂದರು.

ಮುಖ್ಯಮಂತ್ರಿಗಳು ಮಾತಾಡುತ್ತಾ ಭೂಮಿ ಕಳಕೊಂಡವರಿಗೆ ಭೂಮಿ ಹಿಂದಿರುಗಿಸುವ ಕ್ರಮ ಒಂದು ವಿಷಚಕ್ರವನ್ನೆ ಆರಂಭಿಸಬಹುದು ಎಂದರು. ಇವರಿಗೆ ಭೂಮಿ ಒದಗಿಸಲು ಬೇರೆಯವರ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಬೇಕು. ಅವರು ಎಲ್ಲಿಗೆ ಹೋಗಬೇಕು? ಸರಕಾರ ಅನಂತದವರೆಗೆ, ಬೇಸರ ಬರುವವರೆಗೆ ಭೂಮಿ ಸಾಧೀನ ಮಾಡುತ್ತಲೇ ಇರಬೇಕೇ ಎಂದು ಬೇಸರದಿಂದ ಕೇಳಿದರು. ತೊಂದರಗೊಳಗಾದವರಿಗೆ ಪರ್ಯಾಯ ಭೂಮಿ ಒದಗಿಸುವ ಹೊಣೆಯನ್ನು ಪಂಚಾಯತು ಸಮಿತಿಗಳು ವಹಿಸಿಕೊಳ್ಳಬೇಕು ಎಂಬುದನ್ನು ಪುನರುಚ್ಚರಿಸಿದ ಅವರು ಈ ರೀತಿ ಕೇಳುತ್ತಿರುವವರ ಸಂಖ್ಯೆ ಇಳಿಮುಖವಾಗುತ್ತಿದೆ, ಎಡರಂಗದ ವಿರುದ್ಧ ರಾಜಕೀಯ ದುರುದ್ದೇಶ ಇರುವ ಕೆಲವರು ಮಾತ್ರ ಉಳಿದುಕೊಂಡಿದ್ದಾರೆ ಎಂದು ಅವರು ಹೇಳಿದರು. ಕೇಂದ್ರದ ಕಾಂಗ್ರೆಸ್ ನೇತೃತ್ವದ ಸರಕಾರ ಚರ್ಚೆಗೆಂದು ಮುಂದಿಟ್ಟಿರುವ ಮಸೂದೆಯಲ್ಲಿ ಸ್ವಾಧೀನ ಪಡಿಸಿಕೊಂಡ ಭೂಮಿಗೆ ಪ್ರತಿಯಾಗಿ ಭೂಮಿಯನ್ನು ಪರಿಹಾರವಾಗಿ ಕೊಡುವ ಬಗ್ಗೆ ಏನೂ ಹೇಳಿಲ್ಲ ಎಂಬುದನ್ನು ಗಮನಿಸಬೇಕು ಎಂದೂ ಅವರು ಹೇಳಿದರು.

ಸರ್ವ ಪಕ್ಷ ಸಭೆ ಸಿಂಗೂರ್ ಯೋಜನೆಯ ಭವಿಷ್ಯದ ಬಗ್ಗೆ ಆತಂಕ ವ್ಯಕ್ತಪಡಿಸಿತು. ಅಲ್ಲಿನ ಜನಗಳಿಗೂ ಆತಂಕವಾಗಿದೆ ಎಂದು ವರದಿಯಾಗಿದೆ.

ಹೋಗಪ್ಪ, ನೀನೂ ಇದೀಯಾ...

ಮಗ: ಅಪ್ಪ, ಇವತ್ತು ಪೇಪರ್ ಬಂದಿಲ್ವಾ?

ಅಪ್ಪ: ಬಂದಿದೆಯಲ್ಲೋ ಮಗು,

ಮಗ: ಇಲ್ಲಪ್ಪ, ಇದು ನಿನ್ನೇದು.

ಅಪ್ಪ: ಇಲ್ಲ ಮಗು ಇದು ಇವತ್ತಿನದು.

ಮಗ: ಇಲ್ಲಪ್ಪ, ನೋಡು ಚರ್ಚ್‌ಗಳ ಮೇಲೆ ಮುಂದುವರೆದ ಧಾಳಿ, ಗಣಪತಿ ವಿಸರ್ಜನೆ ಸಮಯದಲ್ಲಿ ಕಲ್ಲು ತೂರಾಟ, ಗಲಭೆ, ವಿರೋಧ ಪಕ್ಷದ ಕೈವಾಡ ಎಂದು ಮುಖ್ಯಮಂತ್ರಿ ಹೇಳಿಕೆ, ಇದೆಲ್ಲ ನಿನ್ನೆಯ ಸುದ್ದಿಗಳು ತಾನೆ?

ಅಪ್ಪ: ಹೌದು ಮಗು, ನಾಕ್ಕೈದು ದಿನದಿಂದ ಇದೇ ಸುದ್ದಿಗಳು.

ಮಗ: ಚರ್ಚ್‌ಗಳ ಮೇಲೆ ನಡೆದಿರುವ ಸಣ್ಣ ಮಟ್ಟ ದಾಳಿಯನ್ನೇ ದೊಡ್ಡದೆಂದು ಬಿಂಬಿಸುತ್ತ ಕಡ್ಡಿಯನ್ನೇ ಗುಡ್ಡ ಮಾಡುವ ಕೃತ್ಯದಲ್ಲಿ ವಿರೋಧ ಪಕ್ಷಗಳು ತೊಡಗಿವೆ ರಾಜ್ಯದ ಯಾವುದೇ ಚರ್ಚ್‌ಗಳ ಮೇಲೆ ಧಾಳಿಯೇ ನಡೆದಿಲ್ಲ ಎಂದು ಬಿಜೆಪಿ ಶಾಸಕ ಸಿ ಟಿ ರವಿಯವರು ಹೇಳಿದ್ದಾರಲ್ಲ.

ಅಪ್ಪ: ಹೌದು ಮಗು.

ಮಗ: ಅಂದರೆ ಗುಜರಾತ್ ಮಾದರಿಯನ್ನು ನೆನೆದರೆ ಇವಿನ್ನೂ ಸಣ್ಣ ಮಟ್ಟ ದಾಳಿಗಳು, ಇದಿನ್ನೂ ಆರಂಭದ ಜಲಕ್ ಮಾತ್ರ, ಹಂಡ್ರಡ್ ಡೇಸ್ ಸೆಲಬ್ರೇಷನ್ನು, ಮುಂದೆ ಇನ್ನೂ ಒಳ್ಳೊಳ್ಳೆ ಸೀನಿದೆ ಅಂತ ಅರ್ಥನಾ?

ಅಪ್ಪ: ಗೊತ್ತಿಲ್ಲ ಮಗು.

ಮಗ: ಅಪ್ಪ, ಕಾಂಗ್ರೆಸ್ ಗಜಗರ್ಭಕ್ಕೆ ನಾರ್ಮಲ್ ಡೆಲಿವರಿ ಆಗಿ ಅವಳಿ ಜವಳಿ ಅಧ್ಯಕ್ಷರಂತೆ.

ಅಪ್ಪ: ಏನೋ ಹಾಗಂದರೆ?

ಮಗ: ಡಿಕೇಶಿ ಕಾರ್ಯಾಧ್ಯಕ್ಷ, ದೇಶಪಾಂಡೆ ಸುಮ್ಮನೇ ಅಧ್ಯಕ್ಷರಂತೆ.

ಅಪ್ಪ: ಪಾಪ ಸಿದ್ದರಾಮಯ್ಯ ಶಾನೆ ಬೇಜಾರ್ ಮಾಡ್ಕಂಡಿರ್ಬೋದು. ಹೀಗೆ ನಾರ್ಮಲ್ ಡೆಲಿವರಿ ಆಗುತ್ತೆ ಅಂತ ಗೊತ್ತಿದ್ದಿದ್ದರೆ ಆಪರೇಷನ್ ಕಮಲ ಮಾಡುಸ್ಕೋಬೋದಾಗಿತ್ತು ಅಂತ. ಈಗ ಆಪರೇಷನ್ ಮಾಡುಸ್ಕೊಂಡ್ರೆ ಪ್ರಯೋಜನ ಇಲ್ಲ ಬಿಡು. ಯಾವ ಸ್ಥಾನ ಮಾನಾನೂ ಖಾಲಿ ಇದ್ದಂಗಿಲ್ಲ.

ಮಗ: ಹೌದಪ್ಪ, ಸುಮ್ಮನೇ ಅವರನ್ನೂ 'ವಲಸೆ ಅಧ್ಯಕ್ಷ' ಇನ್ನೊಂದು ಅಧ್ಯಕ್ಷ ಮಾಡಬಹುದಾಗಿತ್ತು, ಇದರಿಂದ ಮೂಲ (ನಿವಾಸಿಗಳ) ವ್ಯಾಧಿಗೆ ಅಂಥಾ ತೊಂದರೆಯೇನೂ ಆಗುತ್ತಿರಲಿಲ್ಲವೇನೋ? ಬಿಜೆಪಿಯಲ್ಲಿ ನೋಡಿ ಪಕ್ಷಾಂತರಿಗಳಿಗೆ ಎಂಥ ಶ್ರೇಷ್ಠ ಸ್ಥಾನ ಮಾನ ಕೊಟ್ಟಿದ್ದಾರೆ. ಆದರೆ ಅವರಿಗೆ ಮತಾಂತರ ಅಂದರೆ ಯಾಕೆ ಅಷ್ಟು ಹೆದರಿಕೆ?

ಅಪ್ಪ: ಹೋಗಲಿ ಬಿಡು ಮಗು ನಮಗ್ಯಾಕೆ ಆ ವಿಚಾರ?

ಮಗ: ಅಣು ಒಪ್ಪಂದದ ವಿಲ್ ಗೆ ಸೈನ್ ಹಾಕೇ ಬರ್ತೀನಿ ಅಂತ ನಮ್ಮ ಪ್ರಧಾನ ಮಂತ್ರಿಯವರು ಪೆನ್ನಿನ ಮುಚ್ಚಳ ತೆಗೆದುಕೊಂಡೇ ಹೋಗಿ ಅಮೆರಿಕದಲ್ಲಿ ಠಿಕಾಣಿ ಹೂಡಿದರಲ್ಲ?

ಅಪ್ಪ: ಉಪಯೋಗ ಇಲ್ಲ ಬಿಡು!

ಮಗ: ಏನಪ್ಪ , ಯಾಕೇ?

ಅಪ್ಪ: ಅಣು ಒಪ್ಪಂದಕ್ಕೆ ಸಹಿ ಅಲ್ಲ ಹೆಬ್ಬೆಟ್ಟು ಒತ್ತಿಸಿಕೊಳ್ಳೋದು.

ಮಗ: ಅಮೆರಿಕದ ಬಿಲ್ಡಿಂಗ್ ಭಯೋತ್ಪಾದಕರು ಬೀಳಿಸಿದರು. ಈಗ ಅಲ್ಲಿಯ ದೊಡ್ಡ ದೊಡ್ಡ ಭಂಡವಾಳ ಸಂಸ್ಥೆಗಳು ಉರುಳಿ ಹೋಗುತ್ತಿವೆಯಲ್ಲ ಯಾರು ಉರುಳಿಸಿದ್ದು?

ಅಪ್ಪ: ವಿಪರ್ಯಾಸ ಅಂದ್ರೆ ಅದೇ ನೋಡು, ಈಗ ಆ ಭಂಡವಾಳಿಗರನ್ನು ಉಳಿಸಲು ಸಮಾಜವಾದ ಬೇಕಾಗಿದೆಯಂತೆ?

ಮಗ: ಅದ್ರೇ ಶಂಕರ ಮೂರ್ತಿಯವರು ಸಮಾಜವಾದದಿಂದಲೇ ದೇಶ ಹಾಳಾಗಿರೋದು ಅಂತ ಹೇಳಿದಾರಲ್ಲ?

ಅಪ್ಪ: ಕೆಟ್ಟಮೇಲೆ ಬುದ್ಧಿ ಬರುತ್ತೆ ಅಂತಾರೆ, ಆದರೆ ಬುದ್ಧಿ ಬರಲು ತೀರಾ ಅಮೇರಿಕದಷ್ಟು ಕೆಡಬೇಕೆ?

ಮಗ: ಅದೆಲ್ಲ ಹೋಗ್ಲಿ ಬಿಡು, ನಿನ್ನ ಹೆಸರಿಗೆ ಯಾವ ಊರು ಇದೆ? ಹೇಳು.

ಅಪ್ಪ: ಇದೇನೋ ಮಗು? ನನ್ನ ಹೆಸರಿಗೆ ಯಾವ ಊರು ಇರುತ್ತೆ? ನಾವು ಒಂದು ಊರಿನಲ್ಲಿ ಇರುವುದಲ್ಲವೇ?

ಮಗ: ಹೋಗ್ಲಿ ನಿನ್ನ ಹೆಸರಿನಲ್ಲಿ ಒಂದಷ್ಟು ದೇವಸ್ಥಾನಗಳಾದ್ರೂ ಇಲ್ವೇ?

ಅಪ್ಪ: ಏನೋ ಮಗು? ನನ್ನ ಹೆಸರಿನಲ್ಲಿ ಹೊಲ ಗದ್ದೆ, ಮನೆ ಏನೂ ಇಲ್ಲ ಅಂಥಾದ್ರಲ್ಲಿ ದೇವಸ್ಥಾನ ಹೇಗೆ ನನ್ನ ಹೆಸರಿಗೆ ಇರುತ್ತೆ?

ಮಗ: ಹೋಗಪ್ಪ, ನೀನು ಏನೂ ಉಪಯೋಗ ಇಲ್ಲ, ನೋಡು ಆ ರಾಘವೇಶ್ವರ ಅವರ ಅಪ್ಪ ಮಗನಿಗಾಗಿ ಗೋಕರ್ಣದಲ್ಲಿ. ಎಷ್ಟೊಂದು ದೇವಸ್ಥಾನಗಳನ್ನು ಮಾಡಿಟ್ಟು ಹೋಗಿದ್ದಾನೆ, ನೀನೂ ಇದೀಯ....,

ಅಪ್ಪ: ಆದ್ರೆ ಏನು ಬಂತು ಪ್ರಯೋಜನ?

ಮಗ: ಏನಪ್ಪ ಹೀಗಂತೀಯ?

ಅಪ್ಪ: ಹ್ಹೂಂ.., ಮತ್ತಿನ್ನೇನು? ಅವರಪ್ಪನ ಆಸ್ತಿ ಅಂತ ಗೋಕರ್ಣ ದೇವಸ್ಥಾನ ತನ್ನ ಹೆಸರಿಗೆ ಮಾಡಿಕೊಂಡರೂ, ಇವರ ನಂತರ ಇವರ ಆಸ್ತಿ ಅನುಭವಿಸಲು ಇವರ ವಂಶೋದ್ಧಾರಕರಿಲ್ವೇ? ಕಡೆಗೆ ಅವರಪ್ಪನ ಆಸ್ತಿ, ಯಾವುದೋ ಮಠ ಸೇರುತ್ತೆ.

ಮಗ: ಮುಂದೇನೋಗುತ್ತೊ ಯಾರಿಗೊತ್ತಪ್ಪ? ಈ ಸ್ವಾಮೀಜೀನೇ ನಮ್ಮಪ್ಪ ಅಂತ ಯಾವ ಮಗ ಆ ಆಸ್ತೀನ ಹೊಡಕೋತಾನೋ?

ಅಪ್ಪ: ಹೌದು ಮಗು ಕಲಿಯುಗ! ಅಲ್ಲಿ ನೋಡು, ಬೆಂಗಳೂರು ವಿ ವಿ ಯಲ್ಲಿ ಖಾಲಿ ಪೇಪರ್ ಕೊಟ್ಟವರೂ ಪಾಸಂತೆ!

ಮಗ: ಅದೇನು ಮಹಾ ಬಿಡಪ್ಪ, ನೆಗೆಟೀವ್ ಅಂಕಗಳನ್ನು ತಗೊಂಡೋರು ರಾಜ್ಯಾನೇ ಆಳ್ತಿಲ್ವೇ?

ಅಪ್ಪ: ಗುಲ್ಬರ್ಗ ಜಿಲ್ಲೆ ವಿಭಜಿಸಿ ಯಾದಗಿರಿ ಜಿಲ್ಲೆ ರಚನೆ ಮಾಡಿದರಂತೆ. ಬೆಳಗಾವಿ ಜಿಲ್ಲೆಯನ್ನೂ ವಿಭಜಿಸಿ ಹೊಸ ಜಿಲ್ಲೆ ಮಾಡ್ತರಂತೆ.

ಮಗ: ಅಯ್ಯೋ, ಅದೇನ್ ಮಹಾ ಬಿಡಪ್ಪ, ಸಮಾಜವನ್ನೇ ವಿಭಜಿಸುವವರಿಗೆ ಇದ್ಯಾವ ಲೆಕ್ಕ?

ಅಪ್ಪ: ಪ್ರಾಣಿಗಳಿಗೆ ಹೆದರುವುದಿಲ್ಲ ಅಂತ ಮುಖ್ಯ ಮಂತ್ರಿಯವರು ದಸರಾ ಘೋಷಣೆ ಮಾಡಿದ್ದಾರಲ್ಲ.

ಮಗ: ಮನುಷ್ಯರು ಮಾತ್ರ ತಾನೆ ಪ್ರಾಣಿಗಳಿಗೆ ಹೆದರುವುದು?

ಶ್ರೀ

ನಮ್ಮ ಶೋಭಕ್ಕನವರು ಗೋಕರ್ಣದ ಆಸ್ತಿಯು ರಾಘವೇಶ್ವರರ ಹೆಸರಿಗೆ ನೋಂದಣಿ ಆಗಿಲ್ಲ ಎನ್ನುತ್ತಾರೆ. ಆದರೆ ದಾಖಲೆಗಳು ಏನು ಹೇಳುತ್ತವೆ?

ಗೋಕರ್ಣದ ಆಸ್ತಿ ರಾಘವೇಶ್ವರ ಹೆಸರಿಗೆ

ಗೋಕರ್ಣ ಶ್ರೀ ಸಂಸ್ಥಾನ ಮಹಾಬಲೇಶ್ವರ ದೇವಸ್ಥಾನದ ಆಡಳಿತ, ಕಾಣಿಕೆ ಡಬ್ಬಗಳಲ್ಲದೆ ಸ್ಥಿರ ಆಸ್ತಿಯನ್ನೂ ತನ್ನ ಹೆಸರಿಗೆ ಶ್ರೀರಾಘವೇಶ್ವರ ಭಾರತೀ ಸ್ವಾಮೀಜಿ ವರ್ಗಾಯಿಸಿಕೊಂಡಿದ್ದಾರೆ. ಪುರಾಣ ಪ್ರಸಿದ್ಧ ಗೋಕರ್ಣದ ಶ್ರೀ ಸಂಸ್ಥಾನ ಮಹಾಬಲೇಶ್ವರ ದೇವಸ್ಥಾನಕ್ಕೆ ಸಂಬಂಧಪಟ್ಟ ಎಲ್ಲಾ ಸ್ಥಿರಾಸ್ತಿಗಳನ್ನು ಶ್ರೀರಾಮಚಂದ್ರಾಪುರ ಮಠದ ಪೀಠಾಧಿಪತಿಗಳಾದ ಶ್ರೀ ಶ್ರೀ ರಾಘವೇಶ್ವರ ಸ್ವಾಮೀಜಿಯವರು ತಮ್ಮ ಹೆಸರಿನಲ್ಲಿ ನೋಂದಾಯಿಸಿಕೊಂಡಿದ್ದಾರೆ ಎಂಬ ಸತ್ಯ ಈಗ ದಾಖಲೆ ಸಹಿತ ಬಹಿರಂಗಗೊಂಡಿದೆ.

ಶ್ರೀ ಮಹಾಬಲೇಶ್ವರ ದೇವಸ್ಥಾನವನ್ನು ಸರ್ಕಾರವು ಕಾಯ್ದೆ, ಕಾನೂನುಗಳನ್ನು ಗಾಳಿಗೆ ತೂರಿ ಶ್ರೀ ರಾಮಚಂದ್ರಪುರ ಮಠಕ್ಕೆ ಹಸ್ತಾಂತರ ಮಾಡಿದ್ದು, ಅತ್ಯಂತ ದುರದೃಷ್ಟಕರ ಸಂಗತಿ ಎಂಬ ಬಗ್ಗೆ ಎಲ್ಲೆಡೆ ಚರ್ಚೆ ನಡೆಯುತ್ತಿರುವಾಗಲೇ ಈ ಒಂದು ಕೃತ್ಯ ಅಚ್ಚರಿ ಹಾಗೂ ಆಘಾತ ಉಂಟು ಮಾಡಿದೆ. ಸರ್ಕಾರವು ದೇವಸ್ಥಾನದ ಆಡಳಿತವನ್ನು ಮಾತ್ರ ನಿರ್ವಹಣೆ ಬಗ್ಗೆ ಶ್ರೀ ಮಠಕ್ಕೆ ವಹಿಸಿಕೊಟ್ಟಿರುವಾಗ, ದೇವಸ್ಥಾನದ ಸಂಪೂರ್ಣ ಸ್ಥಿರ ಆಸ್ತಿಗಳನ್ನು ಗೋಕರ್ಣ ಗ್ರಾಮದ ಎಂ.ಆರ್. ನಂ.69/08-09 ದಿನಾಂಕ:02.09.2008ರಂತೆ ರಾಘವೇಶ್ವರ ಸ್ವಾಮೀಜಿಯವರು ತಮ್ಮ ಹೆಸರಿಗೆ ವರ್ಗಾಯಿಸಿಕೊಂಡಿರುವುದು ನಿಜಕ್ಕೂ ವಿಷಾದನೀಯ.

ದೇವಸ್ಥಾನದ ಆಡಳಿತ ನಿರ್ವಹಣೆಗೆ ಕೊಡುವುದಕ್ಕೂ, ಈ ಕ್ರಮಕ್ಕೂ ತುಂಬಾ ವ್ಯತ್ಯಾಸವಿದೆ. ದೇವಸ್ಥಾನದ ಹಕ್ಕು ಸ್ವಾಮ್ಯ ಸಾರ್ವತ್ರಿಕವಾಗಿದ್ದು, ಅದು ಯಾರೊಬ್ಬರ ಹೆಸರಿಗೆ ಅಥವಾ ಒಂದು ಮಠದ ಹೆಸರಿಗೆ ಕಾನೂನುಬಾಹಿರವಾಗಿ ನೀಡಿದ್ದು ಅಕ್ಷಮ್ಯ ಅಪರಾಧ.

ಎಲ್ಲಾ ಕಾನೂನು ಗಾಳಿಗೆ ತೂರಿ ತರಾತುರಿಯಿಂದ ಶ್ರೀ ದೇವಸ್ಥಾನದ ಆಸ್ತಿಯನ್ನು ಸ್ವಾಮೀಜಿಯವರು ತಮ್ಮ ಹೆಸರಿನಲ್ಲಿ ಮಾಡಿಕೊಂಡ ಕ್ರಮ ಬಹುಶಃ ಕಂದಾಯ ಇಲಾಖೆಯ ಇತಿಹಾಸದಲ್ಲೇ 'ವಿಶಿಷ್ಟ' ಉದಾಹರಣೆಯಾಗಿರಬಹುದು. ಸರ್ಕಾರದ ಆದೇಶಕ್ಕೆ ಸಂಬಂಧಪಟ್ಟಂತೆ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆಗೆ ಬಾಕಿ ಇರುತ್ತದೆ. ಹಾಗೂ ಹಸ್ತಾಂತರಕ್ಕೆ ವಿರೋಧಿಸಿದವರು ನ್ಯಾಯಾಲಯದ ಮೆಟ್ಟಿಲೇರಿರುವ ಈ ಸಂದರ್ಭದಲ್ಲಿ ಮ್ಯುಟೇಷನ್ ಎಂಟ್ರಿ ಮಂಜೂರಿ ಪೂರ್ವ ಈ ಬಗ್ಗೆ ಹಿತಾಸಕ್ತಿಯುಳ್ಳವರಿಗೆ ಯಾವುದೇ ನೋಟೀಸ್ ನೀಡದೆ ಏಕಪಕ್ಷೀಯವಾಗಿ ಕ್ರಮ ಕೈಗೊಂಡ ರೀತಿ ಜೀವಂತ ಕಾನೂನನ್ನು ಸರ್ಕಾರವೇ ಶೂಲಕ್ಕೇರಿಸಿದಂತಿದೆ. ಯಾವುದೇ ನ್ಯಾಯಾಲಯದ ಆದೇಶ ಇಲ್ಲದೇ ಇದ್ದರೂ ಸಹ ಮ್ಯುಟೇಷನ್ ಎಂಟ್ರಿಯಲ್ಲಿ ನ್ಯಾಯಾಲಯದ ಆದೇಶ ಎಂಬ ಪದವನ್ನು ಉಪಯೋಗಿಸಿ, ಕಂದಾಯ ಇಲಾಖೆಯವರು ಕಾನೂನನ್ನು ಉಲ್ಲಂಘಿಸಿ, ಸುಳ್ಳು ಸೃಷ್ಟಿ ಮಾಡಿಕೊಂಡು ನ್ಯಾಯಾಲಯದ ಮೇಲೆ ಸವಾರಿ ಮಾಡಿದ್ದಾರೆ. ಯಾವುದೇ ಮಠಾಧೀಶರು ಸಮಾಜಕ್ಕೆ ತಮ್ಮ ಕೊಡುಗೆಯನ್ನು ನೀಡಬೇಕೆ ವಿನಃ ಸಾರ್ವಜನಿಕ ಸ್ವತ್ತನ್ನು ತಮ್ಮದಾಗಿಸಿಕೊಂಡು ತಮ್ಮ ಸ್ವಾರ್ಥವನ್ನು ಸಾಧನೆ ಮಾಡಿಕೊಳ್ಳುವುದು ಅತ್ಯಂತ ಖೇದನೀಯವಾಗಿರುತ್ತದೆ.





ಈ ಹಿಂದೆ ನಡೆದುಕೊಂಡು ಬಂದಂತೆ ಪಹಣಿ ಪತ್ರಿಕೆಗಳಲ್ಲಿ ಶ್ರೀ ಮಹಾಬಲೇಶ್ವರ ದೇವ ಗೋಕರ್ಣ, ನಿಷ್ಪತ್(Reported by) ಎಂದು ದಾಖಲಾಗುತ್ತಿತ್ತೇ ವಿನಃ ಯಾವತ್ತೂ ಯಾರೂ ತಮ್ಮ ಸ್ವಂತ ಆಸ್ತಿಯಂತೆ ನೋಂದಾಯಿಸಿಕೊಂಡಿರುವುದಿಲ್ಲ. ಆದರೆ ಈಗ ಹಿಂದಿನವುಗಳೆಲ್ಲವನ್ನೂ ಗಾಳಿಗೆ ತೂರಿ 15 ದಿನಗಳೊಳಗಾಗಿ ನೇರವಾಗಿ ಮಹಾಬಲೇಶ್ವರ ದೇವರ ಆಸ್ತಿಯನ್ನು ತಮ್ಮ ಹೆಸರಿಗೆ (ಶ್ರೀ ಮಹಾಬಲೇಶ್ವರ ದೇವ, ಗೋಕರ್ಣ, ಶ್ರೀ ಶ್ರೀ ಶ್ರೀ ಶ್ರೀಮಂತ್ ರಾಘವೇಶ್ವರ ಭಾರತೀ ಮಹಾಸ್ವಾಮೀಜಿ ಪೀಠಾಧಿಪತಿಗಳು ಶ್ರೀ ಸಂಸ್ಥಾನ ಗೋಕರ್ಣ, ಶ್ರೀ ರಾಮಚಂದ್ರಪುರ ಮಠ) ನೋಂದಾಯಿಸಿಕೊಂಡಿರುವುದು ಸರ್ಕಾರದ ಆದೇಶ ಹಾಗೂ ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಜನಸಾಮಾನ್ಯರಿಗೆ ದಾಖಲಾತಿ ಹಕ್ಕು ಪಡೆಯಲು ಕನಿಷ್ಟ 4,5 ರ ದಿವಸಗಳ ಅವಧಿ ಅಗತ್ಯವಿದೆ ಎಂದು ಕಾಯಿದೆ, ಕಾನೂನು ಬೋಧಿಸುವ ಕಂದಾಯ ಇಲಾಖೆ ಜನ ಸಾಮಾನ್ಯರ ರಕ್ತ ಹಿಂಡುತ್ತದೆ. ಆದರೆ ಗೋಕರ್ಣ ದೇವಾಲಯದ ಆಸ್ತಿ ಹಕ್ಕಿನ ವಿಷಯದಲ್ಲಿ ಎಲ್ಲಾ ನೀತಿ ನಿಯಮಗಳನ್ನು ಗಾಳಿಗೆ ತೂರುವ ಮೂಲಕ ತೀರಾ ಅನೈತಿಕತೆ ಪ್ರದರ್ಶಿಸಿದೆ.

ಸಾರ್ವಜನಿಕವಾದ ಶ್ರೀ ಮಹಾಬಲೇಶ್ವರ ದೇವಸ್ಥಾನದ ಹಾಗೂ ಪರಿವಾರ ದೇವರ ಸ್ವತ್ತುಗಳನ್ನು ಈಗ ಕೇವಲ ಒಂದು ಮಠದ ಸ್ವತ್ತಾಗಿ ಶ್ರೀ ರಾಘವೇಶ್ವರ ಸ್ವಾಮಿ ಪರಿವರ್ತನೆ ಮಾಡಿಕೊಂಡಿದ್ದು ಅಕ್ಷಮ್ಯ ಅಪರಾಧವಾಗಿರುತ್ತದೆ. ಇದನ್ನು ಶ್ರೀ ಕ್ಷೇತ್ರ ಗೋಕರ್ಣ ರಕ್ಷಣಾ ಸಮಿತಿ ಖಂಡಿಸಿದ್ದು, ಈ ಒಂದು ಕೃತ್ಯದಲ್ಲಿ ಪಾಲ್ಗೊಂಡ ಎಲ್ಲರ ಮೇಲೂ ಅಗತ್ಯ ಕಾನೂನು ಕ್ರಮ ಕೈಗೊಂಡು ಸಾಮಾಜಿಕ ನ್ಯಾಯ ಕಾಪಾಡಬೇಕೆಂದು ಸಮಿತಿ ಆಗ್ರಹಿಸಿದೆ.

ಅಣು ಒಪ್ಪಂದ

ಸೆ. 25 ರಾಷ್ಟ್ರವ್ಯಾಪಿ ಪ್ರತಿಭಟನೆ

ಸೆಪ್ಟೆಂಬರ್ 25,2008 ರಾಷ್ಟ್ರವ್ಯಾಪಿಯಾಗಿ ವಿವಿಧ ರಾಜಕೀಯ ಪಕ್ಷಗಳು ಒಟ್ಟುಗೂಡಿ ಅಮೇರಿಕಾ-ಭಾರತಗಳ ನಡುವಿನ ಅಣು ಒಪ್ಪಂದವನ್ನು ವಿರೋಧಿಸಿ ಹಾಗೂ ದೇಶದ ವಿವಿಧ ಭಾಗಗಳಲ್ಲಿ ನಡೆದ ಚರ್ಚ್‌ಗಳ ಮೇಲಿನ ದಾಳಿ ಖಂಡಿಸಿ ಪ್ರತಿಭಟನೆ ನಡೆಸಿದರು. ಎಡಪಕ್ಷಗಳಾದ ಸಿಪಿಐ(ಎಂ), ಸಿಪಿಐ, ಫಾರ್ವರ್ಡ್ ಬ್ಲಾಕ್, ಆರ್‌ಎಸ್‌ಪಿ, ಹಾಗೂ ತೆಲುಗುದೇಶಂ, ಬಿಎಸ್‌ಪಿ, ಜನತಾದಳ(ಎಸ್) ಈ ಪಕ್ಷಗಳ ಸಂಸತ್ ಸದಸ್ಯರು ದೆಹಲಿಯಲ್ಲಿ ಸಂಸತ್ ಭವನದ ಬಳಿ ಪ್ರತಿಭಟನಾ ಪ್ರದರ್ಶನ ನಡೆಸಿದರು. ಸಿಪಿಐ(ಎಂ) ಸಂಸದರಾದ ಸೀತಾರಾಂ ಯೆಚೂರಿ, ಬೃಂದಾಕಾರಟ್ ಸಿಪಿಐನ ಗುರುದಾಸ್‌ಗುಪ್ತಾ, ಜೆಡಿ(ಎಸ್) ಸಂಸದರು ಮಾಜಿ ಪ್ರಧಾನಿಗಳೂ ಆದ ಎಚ್.ಡಿ.ದೇವೇಗೌಡ, ಟಿಡಿಪಿಯ ಯೆರ್ರಂನಾಯ್ಡು, ಬಿಎಸ್‌ಪಿ ಪಕ್ಷದ ಸಂಸದರು ಮುಂತಾದವರ ನೇತೃತ್ವದಲ್ಲಿ ಈ ಪ್ರತಿಭಟನೆ ನಡೆಯಿತು. ದೇಶವ್ಯಾಪಿಯಾಗಿ ವಿವಿಧ ರಾಜ್ಯಗಳಲ್ಲಿ ಪ್ರತಿಭಟನೆಗಳು ನಡೆದಿವೆ.

ಪ್ರತಿಭಟನೆ ಕರ್ನಾಟಕದಲ್ಲಿ

ರಾಜ್ಯದ ವಿವಿಧ ಭಾಗಗಳಲ್ಲಿ ಬೆಂಗಳೂರಿನಲ್ಲಿ ಅಣು ಒಪ್ಪಂದ ವಿರೋಧ ಪ್ರದರ್ಶನಗಳು ನಡೆದಿವೆ. ಬೆಂಗಳೂರಿನಲ್ಲಿ 25 ರಂದು ಗಾಂಧಿನಗರದ ಕಾಳಿದಾಸ ಸರ್ಕಲ್ ಬಳಿಯಿಂದ ಎಡಪಕ್ಷಗಳು ಮೆರವಣಿಗೆಗೆ ಹೊರಟು ಶೇಷಾದ್ರಿ ರಸ್ತೆ ಮಾರ್ಗವಾಗಿ ಹಳೇ ಜೈಲಿನ ಬಳಿ ಸೇರಿದರೆ, ಆನಂದರಾವ್ ವೃತ್ತದ ಬಳಿಯ ಗಾಂಧಿ ಪ್ರತಿಮೆ ಬಳಿ ಸೇರಿದ ಜೆಡಿ(ಎಸ್) ಮುಖಂಡರೂ ಕಾರ್ಯಕರ್ತರೂ ಈ ಮೆರವಣಿಗೆಯ ಜೊತೆ ಸೇರಿದರು.

ಮೆರವಣಿಗೆಯ ನಂತರ ನಡೆದ ಸಭೆಯಲ್ಲಿ ವಿವಿಧ ಪಕ್ಷಗಳ ಮುಖಂಡರು ಮಾತನಾಡಿ ಈ ಅಣು ಒಪ್ಪಂದ ಹೇಗೆ ದೇಶವಿರೋಧಿ ಎಂದು ವಿವರಿಸಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ: ವಿ.ಜೆ.ಕೆ.ನಾಯರ್ ಮಾತನಾಡಿ ಅಮೇರಿಕಾದೊಂದಿಗಿನ ಅಣು ಒಪ್ಪಂದದಂತೆ ವಿದ್ಯುತ್ ಉತ್ಪಾದನೆಗೆ ತೊಡಗಿದಲ್ಲಿ 1 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಗೆ 18 ಕೋಟಿ ವೆಚ್ಚವಾಗಲಿದೆ, ಆದರೆ 1 ಮೆಗಾವ್ಯಾಟ್ ವಿದ್ಯುತ್‌ನ್ನು 6 ಕೋಟಿ ಡಾಲರ್‌ನಲ್ಲೇ ಉತ್ಪಾದಿಸಲು ಸಾಧ್ಯ, 12 ಕೋಟಿ ಡಾಲರ್ ಉಳಿಸಬಹುದು. ಅಮೇರಿಕಾದೊಂದಿಗಿನ ಅಣು ಒಪ್ಪಂದದಿಂದ ಜನರಲ್ ಮೋಟಾರ್ಸ್‌ನಂತಹ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳು ಲಾಭ ಪಡೆಯುತ್ತಿವೆ. ಆದರೆ ನಮ್ಮ ಬಿಹೆಚ್‌ಇಎಲ್ ಮತ್ತು ಎಲ್ ಅಂಡ್ ಟಿ ಗಳಲ್ಲಿ ಹೆಚ್ಚು ಹೆಚ್ಚು ಉದ್ಯೋಗ ಸೃಷ್ಟಿಯಾಗುವಂತೆ ದೇಶೀಯವಾಗಿಯೇ ವಿದ್ಯುತ್ ಉತ್ಪಾದನೆ ಸಾಧ್ಯ ಎಂದರು.



ಮಾಜಿ ಸಂಸದರೂ ಜನತಾದಳದ ಮುಖಂಡರೂ ಆದ ಸಿ.ನಾರಾಯಣಸ್ವಾಮಿ ಯವರು ಮಾತನಾಡಿ ಭಾರತ -ಅಮೇರಿಕಾ ಅಣು ಒಪ್ಪಂದ ಭಾರತವನ್ನು ದಾಸ್ಯದ ಅಂಚಿಗೆ ತಳ್ಳುವಂಥದ್ದು ಎಂದರು.

ಪ್ರತಿಭಟನಾ ಸಭೆಯ ಅಧ್ಯಕ್ಷತೆ ವಹಿಸಿದ್ದ ಜನತಾದಳ(ಎಸ್) ರಾಜ್ಯಾಧ್ಯಕ್ಷರಾದ ಮೆರಾಜುದ್ದೀನ್ ಪಟೇಲ್ ಮಾತನಾಡಿ 100 ರೂಪಾಯಿಯಲ್ಲಿ ಆಗುವ ವಿದ್ಯುತ್ ಉತ್ಪಾದನೆ 600 ರೂಪಾಯಿ ಖರ್ಚು ಮಾಡುವಂತಹ ಒಪ್ಪಂದ ಇದು ಎಂದರು. ನಮ್ಮಲ್ಲಿ ತಂತ್ರಜ್ಞಾನ, ವಿಜ್ಞಾನ ಇದೆ. ಅದನ್ನು ಬಳಸಬೇಕು, ಬೆಳಸಬೇಕು. ದೇಶ ಸ್ವಾವಲಂಬನೆಗೆ ಸಾಧಿಸಬೇಕು. ಅದು ಬಿಟ್ಟು ಅಮೇರಿಕಾ ಸಂಚಿಗೆ ಬಲಿಯಾಗಲಾರದು ಎಂದರು. ಚರ್ಚ್‌ಗಳ ಮೇಲಿನ ದಾಳಿಗೆ

ಪುಟ 10ಕ್ಕೆ



ಕುಂದಾಪುರ

ಕುಡಿವ ನೀರಿಗೆ ಬರ ಜನರಿಗೆ ಬರೆ

ನೀರಿನ ಖಾಸಗೀಕರಣ ಕರ್ನಾಟಕ ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಅತ್ಯಂತ ತೀವ್ರವಾಗಿ ಜನಸಾಮಾನ್ಯರನ್ನು ತಟ್ಟುತ್ತಿದೆ. ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ನಡೆದ ಹೋರಾಟ, ಲಾಠಿಚಾರ್ಜ್ ನಮ್ಮ ನೆನಪಿನಿಂದ ಮಾಸಿಲ್ಲ. ಹೋರಾಟದ ಫಲವಾಗಿ ನೀರಿನ ದರ ಇಳಿಸುವ ನಾಟಕವಾಗಿ ಮಹಾನಗರಪಾಲಿಕೆ ಮಾನ ಉಳಿಸಿಕೊಳ್ಳುವ ಪ್ರಯತ್ನ ನಡೆಸಿದೆ.

ನೀರು ಬಹುರಾಷ್ಟ್ರೀಯ ಕಂಪೆನಿಗಳ ದೃಷ್ಟಿಯಲ್ಲಿ ಮುಂದಿನ ದಿನದಲ್ಲಿ ಅತ್ಯಂತ ಹೆಚ್ಚು ಲಾಭ ತರಬಲ್ಲ ಉದ್ಯಮ ಎಂದು ಈಗಾಗಲೇ ಪರಿಗಣಿಸಲ್ಪಟ್ಟಿದೆ. ಜಾಗತೀಕರಣ ಉದಾರಿಕರಣದ ಭಾಗವಾಗಿ ನೀರಿನ ಖಾಸಗೀಕರಣಕ್ಕಾಗಿ ಎಲ್ಲಾ ಸರಕಾರಗಳು ವೇಗವಾಗಿ ಧಾವಿಸುತ್ತಿದೆ.

ನೀರಿನ ಖಾಸಗೀಕರಣ ಕರ್ನಾಟಕ ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಅತ್ಯಂತ ತೀವ್ರವಾಗಿ ಜನಸಾಮಾನ್ಯರನ್ನು ತಟ್ಟುತ್ತಿದೆ. ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ನಡೆದ ಹೋರಾಟ, ಲಾಠಿಚಾರ್ಜ್ ನಮ್ಮ ನೆನಪಿನಿಂದ ಮಾಸಿಲ್ಲ. ಹೋರಾಟದ ಫಲವಾಗಿ ನೀರಿನ ದರ ಇಳಿಸುವ ನಾಟಕವಾಗಿ ಮಹಾನಗರಪಾಲಿಕೆ ಮಾನ ಉಳಿಸಿಕೊಳ್ಳುವ ಪ್ರಯತ್ನ ನಡೆಸಿದೆ.

ಕುಂದಾಪುರ ಪುರಸಭೆ ವ್ಯಾಪ್ತಿಯಲ್ಲೂ ಕೂಡಾ ನೀರು ಇಂದು ಅತ್ಯಂತ ದುಬಾರಿ ವಸ್ತುವಾಗಿದೆ. ನೀರು ಕುಡಿಯಬೇಕು, ಬಳಸಿಕೊಳ್ಳಬೇಕು ಎನ್ನುವವರೆಲ್ಲರೂ ಹಣ ಕೊಟ್ಟೇ ನೀರು ಪಡೆಯಬೇಕು ಎನ್ನುವ ಪರಿಸ್ಥಿತಿಯನ್ನು ಆಳುವ ಬಿಜೆಪಿ ಬೋರ್ಡ್ ಏರ್ಪಡಿಸಿದೆ. ಪುರಸಭೆ ಒಳಗೆ ಹುಡುಕಿದರೂ ಒಂದು ಸಾರ್ವಜನಿಕ ನಲ್ಲಿ ಇಲ್ಲದಂತೆ ಆಮೂಲಾಗ್ರವಾಗಿ ಕಿತ್ತು ಹಾಕಿದೆ.

ಸಮುದ್ರ ದಂಡೆಗೆ ತಾಗಿಕೊಂಡಿರುವ ಪುರಸಭೆ ಹಿನ್ನೀರು ಪ್ರದೇಶವನ್ನೊಳಗೊಂಡಿದೆ. ಆದ್ದರಿಂದ ಪುರಸಭೆ ವ್ಯಾಪ್ತಿಯ ಹೆಚ್ಚಿನ ಭಾಗದಲ್ಲಿ ಬಾವಿ ತೋಡಿದಾಗ ಉಪ್ಪು ನೀರು ದೊರೆಯುತ್ತದೆ. ಕುಡಿಯುವುದಕ್ಕೆ ಅಥವಾ ಇತರ ಉಪಯೋಗಕ್ಕೆ ಈ ನೀರು ಅನುಕೂಲವಾಗುವುದಿಲ್ಲ. ಈ ಹಿಂದೆ ಪುರಸಭೆ ವ್ಯಾಪ್ತಿಯೊಳಗೆ ಕುಡಿಯಲು ಯೋಗ್ಯವಾದ ನೀರು ದೊರಕುವ ಕಡೆಯಲ್ಲಿ ಪುರಸಭೆ ವೆಚ್ಚದಲ್ಲಿ ಬಾವಿ ತೋಡಿಸಿ ಆ ನೀರನ್ನು ಓವರ್ ಹೆಡ್ ಟ್ಯಾಂಕ್‌ಗೆ ತುಂಬಿಸಿ ನಲ್ಲಿಗಳ ಮುಖಾಂತರ ಪಟ್ಟಣದ ಗಲ್ಲಿ ಗಲ್ಲಿಗಳಿಗೂ ಉಚಿತವಾಗಿ ನೀಡಲಾಗುತ್ತಿತ್ತು. ದಿನದ 2 ಹೊತ್ತು ಈ ನೀರು ಸರಬರಾಜಾಗುವುದರಿಂದ ಸಾರ್ವಜನಿಕರು ಕುಡಿಯುವುದಕ್ಕೆ ಹಾಗೂ ಇತರ ಅಗತ್ಯ ಬಳಕೆಗೆ ಪುರಸಭೆ ಒದಗಿಸುವ ನೀರನ್ನು ಬಳಸಿಕೊಂಡು ಹೇಗೊ ನಿರ್ವಹಣೆ ಮಾಡುತ್ತಿದ್ದರು. ತೀರಾ ಅಗತ್ಯವಿರುವವರು ಖಾಸಗಿ ನಲ್ಲಿಗಳನ್ನು ಹಾಕಿಸಿಕೊಂಡು ನೀರು ಪಡೆಯುತ್ತಿದ್ದರು. ಇಡೀ ಪುರಸಭೆ ವ್ಯಾಪ್ತಿಯೊಳಗೆ ಸಾವಿರಕ್ಕೂ ಮಿಕ್ಕಿ ಸಾರ್ವಜನಿಕ ನಲ್ಲಿಗಳಿದ್ದು, 400 ರಷ್ಟು ಖಾಸಗಿ ನಲ್ಲಿಗಳಿದ್ದವು. ಅದರಲ್ಲಿ ಕೆಲವು ಹೋಟೆಲು ಇತ್ಯಾದಿಗಳ ಸಂಪರ್ಕವಾಗಿತ್ತು. ನಗರ ಬೆಳೆದಂತೆ ಈ ವಿಧಾನದಿಂದ ಪುರಸಭೆಗೆ ನೀರು ಸರಬರಾಜು ಮಾಡುವುದು ಅಸಾಧ್ಯವಾಯಿತು.

ಈ ಸಂದರ್ಭದಲ್ಲಿ ಎಡಿಬಿ ಯೋಜನೆಯಡಿ ಕುಂದಾಪುರದಿಂದ ಸಾಕಷ್ಟು ದೂರದಲ್ಲಿ ಹರಿಯುವ ಸಿಹಿನೀರು ನದಿಯಿಂದ ನೀರನ್ನು ಶುದ್ಧೀಕರಿಸಿ ಕೊಳವೆ ಮುಖಾಂತರ ತಂದು ಪುನಃ ಟ್ಯಾಂಕಿಗೆ ತುಂಬಿಸಿ ನಾಗರಿಕರಿಗೆ ಸರಬರಾಜು ಮಾಡುವ ಯೋಜನೆ ಸಿದ್ಧವಾಯಿತು. ಇದು ದುಬಾರಿ ವೆಚ್ಚದ್ದಾಗಿರುವುದರಿಂದ ಹೆಚ್ಚಿನ ನಾಗರೀಕರು ಈ ನೀರನ್ನು ಖಾಸಗಿ ನಲ್ಲಿಗಳ ಮುಖಾಂತರ ಪಡೆದು ಕನಿಷ್ಟ ವೆಚ್ಚ ಬರಿಸಿದಲ್ಲಿ ಅರ್ಧದಷ್ಟು ಸಾಲ ಹಾಗೂ ಅರ್ಧದಷ್ಟು ಅನುದಾನವಾಗಿ ಬರುವ ಈ ಯೋಜನೆಯಲ್ಲಿ ಸಾಲ ಮರುಪಾವತಿಗೆ ಹಾಗೂ




ನೀರು ಸರಬರಾಜು ನಿರ್ವಹಣೆಗೆ ಒಂದಷ್ಟು ಸಹಾಯವಾಗಬಹುದು ಎನ್ನುವ ನಿರೀಕ್ಷೆ ಯೋಜನೆಯದ್ದಾಗಿತ್ತು. ಉಳಿದ ವೆಚ್ಚವನ್ನು ಪುರಸಭೆಯ ಇತರ ಆದಾಯದಿಂದ ಭರಿಸುವುದು ಸಾಧ್ಯವಿತ್ತು. ಆದರೆ ಯೋಜನೆ ಕಾರ್ಯಗತವಾಗುವಾಗ ತೀರಾ ತಡ ಆದುದ್ದಲ್ಲದೆ ಆ ಸಂದರ್ಭದಲ್ಲಿ ಆಡಳಿತದಲ್ಲಿದ್ದ ಕಾಂಗ್ರೆಸ್‌ನ ಧೋರಣೆಯಂತೆ ಕುಡಿಯುವ ನೀರಿನ ಯೋಜನೆ ನಿರ್ವಹಣೆ, ಸಾಲ ಮರುಪಾವತಿ ಎಲ್ಲವೂ ನೀರಿನ ದರ ವಸೂಲಿಯಿಂದಲೇ ಭರಿಸಬೇಕು ಎನ್ನುವ ಜಿಗಟುತನದಿಂದ ನೀರಿನ ಕನಿಷ್ಠ ದರ ವಾಸ್ತವ್ಯಕ್ಕೆ 100 ರೂ. ಹಾಗೂ ಮುಂಗಡ 5000 ರೂಪಾಯಿ ಎಂಬುದಾಗಿ ಹಾಗೂ ಇತರ ವಾಣಿಜ್ಯ ಉದ್ದೇಶಕ್ಕೆ ಮತ್ತಷ್ಟು ದುಬಾರಿ ದರ ನಿಗದಿ ಮಾಡಿತು.

ಈ ದರ ಪಟ್ಟಿಯ ವಿರುದ್ಧ ತೀವ್ರ ಹೋರಾಟಕ್ಕಿಳಿದ ಸಿಪಿಐ (ಎಂ) ನ ಒತ್ತಡದಿಂದಾಗಿ ಪುನಃ ಮುಂಗಡ ಹಣವನ್ನು 2000ಕ್ಕೆ ಇಳಿಸಬೇಕಾಯಿತು. ಆದರೆ ಮಾಸಿಕ ಕನಿಷ್ಠ ದರದಲ್ಲಿ ಯಾವುದೇ ಬದಲಾವಣೆ ಬರಲಿಲ್ಲ.

ಪುರಸಭೆಯ ಈ ಧೋರಣೆಯಿಂದಾಗಿ ಬಹುತೇಕ ನಾಗರಿಕರು ನೀರಿನ ಖಾಸಗಿ ಸಂಪರ್ಕ ಪಡೆಯಲು ಮುಂದೆ ಬರಲೇ ಇಲ್ಲ. ಇದನ್ನು ಗಮನಿಸಿದ ಪುರಸಭೆ ಕೌನ್ಸಿಲ್‌ನ ಅವಧಿ ಮುಗಿದು ಪುರಸಭೆ ಚುನಾವಣೆಗೆ ಮುನ್ನಾ ಆಡಳಿತಾಧಿಕಾರಿಯವರ ಅವಧಿಯಲ್ಲಿ ಎಲ್ಲಾ ಸಾರ್ವಜನಿಕ ನಲ್ಲಿಗಳನ್ನು ಕಿತ್ತು ಹಾಕಿತು. ಆದರೂ ಸಂಪರ್ಕಗಳು ಹೆಚ್ಚಲಿಲ್ಲ. ಇದನ್ನು ಗಮನಿಸಿದ ನೂತನ ಬಿಜೆಪಿ ನೇತೃತ್ವದ ಬೋರ್ಡ್ ನೀರಿನ ತಿಂಗಳ ಕನಿಷ್ಠ ಬಾಡಿಗೆ ಇಳಿಸದೆ ಮುಂಗಡ ಹಣವನ್ನು ಕಂತು ಪ್ರಕಾರ ಸಂಗ್ರಹಿಸುವ ಮತ್ತು ಸಂಪರ್ಕ ಹೆಚ್ಚಿಸುವ ಕ್ರಮಕ್ಕೆ ಮುಂದಾಯಿತು. ಪುರಸಭೆಯೊಳಗೆ ಈವರೆಗೆ ಸುಮಾರು 1400 ರಷ್ಟು ಮಾತ್ರ ಸಂಪರ್ಕ ಸಾಧ್ಯವಾಗಿದೆ.

ಈ ಬಗ್ಗೆ ಸಿ.ಪಿ.ಐ. (ಎಂ.) ನಗರ ಸಮಿತಿಯ ನಿಯೋಗವೊಂದು ಪುರಸಭೆಗೆ ತೆರಳಿ ನೀರಿನ ಕನಿಷ್ಠ ಬಾಡಿಗೆ ಕಡಿಮೆ ಮಾಡುವಂತೆ ಹಾಗೂ ಒಂದು ವಾರ್ಡಿಗೆ 10 ಸಾರ್ವಜನಿಕ ನಲ್ಲಿಗಳನ್ನು ಅಳವಡಿಸುವಂತೆ, ಹೆಚ್ಚುವರಿ ವಸೂಲಿ ಮಾಡಿದ ಮುಂಗಡ ಹಣವನ್ನು ತಿಂಗಳ ಬಾಡಿಗೆಗೆ ಹೊಂದಾಣಿಕೆ ಮಾಡುವಂತೆ ಹಾಗೂ ಪರಿಶಿಷ್ಠ ಜಾತಿ ಹಾಗೂ ಪಂಗಡದ ಕುಟುಂಬಗಳಿಗೆ ರಿಯಾಯತಿ ದರದಲ್ಲಿ ನೀರನ್ನು ಒದಗಿಸುವಂತೆ ಒತ್ತಾಯಿಸಿತು. ನಂತರದಲ್ಲಿ ಪುರಸಭೆ ಒಳಗೂ, ಪಕ್ಷದ ವತಿಯಿಂದ ಆಯ್ಕೆಯಾದ ಪುರಸಭಾ ಸದಸ್ಯರಾದ ಶ್ರೀಮತಿ ಗುಣರತ್ನಾ ಹಾಗೂ ಕಲಾವತಿಯವರು ಹಲವಾರು ಬಾರಿ ನೀರಿನ ದರ ಇಳಿಸಲು ಒತ್ತಾಯಿಸಿದರು. ಕೊನೆಗೆ ಬಿಜೆಪಿ ನೀರಿನ ದರ ಇಳಿಸಿದಂತೆ ಪ್ರಕಟಿಸಿದರೂ ವಾಸ್ತವವಾಗಿ ಮತ್ತಷ್ಟು ದುಬಾರಿ ಮಾಡಿತು. ಈ ಬಗ್ಗೆ ಸಿಪಿಐ(ಎಂ) ನಗರ ಸಮಿತಿಯು ಹೋರಾಟಕ್ಕೆ ಮುಂದಾಯಿತು. ಪುರಸಭೆಯ ಅವೈಜ್ಞಾನಿಕ ದರಪಟ್ಟಿ ಬದಲಿಯಾಗಿ ದರ ಪಟ್ಟಿಯೊಂದನ್ನು ಪ್ರಕಟಿಸಿ ಪರಿಷ್ಕೃತ ದರ ನಿಗಧಿಪಡಿಸಬೇಕೆಂದು ಒತ್ತಾಯಿಸುವ ಸಲುವಾಗಿ ಸೆ. 10 ರಂದು ಪುರಸಭೆ ಮುತ್ತಿಗೆ ಕಾರ್ಯಕ್ರಮಕ್ಕೆ ತಯಾರಿ ನಡೆಸಲಾಯಿತು.

ಈ ಹಿಂದಿನ ದರದಂತೆ ವಾಸ್ತವ್ಯ ಮಾಸಿಕ 25000 ಲೀ.ಗೆ 100 ರೂ. ಕನಿಷ್ಠ ಇದ್ದುದ್ದನ್ನು ಪುರಸಭೆ ದರ ಇಳಿಸುವುದಾಗಿ ಪ್ರಕಟಿಸಿ 15000 ಲೀ.ಗೆ 75 ರೂ. ಮಾಡಿತು. ವಾಸ್ತವದಲ್ಲಿ ಪ್ರತಿ ಸಾವಿರ ಲೀ.ಗೆ 4 ರೂ.ನಿಂದ 5 ರೂ.ಗೆ ಏರಿಸಿತು.



ಹಾಗೂ ನಂತರದ ಪ್ರತಿ ಸಾವಿರ ಲೀ. ಇನ್ನಷ್ಟು ದುಬಾರಿಯಾಯಿತು. ಪಕ್ಷವು ಪ್ರತಿ ವಾಸ್ತವ್ಯ ಸಂಪರ್ಕಕ್ಕೆ 20000 ಲೀ.ಗೆ 50 ರೂ. ಕನಿಷ್ಠ ನಿಗಧಿಪಡಿಸಬೇಕು ಎಂಬುದಾಗಿ ಒತ್ತಾಯಿಸಿತು. ಅದರೊಂದಿಗೆ ವಾಣಿಜ್ಯ ಉದ್ದೇಶಕ್ಕೆ ಬಳಸಲ್ಪಡುವ ನೀರಿನ ದರವನ್ನು ಪರ್ಯಾಯ ಪಟ್ಟಿಯಲ್ಲಿ ಸೂಚಿಸಲಾಯಿತು. 20000 ಲೀ.ಗೆ 100 ರೂ. ಕನಿಷ್ಠ ಹಾಗೂ ನಂತರದ ಪ್ರತಿ ಸಾವಿರ ಲೀ.ಗೆ 5 ರೂ. ನಂತೆ ಸಂಗ್ರಹಿಸಲು ಸೂಚಿಸಲಾಯಿತು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಕುಟುಂಬಗಳಿಗೆ 18000 ಲೀ. ಗೆ 20 ರೂ. ನಂತೆ ಸಂಗ್ರಹಿಸಲು ಸೂಚಿಸಲಾಯಿತು. ಪ್ರತಿ ತಿಂಗಳೂ ಬಿಲ್ ನೀಡುವುದು, ಬಿಲ್ ನೀಡುವುದನ್ನು ಖಾಸಗಿಯವರಿಗೆ ವಹಿಸದಿರುವುದು. ಇತರ ಹಲವಾರು ಅವ್ಯವಸ್ಥೆಗಳನ್ನು ಸರಿಪಡಿಸುವಂತೆ ಪುರಸಭೆಯನ್ನು ಒತ್ತಾಯಿಸಲಾಗಿತ್ತು.

ಕಾರ್ಯಕ್ರಮದ ಪ್ರಚಾರದ ಭಾಗವಾಗಿ ಪುರಸಭೆ ವ್ಯಾಪ್ತಿಯೊಳಗೆ ಎಲ್ಲಾ ವಾರ್ಡುಗಳಲ್ಲೂ ವಿವರವಾದ ಕರಪತ್ರದೊಂದಿಗೆ ಮನೆ ಮನೆಗೆ ತಲುಪಿ ವಿವರಿಸಲಾಯಿತು. 2 ದಿನಗಳ ಕಾಲ ಧ್ವನಿವರ್ಧಕದಲ್ಲಿ ಪ್ರಚಾರ ಮಾಡಲಾಯಿತು. ಈ ಸಂದರ್ಭದಲ್ಲಿ ಯಾವುದೋ ಆಸೆ ಆಮಿಷಗಳಿಗೆ, ಸುಳ್ಳು ಭರವಸೆಗಳಿಗೆ ಒಳಗಾಗಿ ಬಿಜೆಪಿಗೆ ಓಟು ನೀಡಿದ ನಾಗರೀಕರು ನಮ್ಮ ಕಾರ್ಯಕರ್ತರಲ್ಲಿ ಪಶ್ಚಾತಾಪ ವ್ಯಕ್ತಪಡಿಸಿರುವುದು ಹಾಗೂ ಬಿಜೆಪಿಯ ಆಡಳಿತ ವೈಖರಿ ಬಗ್ಗೆ ಭ್ರಮನಿರಸನವನ್ನು ವ್ಯಕ್ತ ಪಡಿಸಿದರು. ಈ ಪ್ರಚಾರ ಕಾರ್ಯದಲ್ಲಿ ಪಕ್ಷದ ಮುಖಂಡರೂ, ಎಸ್‌ಎಫ್‌ಐ, ಡಿವೈಎಫ್‌ಐ ಸಂಗಾತಿಗಳು, ಹಂಚು ಕಾರ್ಮಿಕರು, ಚುನಾಯಿತ ಸದಸ್ಯರು, ಸಮುದಾಯದ ಗೆಳೆಯರೂ ಸ್ಫೂರ್ತಿಯಿಂದ ಭಾಗವಹಿಸಿದ್ದರು. ಸೆ. 10 ರಂದು ಮಧ್ಯಾಹ್ನ ಜಡಿಮಳೆ ಸುರಿಯುತ್ತಿದ್ದರೂ ವಾರ್ಡುಗಳಿಂದ 150 ಹೆಚ್ಚು ಮಹಿಳೆಯರು ಸೇರಿದಂತೆ ಸುಮಾರು 400 ಜನ ಸ್ಫೂರ್ತಿಯಿಂದ ಭಾಗವಹಿಸಿ ಮೆರವಣಿಗೆಯಲ್ಲಿ ಸಾಗಿ ಪುರಸಭೆ ಎದುರು ಪ್ರತಿಭಟನೆ ನಡೆಸಿದರು. ನಿಯೋಗವೊಂದು ಪ್ರತಿಭಟನೆ ಸಂದರ್ಭದಲ್ಲಿ ಪುರಸಭಾ ಅಧ್ಯಕ್ಷರಿಗೆ ಮನವಿ ನೀಡಿದಾಗ ಅಧ್ಯಕ್ಷರು ನೀರಿನ ದರ ಇಳಿಕೆ ಬಗ್ಗೆ ಯಾವುದೇ ಸೂಚನೆ ನೀಡದೆ ಕೇವಲ ನಿರ್ವಹಣಾ ವೆಚ್ಚ ಮತ್ತು ಸಾಲ ಮರುಪಾವತಿಯ ಬಗ್ಗೆ ವಿವರಣೆ ನೀಡಲು ಮುಂದಾದಾಗ ನಿಯೋಗದಲ್ಲಿದ್ದ ಪಕ್ಷದ ಮುಖಂಡರು ಪುರಸಭೆಗೆ ಆದಾಯ ತರುವ ಇತರ ಮೂಲಗಳ ಬಗ್ಗೆ ತಿಳಿಹೇಳಬೇಕಾಯಿತು. ಇಂದಿಗೂ ಎಡಿಬಿ ಯೋಜನೆಯಡಿ ರಚನೆಗೊಂಡ ವಾಣಿಜ್ಯ ಸಂಕೀರ್ಣದಲ್ಲಿ ಹತ್ತು ಹಲವಾರು ಕೋಣೆಗಳು ಬಾಡಿಗೆ ತರದೆ ಮೂಲೆಗೆ ಬಿದ್ದಿವೆ. ಐಡಿಎಸ್‌ಎಂಟಿ ಯೋಜನೆಯಡಿ ನಿರ್ಮಾಣಗೊಂಡು ಸಿದ್ಧವಿರುವ ಕಟ್ಟಡ ತಯಾರಿ ವರ್ಷಾನುಗಟ್ಟಲೆ ತಡಮಾಡಿ ಪುರಸಭೆಗೆ ಬರುವ ಆದಾಯಕ್ಕೆ ಕತ್ತರಿಯಾಗಿದೆ. ಈ ಹಿಂದೆ ನಿರ್ಮಾಣಗೊಂಡ ವಾಣಿಜ್ಯ ಸಂಕೀರ್ಣದಲ್ಲಿ ಆಡಳಿತ ವರ್ಗದ ಆಪ್ತೇಷ್ಟರಿಗೆ ಇದ್ದ ಬಾಡಿಗೆ ದರದಲ್ಲಿ ಕಡಿತಗೊಳಿಸಿ ಪುರಸಭೆ ಆದಾಯ ಕಡಿಮೆಗೊಳಿಸಿದ್ದು ಜಗಜ್ಜಾಹೀರಾಗಿದೆ. ಸ್ವಯಂ ಘೋಷಿತ ಆಸ್ತಿ ತೆರಿಗೆಯ ಹೆಸರಿನಲ್ಲಿ ಪುರಸಭೆಯ ಆದಾಯ ಸುಮಾರು ಹತ್ತು ಪಟ್ಟಿನಷ್ಟು ಹೆಚ್ಚಳವಾಗಿದೆ. ಕುಡಿಯುವ ನೀರನ್ನು ವ್ಯಾಪಾರದ ದೃಷ್ಟಿಯಿಂದ ನೋಡದೆ ಸಮಾಜದ ಎಲ್ಲಾ ಶ್ರೇಣಿಯ ಜನಸಮಾನ್ಯರೂ ಬಳಸುವಂತಾಗಲು ಕಡಿಮೆ ದರದಲ್ಲಿ ಒದಗಿಸಬೇಕಾದುದು ಅನಿವಾರ್ಯ ಎಂಬುದಾಗಿ ನಿಯೋಗವು ಒತ್ತಾಯಿಸಿತು.

ನಂತರದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಪಕ್ಷದ ಮುಖಂಡರು ಮಾತನಾಡಿದರು. ಪುರಸಭೆಗೆ 15 ದಿನಗಳ ಅವಧಿಯನ್ನು ನೀರಿನ ದರ ಪರಿಷ್ಕರಣೆಗಾಗಿ ನೀಡಲಾಯಿತು ಹಾಗೂ ಇದು ಪ್ರಥಮ ಹಂತದ ಹೋರಾಟ ಎಂಬುದಾಗಿಯೂ ಎಚ್ಚರಿಸಲಾಯಿತು.

'ಹಿಂದೂ ವೋಟ್‌ಬ್ಯಾಂಕ್' ರಾಜಕೀಯ ಹರಿಸುತ್ತಲೇ ಇದೆ ಭಾರತೀಯ ರಕ್ತ

ಮತಾಂತರಗಳ ಬಗ್ಗೆ 'ರಾಷ್ಟ್ರೀಯ ಚರ್ಚೆ', ಧರ್ಮಗಳ ನಡುವೆ ಸಂವಾದ ನಡೆಯಲಿ ಎಂದು ಅಡ್ವಾಣಿಯವರು ಹೇಳಿದ್ದಾರೆ. ತಮ್ಮದೇ ವಿಶಿಷ್ಟ ಆಚರಣೆಗಳನ್ನು ಹೊಂದಿರುವ ಬುಡಕಟ್ಟು ಜನಗಳು ಹಿಂದೂ ಧರ್ಮವನ್ನು ಅಂಗೀಕರಿಸಿದರೆ ಅದು 'ಮತಾಂತರ'ವೆನಿಸುವುದಿಲ್ಲ, ಆದರೆ ಅವರು ಕ್ರೈಸ್ತ ಧರ್ಮವನ್ನು ಅಂಗೀಕರಿಸಿದರೆ ಅದು ಮಾತ್ರ 'ಮತಾಂತರ' ಹೇಗಾಗುತ್ತದೆ ಎಂದು ಅವರು ಹೇಳ ಬಲ್ಲರೇ? ಇಂತಹ 'ಸಂವಾದ'ದಲ್ಲಿ ಎಲ್ಲಾ ಧರ್ಮಗಳನ್ನು ಸಮಾನ ಗೌರವದಿಂದ ಕಾಣಲಾಗುತ್ತದೆ ಎಂದು ಇವರು ಹೇಳಬಲ್ಲರೇ? ಇವೆಲ್ಲಾ ತಮ್ಮ 'ಹಿಂದೂ ವೋಟ್ ಬ್ಯಾಂಕ'ನ್ನು ಕ್ರೋಢೀಕರಿಸಲು ಕೋಮುವಾದಿ ಶಕ್ತಿಗಳು ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಹರಿಯಬಿಟ್ಟಿರುವ ಅಮಾನುಷ ಕ್ರೌರ್ಯಗಳನ್ನು ಸಮರ್ಥಿಸಿಕೊಳ್ಳುವ ಕುತಂತ್ರಗಳಷ್ಟೇ ಎಂಬ ಅನುಮಾನ ಸಹಜವಲ್ಲವೇ?

ಒರಿಸ್ಸಾ ಮತ್ತು ಇತರ ಕಡೆ ಅಲ್ಪಸಂಖ್ಯಾತ ಕ್ರೈಸ್ತ ಸಮುದಾಯದ ವಿರುದ್ಧ ಹಿಂಸಾಚಾರ ಇನ್ನೂ ಮುಂದುವರೆದಿದೆ. ಬಲವಾದ ಪೊಲೀಸ್ ಪಡೆಗಳಿದ್ದರೂ ಸಶಸ್ತ್ರ ಗ್ಯಾಂಗ್‌ಗಳು ಒರಿಸ್ಸಾದ ಕಂಧಮಲ್ ಜಿಲ್ಲೆಯ ಹಳ್ಳಿಗಳಲ್ಲಿ ದಲಿತ ಕ್ರೈಸ್ತರ ವಿರುದ್ಧ ದಾಳಿಗಳನ್ನು ನಡೆಸುತ್ತಲೇ ಇವೆ. ಅವರ ಮನೆಗಳನ್ನು, ಪ್ರಾರ್ಥನಾ ಸಭಾಂಗಣಗಳನ್ನು ಹಾಳುಗೆಡಹುವ ದುಷ್ಕೃತ್ಯಗಳು ಸಾಗುತ್ತಲೆ ಇವೆ. ಈ ಜಿಲ್ಲೆಯ ಹಲವು ಕಡೆ ಕರ್ಫ್ಯೂ ಮುಂದುವರೆಯುತ್ತಲೇ ಇದೆ.

ಆರೆಸ್ಸೆಸ್/ಬಿಜೆಪಿ ಕಬಂಧ ಬಾಹುಗಳು, ವಿಶೇಷವಾಗಿ ಭಜರಂಗ ದಳ ಅಗಸ್ಟ್ 28 ರಿಂದ ಹರಿಯ ಬಿಟ್ಟಿರುವ ಅಮಾನುಷ ಕ್ರೌರ್ಯ ಈಗ ಬಯಲಿಗೆ ಬರುತ್ತಿದೆ. 28 ವರ್ಷದ ಕ್ರೈಸ್ತ ಸನ್ಯಾಸಿನಿಯ ಮೇಲೆ ಸಾರ್ವಜನಿಕ ಸ್ಥಳದಲ್ಲಿಯೇ ಸಾಮೂಹಿಕ ಅತ್ಯಾಚಾರ ಹಾಗೂ ಅದನ್ನು ತಡೆಯಲು ಬಂದ ಪಾದ್ರಿಯ ಮೇಲೆ ಪಾಶವೀ ದಾಳಿ ನಡೆಯಿತು. ಇವೆಲ್ಲಾ ಒರಿಸ್ಸಾ ಸಶಸ್ತ್ರ ಪೊಲೀಸ್ ಪಡೆಯ ಸಮ್ಮುಖವೇ ನಡೆದವು. ಪೊಲೀಸರು ಮೂಕಪ್ರೇಕ್ಷಕರಂತಿದ್ದರು. ಮದರ್ ಥೆರೆಸಾ ಸ್ಥಾಪಿಸಿದ ಮಿಶನರೀಸ್ ಆಫ್ ಚ್ಯಾರಿಟಿಯ ಮುಖ್ಯಸ್ಥೆ ಸಿಸ್ಟರ್ ನಿರ್ಮಲಾ ಒರಿಸ್ಸಾದ ಮುಖ್ಯಮಂತ್ರಿಗಳಿಗೆ ಮತ್ತು ಪ್ರಧಾನ ಮಂತ್ರಿಗಳಿಗೆ ಈ ಅತ್ಯಾಚಾರಗಳ ಬಗ್ಗೆ ಬರೆಯಬೇಕಾಗಿ ಬಂದಿದೆ. ಈ ದುಷ್ಕೃತ್ಯ ಆಗಸ್ಟ್ 24ರಂದು ನಡೆದಿದ್ದರೂ ಇದುವರೆಗೂ ಅಪರಾಧಿಗಳ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ. ಅತ್ಯಾಚಾರ ನಡೆದಿದೆ ಎಂದು ವೈದ್ಯಕೀಯ ಪರೀಕ್ಷೆಯಿಂದ ದೃಢಪಟ್ಟಿದೆ ಎಂದು ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್ ಈಗ ಹೇಳಿದ್ದಾರೆ. ದುಷ್ಕೃತ್ಯ ನಡೆದು ನಲ್ವತ್ತು ದಿನಗಳಾದನಂತರ, ಅದು ಕೂಡಾ ಸಾರ್ವಜನಿಕ ಒತ್ತಡದಿಂದಾಗಿ ಅಕ್ಟೋಬರ್ 3 ರಂದು ನಾಲ್ವರನ್ನು ಬಂಧಿಸಲಾಗಿದೆ. ಆದರೆ ಪ್ರಮುಖ ಆರೋಪಿ ಈಗಲೂ ಸಿಕ್ಕಿಲ್ಲ ಎಂದು ಹೇಳಲಾಗುತ್ತಿದೆ. ರಾಜ್ಯದ ಕ್ರೈಮ್ ಬ್ರಾಂಚಿನಿಂದ ತನಿಖೆಗೆ ಆದೇಶಿಸಲಾಗಿದೆ. ಆದರೆ ಇದು ಬಹಳ ತಡವಾಗಿ ಕೈಗೊಂಡ ಅಲ್ಪ ಕ್ರಮ, ಸಿಬಿಐ ತನಿಖೆಯಿಂದ ಮಾತ್ರ ಸತ್ಯ ಸಾಬೀತಾಗಲು ಸಾಧ್ಯ ಎಂಬ ಅಭಿಪ್ರಾಯ ಕೇಳಿಬರುತ್ತಿದೆ.


ದುಷ್ಕರ್ಮಿಗಳಿಗೆ ಮಾತ್ರ ಸರಕಾರದ ರಕ್ಷಣೆ!

ಮನೆ-ಆಸ್ತಿಗಳು ಧ್ವಂಸಗೊಂಡು ನಿರಾಶ್ರಿತರಾದವರು (ಒಂದು ಹಂತದಲ್ಲಿ ಇದು 27ಸಾವಿರ ದಾಟಿತ್ತು) ಜಿಲ್ಲೆಯಲ್ಲಿ ಅಲ್ಲಲ್ಲಿ ಹಾಕಿದ ನಿರಾಶ್ರಿತ ಕ್ಯಾಂಪುಗಳಲ್ಲಿ ಆಶ್ರಯ ಪಡೆಯಬೇಕಾಗಿ ಬಂದಿದೆ. ಇಂತಹ ಕನಿಷ್ಟ ಮೂರು ಕ್ಯಾಂಪುಗಳಲ್ಲಿ ಸ್ಫೋಟಗಳು ನಡೆದ ವರದಿಗಳು ಬಂದಿವೆ. ಇದರಿಂದ ಭಯ ಇನ್ನಷ್ಟು ಹೆಚ್ಚಿದೆ. ರಾಜ್ಯ ಸರಕಾರದ ಭದ್ರತಾ ಪಡೆಗಳ ಬಗ್ಗೆ ಈಗ ಯಾರಿಗೂ ವಿಶ್ವಾಸವಿಲ್ಲದಂತಾಗಿದೆ. ಅವಕ್ಕೆ ಜೀವ- ಆಸ್ತಿಗಳನ್ನು ರಕ್ಷಿಸುವಂತಹ ಸಾಮರ್ಥ್ಯವಂತೂ ಇಲ್ಲ, ಶಾಂತಿಪಾಲನೆಯ ಶಕ್ತಿಯೂ ಇಲ್ಲ ಎಂದು ಜನ ಭಾವಿಸುವಂತಾಗಿದೆ.

ಈ ನಡುವೆ ಕರ್ನಾಟಕ ಸರಕಾರದ ಬಗ್ಗೆ ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗದ ಕಟು ವಿಮರ್ಶೆ ಪ್ರಕಟವಾಗಿದೆ. ಕ್ರೈಸ್ತ ಅಲ್ಪಸಂಖ್ಯಾತರ ವಿರುದ್ಧ ಹಿಂಸಾಚಾರ ನಡೆಯಲಿದೆ ಎಂಬ ಎಚ್ಚರಿಕೆಗಳು ಬಂದಿದ್ದರೂ ರಾಜ್ಯದ ಬಿಜೆಪಿ ಸರಕಾರ ಭಜರಂಗ ದಳದ ಬಗ್ಗೆ 'ಮೃದು'ವಾಗಿತ್ತು ಎಂದು ಅದು ಹೇಳಿದೆ. ಭಜರಂಗ ದಳದ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಕರೆ ನೀಡಿದೆ. ವ್ಯಾಪಕ ಸಿಟ್ಟು ಪ್ರಕಟವಾದ ನಂತರವೇ ಕರ್ನಾಟಕ ಪೊಲೀಸರು ಭಜರಂಗ ದಳದ ರಾಜ್ಯ ಸಂಚಾಲಕನನ್ನು ಬಂಧಿಸಿದರು. ಆತನಿಗೆ ಒಂದು ಕೇಸಿನಲ್ಲಿ ಜಾಮೀನು ದೊರೆಯಿತು. ಆದರೆ ಸ್ವತಃ ದಾಳಿಗೊಳಗಾದರೂ ಬಂಧಿಸಲ್ಪಟ್ಟ ಕ್ರೈಸ್ತರಿಗೆ ಜಾಮೀನು ನಿರಾಕರಿಸಲಾಗಿದೆ, ಅವರಿನ್ನೂ ಜೈಲುಗಳಲ್ಲಿ ಕೊಳೆಯುತ್ತಿದ್ದಾರೆ. ಹೀಗೆ ಒರಿಸ್ಸ ಮತ್ತು ಕರ್ನಾಟಕ ಈ ಎರಡೂ ರಾಜ್ಯಗಳಲ್ಲಿ ಸರಕಾರಗಳು ಕ್ರೈಸ್ತ ಅಲ್ಪಸಂಖ್ಯಾತರ ಮೇಲೆ ಇಂತಹ ಹಿಂಸ್ರ ಧಾಳಿ ನಡೆಸಿದವರಿಗೆ ರಕ್ಷಣೆ ನೀಡುತ್ತಿರುವ ಆಪಾದನೆ ಎದುರಿಸುತ್ತಿವೆ.

ಸತ್ಯಕ್ಕೆ ಅಪಚಾರ

ಈಗ ಕಂಧಮಲ್‌ನಲ್ಲಿ ಹಿಂದೂಗಳಾಗಿ ಮತಾಂತರ ಹೊಂದುವ ದಲಿತ ಕ್ರಿಶ್ಚಿಯನ್ನರು ಮಾತ್ರವೆ ತಮ್ಮ ಸ್ಥಳಗಳಿಗೆ ಹಿಂದಿರುಗಿ ಧ್ವಂಸಗೊಂಡ ಮನೆಗಳನ್ನು ಮತ್ತೆ ಕಟ್ಟಲು ಬಿಡಲಾಗುವುದು ಎಂದು ಆರೆಸ್ಸೆಸ್ ಮತ್ತು ಭಜರಂಗ ದಳ ಬೆದರಿಸಿರುವುದಾಗಿ ವರದಿಯಾಗಿದೆ. ಬಲವಂತದ ಮತಾಂತರದ ನೆಪವೊಡ್ಡಿ ದಲಿತ ಕ್ರೈಸ್ತರ ಮೇಲೆ ಈ ಧಾಳಿಗಳು ನಡೆದಿವೆ. ಆದರೆ ದೇಶಾದ್ಯಂತ ಬುಡಕಟ್ಟು ಜನಗಳಲ್ಲಿ ಅವರದೇ ಆಚರಣೆಗಳಿವೆ. ಅವರೆಲ್ಲಾ ಹಿಂದೂ ಧರ್ಮಕ್ಕೆ ಸೇರಿದವರು ಎಂದು ಹೇಳುವುದು ಸತ್ಯಕ್ಕೆ ಬಗೆಯುವ ಅಪಚಾರವಾಗುತ್ತದೆ. ಕಂಧಮಲ್‌ನಲ್ಲಿ ಎರಡು ಪ್ರಮುಖ ಬುಡಕಟ್ಟುಗಳು ಇದ್ದವು- ಕಂಧರು ಮತ್ತು ದಲಿತರಾದ ಪಾನರು. ಕ್ರಮೇಣ ಕಂಧರಲ್ಲಿ ಕೆಲವು ವಿಭಾಗಗಳು ಹಿಂದೂ ಧರ್ಮವನ್ನು ಅಂಗೀಕರಿಸಿದರೆ, ಪಾನರಲ್ಲಿ ಕೆಲವು ವಿಭಾಗಗಳು ಕ್ರೈಸ್ತ ಧರ್ಮವನ್ನು ಅಂಗೀಕರಿಸಿದವು. ಆರೆಸ್ಸೆಸ್ ಮತ್ತು ಅದರ ಕಬಂಧ ಬಾಹುಗಳು 'ಹಿಂದೂ ವೋಟ್ ಬ್ಯಾಂಕ'ನ್ನು ಕ್ರೋಢೀಕರಿಸಲು ಈ ದಲಿತ ಕ್ರೈಸ್ತರ ಮೇಲೆ ಗುರಿಯಿಟ್ಟಿವೆ.



ಹಿಂದುತ್ವವಾದಿ ಮತಾಂಧರ ದಾಳಿಗೆ ಗುರಿಯಾಗಿ ನಿರಾಶ್ರಿತರ ಶಿಬಿರ ಸೇರಿರುವ ಒರಿಸ್ಸಾದ ಕ್ರಿಶ್ಚಿಯನ್ನರು

ತಮ್ಮ 'ಪರಿವಾರ'ದವರು ಹರಿಯಬಿಟ್ಟ ಅತ್ಯಾಚಾರಗಳನ್ನು ಸಮರ್ಥಿಸಿಕೊಳ್ಳಲಾರದ ಅಡ್ವಾಣಿಯವರು ತನಗೆ ಕ್ರೈಸ್ತರ ಬಗ್ಗೆ ಮೃದುಭಾವನೆ ಇದೆ , ಏಕೆಂದರೆ ತಾನು ಓದಿದ್ದು ಕರಾಚಿಯ ಕ್ರೈಸ್ತ ಮಿಶನರಿ ಶಾಲೆಯಲ್ಲಿ ಎಂದಿದ್ದಾರೆ. ಅದೇ ವೇಳೆಗೆ ಮತಾಂತರಗಳ ಬಗ್ಗೆ 'ರಾಷ್ಟ್ರೀಯ ಚರ್ಚೆ' ನಡೆಯಬೇಕು ಎಂದೂ ಹೇಳಿದ್ದಾರೆ. ಇದು ಅವರ ಪ್ರಿಯ ಹವ್ಯಾಸವಾಗಿರುವಂತೆ ಕಾಣುತ್ತದೆ. ತಮ್ಮದೇ ಪ್ರತ್ಯೇಕ ಆಚರಣೆಗಳನ್ನು ಹೊಂದಿರುವ ಬುಡಕಟ್ಟು ಜನಗಳು ಹಿಂದೂ ಧರ್ಮವನ್ನು ಅಂಗೀಕರಿಸಿದರೆ ಅದು 'ಮತಾಂತರ'ವೆನಿಸುವುದಿಲ್ಲ, ಆದರೆ ಅವರು ಕ್ರೈಸ್ತ ಧರ್ಮವನ್ನು ಅಂಗೀಕರಿಸಿದರೆ ಅದು ಮಾತ್ರ 'ಮತಾಂತರ' ಹೇಗಾಗುತ್ತದೆ ಎಂದು ಅವರು ಹೇಳಲಾರರು. ಅಲ್ಲದೆ 'ಭಾರತೀಯತ್ವ'ವನ್ನು ಬಲಪಡಿಸಲು ಧರ್ಮಗಳ ನಡುವೆ ಸಂವಾದ ನಡೆಯಲಿ ಎಂದೂ ಅಡ್ವಾಣಿಯವರು ಕರೆ ನೀಡಿದ್ದಾರೆ. ಆದರೆ ಹಿಂದೂ ಧರ್ಮ ಮಾತ್ರವೇ ಒಂದು ಧರ್ಮವೆನಿಸಿಕೊಳ್ಳುತ್ತದೆ, ಉಳಿದವೆಲ್ಲಾ ಕೇವಲ 'ಪಂಥ'ಗಳು ಎಂದು ಆರೆಸ್ಸೆಸ್/ಬಿಜೆಪಿ ಮಂದಿ ಹೇಳುತ್ತಿರುತ್ತಾರಲ್ಲಾ. ಎಷ್ಟೆಂದರೆ ನಮ್ಮ ಸಂವಿಧಾನದಲ್ಲಿರುವ 'ಧರ್ಮನಿರಪೇಕ್ಷ' ಎಂಬ ಪದದ ಬದಲು 'ಪಂಥನಿರಪೇಕ್ಷ' ಎಂದು ತಿದ್ದುಪಡಿ ಮಾಡಬೇಕು ಎಂದು ಆಗ್ರಹಿಸುತ್ತಿರುವವರೂ ಇವರೇ ಅಲ್ಲವೇ? ಇಂತಹ 'ಸಂವಾದ'ದಲ್ಲಿ ಎಲ್ಲಾ ಧರ್ಮಗಳನ್ನು ಸಮಾನವೆಂದು, ಸಮಾನ ಗೌರವದಿಂದ ಕಾಣಲಾಗುತ್ತದೆ ಎಂದು ಇವರು ಹೇಳಬಲ್ಲರೇ? ಇವೆಲ್ಲಾ ತಮ್ಮ 'ಹಿಂದೂ ವೋಟ್ ಬ್ಯಾಂಕ'ನ್ನು ಕ್ರೋಢೀಕರಿಸಲು ಕೋಮುವಾದಿ ಶಕ್ತಿಗಳು ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಹರಿಯಬಿಟ್ಟಿರುವ ಅಮಾನುಷ ಧಾಳಿಗಳನ್ನು ಸಮರ್ಥಿಸಿಕೊಳ್ಳುವ ಕುತಂತ್ರಗಳಷ್ಟೇ ಎಂಬುದು ಸ್ಪಷ್ಟ.


ಹೀಗೆ ದೇಶದಲ್ಲಿ ಮತ್ತೆ ರಾಜಕೀಯ ಅಧಿಕಾರ ಗಿಟ್ಟಿಸುವ ಅವಕಾಶಗಳನ್ನು ಹೆಚ್ಚಿಸಿಕೊಳ್ಳಲು ಅವರು ಭಾರತೀಯರ ರಕ್ತ ಹರಿಸಿ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಅಪಾಯಕ್ಕೀಡು ಮಾಡಲೂ ಹೇಸುತ್ತಿಲ್ಲ.

ಭಯೋತ್ಪಾದಕತೆಗೆ ಆಹಾರ

ಕೇವಲ ರಾಜಕೀಯ ಲಾಭಕ್ಕೆ ದೇಶದ ಐಕ್ಯತೆಯನ್ನು ಬಲಿಗೊಟ್ಟು ಈ ರೀತಿ ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಕೆಲಸ ಅದಕ್ಕೆ ಪ್ರತಿಯಾಗಿ ಭಯೋತ್ಪಾದಕ ಪ್ರತಿಕ್ರಿಯೆಗೆ ಆಹಾರ ಒದಗಿಸುತ್ತದಷ್ಟೇ ಎಂಬುದನ್ನು ನಾವು ಕಾಣುತ್ತಿದ್ದೇವೆ. ದೇಶದ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ


ಪುಟ 11ಕ್ಕೆ

ಜೀವಂತ ದಹನದಕ್ಕೆ ಬಲಿಯಾದ ಯುವತಿ



ಸರ್ವ ಜನಾಂಗದ ಶಾಂತಿಯ ತೋಟ ಎನ್ನಲಾಗುವ ಕರ್ನಾಟಕವನ್ನು ಏನಾದರೂ ಮಾಡಿ ಸೌಹಾರ್ದತೆಯ ಮಸಣವಾಗಿಸಬೇಕೆನ್ನುವ ಶಕ್ತಿಗಳು ಗಂಭೀರವಾದ ಯತ್ನವನ್ನೇ ಮಾಡಿವೆ. ಹತ್ತೆಂಟು ರೂಪ, ವಿಧಗಳಲ್ಲಿ ಅಹೋರತ ಹಾಕಲಾಗುತ್ತಿರುವ ಶ್ರಮಕ್ಕೆ ಅಲ್ಲಲ್ಲಿ ಪ್ರತಿಕ್ರಿಯೆ ಸಿಗುತ್ತಿದೆ. ಶಾಂತಿ ಕದಡುವ ಕೋಮುವಾದಿ ಶಕ್ತಿಗಳು ಮೇಲುಗೈ ಸಾಧಿಸಲು ಹವಣಿಸುತ್ತಿರುವುದು ಆತಂಕಕಾರಿಯಾಗಿದೆ.

'ಮತಾಂತರ'ಗೊಳ್ಳುತ್ತಿರುವ ಕರ್ನಾಟಕ!



ಕರ್ನಾಟಕವು ಹಂತ ಹಂತವಾಗಿ ಮತಾಂತರಗೊಳ್ಳುತ್ತಿದೆ. ಗುಜರಾತ್, ಒರಿಸ್ಸಾ ದಾರಿಯಲ್ಲಿ ಅದು ಸಾಗುತ್ತಿದೆ. ಶಾಂತಿ ಸೌಹಾರ್ದತೆಯ ತನ್ನ ಪ್ರಾಚೀನ ಪರಂಪರೆಯನ್ನು ಧಿಕ್ಕರಿಸಿ ದ್ವೇಷ, ಅಸಹನೆಯ ಪರಕೀಯ ಪರಂಪರೆಯನ್ನು ಹುಟ್ಟು ಹಾಕುತ್ತಿದೆ. ನಾಡಿನ ಸಂಭ್ರಮ ಸಡಗರದ ಮೂಲಾಧಾರವಾಗಿರುವ ವೈವಿಧ್ಯತೆಯನ್ನು ಹೊಸಕಿ ಹಾಕುವ ಪ್ರಯತ್ನ ನಡೆದಿದೆ. ಶತಮಾನಗಳಿಂದ ಮನೆ ಮನಗಳಲ್ಲಿ ನೆಲೆನಿಂತ ನೆಮ್ಮದಿ, ನಂಬಿಕೆ, ವಿಶ್ವಾಸಗಳನ್ನು ಕೊಳ್ಳಿಯಿಟ್ಟು ಭಸ್ಮ ಮಾಡಲಾಗುತ್ತಿದೆ. ನರಹಂತಕ, ರಕ್ತಪಿಪಾಸಿ ಹಿಟ್ಲರ್‌ನಿಂದ ಸ್ಫೂರ್ತಿ ಪಡೆಯುವ ಶಕ್ತಿಗಳು ಕ್ರೂರ ಮೃಗಗಳಂತೆ ಒಳನುಗ್ಗಿ 'ಸರ್ವ ಜನಾಂಗದ ಶಾಂತಿಯ ತೋಟ' ವನ್ನು ಹಾಳು ಮಾಡಲು ಹವಣಿಸುತ್ತಿವೆ. ಈ ಕರಾಳ ಬೆಳವಣಿಗೆಗಳ ಹಿಂದಿನ ಸಂಚನ್ನು ಮತ್ತು ಅದರ ಅಪಾಯವನ್ನು ಅರಿಯದ ಕರ್ನಾಟಕದ ಮುಗ್ಧ ಮನಸ್ಸು ಮತಾಂತರಗೊಳ್ಳುತ್ತಿದೆ.! 1968 ರಲ್ಲಿ ಉಡುಪಿ ಪುರಸಭೆಯಲ್ಲಿ ಜನಸಂಘದ ಏಕೈಕ ಸದಸ್ಯನಾಗಿ ಆಯ್ಕೆಯಾಗಿದ್ದ ವಿ.ಎಸ್.ಆಚಾರ್ಯ ಇಂದು ರಾಜ್ಯದ ಗೃಹ ಮಂತ್ರಿಯಾಗಲು ಸಾಧ್ಯವಾಗಿರುವುದು ಕರ್ನಾಟಕ ಮತಾಂತರಗೊಳ್ಳುತ್ತಿದೆ ಎಂಬ ಭಯಂಕರ ಸತ್ಯವನ್ನು ಹೊರಗೆಡವಿದೆ.

'ಇವ ನಮ್ಮವ, ಇವ ನಮ್ಮವ' ಪರಂಪರೆ?

ಕರ್ನಾಟಕದ ಸೌಹಾರ್ದ ಪರಂಪರೆಗೆ 12ನೇ ಶತಮಾನದ ಶರಣರ ಕೊಡುಗೆ ಅಪಾರವಾದುದು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಂಬ ಆಳುವ ವರ್ಗಗಳ ಸೇವೆ ಮಾಡಲು ಶೂದ್ರ, ಅತಿಶೂದ್ರ ಎಂಬ ವರ್ಗಗಳನ್ನು ಸೃಷ್ಟಿಸಿ ಧರ್ಮ ಗ್ರಂಥಗಳ ಮೂಲಕ ಶತ ಶತಮಾನಗಳಿಂದ ಪೋಷಿಸಿಕೊಂಡ ಬರಲಾದ ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ಕಿತ್ತುಹಾಕಲು ಶ್ರಮಿಸಿದ ಬಸವಣ್ಣ ಮತ್ತು ಅವರ ಆಂದೋಲನಕ್ಕೆ ವಿಶ್ವವೇ ತಲೆದೂಗುತ್ತಿದೆ. ಆದರೆ ಇಂದು ಬಸವಣ್ಣನವರ ಕರ್ಮಭೂಮಿಯಲ್ಲಿ ಏನಾಗುತ್ತಿದೆ? ಮನುಷ್ಯ ಮನುಷ್ಯರೊಳಗೆ ಮೇಲು-ಕೀಳು ಎಂಬ ಜಾತಿ ವ್ಯವಸ್ಥೆಯನ್ನು ಬೆಳೆಸಿಕೊಂಡು ಬಂದವರೇ ಇಂದು ಹಿಂದೂ, ಮುಸ್ಲಿಂ, ಕ್ರೈಸ್ತ ಮೊದಲಾದ ಮತ ಪಂಥಗಳ ಹೆಸರಿನಲ್ಲಿ ಸಮಾಜದಲ್ಲಿ ಇನ್ನೊಂದು ಬಗೆಯ ಒಡಕನ್ನು ಉಂಟು ಮಾಡುತ್ತಿವೆ. ಬಸವಣ್ಣನವರಿಗೆ ಅಂದು ಕೋಮುವಾದದ ಪ್ರಶ್ನೆ ಎದುರಾಗಿರಲಿಲ್ಲ. ಆದರೆ 'ಇವ ನಮ್ಮವ, ಇವ ನಮ್ಮವ' ಎಂಬ ಅವರು ಹುಟ್ಟು ಹಾಕಿದ ಪರಂಪರೆಯನ್ನು ಕರ್ನಾಟಕದ ಜನತೆ ಎತ್ತಿ ಹಿಡಿದಿದ್ದರೆ, ಕೋಮುವಾದದ ಗುಮ್ಮ ಇಲ್ಲಿ ನೆಲೆ ನಿಲ್ಲುತ್ತಿರಲಿಲ್ಲ. ಬಸವಣ್ಣನವರ ಪರಂಪರೆಯ ವಾರಸುದಾರರು ತಾವೆಂದು ಹೇಳಿಕೊಳ್ಳುವ ಲಿಂಗವಂತ ಸಮುದಾಯವೇ ಇಂದು 'ಇವ ನಮ್ಮವನಲ್ಲ, ಇವ ನಮ್ಮವನಲ್ಲ' ಎನ್ನುವ ಪಂಥಕ್ಕೆ ಮತಾಂತರಗೊಳಿಸಲು ಸತತ ಯತ್ನಗಳು ನಡೆದಿವೆ. ಕರ್ನಾಟಕದ ಭವಿಷ್ಯ ಕರಾಳವಾಗುತ್ತದೆ.

ರಕ್ಷಣೆ ನೀಡುವ ಬದಲಿಗೆ ಚರ್ಚಿಗೆ ನುಗ್ಗಿ ಬಡಿತ ಪೊಲೀಸರಿಂದ



ಕಾವಿಗಳು ಕೋವಿಗಳಾಗುತ್ತಿದ್ದಾರೆ!

ಸರ್ವ ಸಂಘ ಪರಿತ್ಯಾಗದ ದ್ಯೋತಕವಾಗಿ ಕಾವಿತೊಟ್ಟ ನಾಡಿನ ಹೆಸರಾಂತ ಸನ್ಯಾಸಿಗಳು ಕೋವಿಗಳಾಗಿ ಪರಿವರ್ತನೆ ಹೊಂದುತ್ತಿದ್ದಾರೆ. ರಾಜ್ಯದಲ್ಲಿ ಮತಾಂತರ ನಿಷೇಧ ಕಾಯ್ದೆಯನ್ನು ಜಾರಿಗೆ ತರಬೇಕು ಎಂದು ಉಡುಪಿಯಿಂದ ಅಪ್ಪಣೆ ಹೊರಡಿಸುತ್ತಿರುವ ಪೇಜಾವರ ಮಠಾಧೀಶರು ಗಲಭೆಕೋರರಿಗೆ ಕುಮ್ಮಕ್ಕು ನೀಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಯಾವುದೇ ಸಮುದಾಯದ ಮೇಲೆ ಇಂತಹ ಹಲ್ಲೆಗಳು ನಡೆದರೆ ತಾನು ಒಂದು ದಿನ ಉಪವಾಸ ವ್ರತವನ್ನು ಆಚರಿಸುವುದಾಗಿ ಹೇಳುವ ಅವರು ಕಳೆದ 2 ತಿಂಗಳುಗಳಲ್ಲಿ ನಡೆದ 55 ಹಲ್ಲೆಗಳ ಬಗ್ಗೆ ಮೌನವಾಗಿದ್ದಾರೆ. ಕ್ರೈಸ್ತರು ನಡೆಸುತ್ತಿರುವ ಮತಾಂತರವೇ ಈ ಗಲಭೆಗಳಿಗೆ ಕಾರಣವಾಗಿದೆ ಎಂದು ಅವರು ಹೇಳುವ ಮೂಲಕ ಕ್ರೈಸ್ತರ ಮೇಲೆ, ಅವರ ಚರ್ಚುಗಳ ಮೇಲೆ ನಡೆದಿರುವ ದಾಳಿಗಳನ್ನು ಸಮರ್ಥಿಸಿದ್ದಾರೆ.

ಕಾವಿಗಳಲ್ಲಿ ಅಡಗಿರುವ ಕೋವಿಗಳಿಂದ ಹೊರಬರುವ ಒಂದೊಂದು ಇಂತಹ ಗುಂಡುಗಳು ನಾಡಿನ ಸೌಹಾರ್ದ ಪರಂಪರೆ ನಾಶ ಮಾಡುತ್ತಿವೆ. ಆದರೆ ಎಲ್ಲಾ ಕಾವಿಧಾರಿಗಳು ಕೋವಿಯ ಮನಸ್ಸುಳ್ಳವರೆಂದು ಹೇಳಲಾಗದು. ರಾಜ್ಯದಲ್ಲಿ ಇಂದು ಮತೀಯ ಅಲ್ಪಸಂಖ್ಯಾತ ಮೇಲೆ ಪುಂಡಾಟಿಕೆ ನಡೆಸುತ್ತಿರುವ ಹಿಂದುತ್ವ ಸಂಘಟನೆಗಳನ್ನು ಕಟುವಾಗಿ ಟೀಕಿಸುವ ಮಠಾಧೀಶರೂ ಇದ್ದಾರೆ. ಆದರೆ ಅವರ ಸಂಖ್ಯೆ ತೀರಾ ಕಡಿಮೆ. ಪೇಜಾವರ ಹಾಗೂ ಗೋಕರ್ಣವನ್ನು ಕಬಳಿಸಲು ಹೊರಟಿರುವ ರಾಘವೇಶ್ವರ ಮೊದಲಾದ ಕರಾವಳಿಯ ಕಾವಿಗಳು ಬೀಸುತ್ತಿರುವ ಬಲೆಗೆ ಬೀಳುತ್ತಿರುವ ಮಠಾಧೀಶರ ಸಂಖ್ಯೆ ಹೆಚ್ಚುತ್ತಿದೆ. ಬಸವಣ್ಣವರ ಅನುಯಾಯಿಗಳೆಂದು ಹೇಳಿಕೊಳ್ಳುವ ವಿರಕ್ತ ಪರಂಪರೆಯ ಮಠಾಧೀಶರು ಹಾಗೆಯೇ ಶೂದ್ರ ಸಮುದಾಯಗಳನ್ನು ಪ್ರತಿನಿಧಿಸುವ ನಾಡಿನ ಕೆಲವು ಮಠಾಧೀಶರು ವೈದಿಕರ ಬಾಲಂಗೋಚಿಗಳಾಗುತ್ತಿರುವುದು ಆತಂಕದ ಬೆಳವಣಿಗೆ. ಹೀಗೆ ಮತಾಂಧರಾಗಿ ಮತಾಂತರಗೊಳ್ಳುತ್ತಿರುವ ಮಠಾಧಿಪತಿಗಳ ಬಳಗ ಬೆಳೆಯುತ್ತಿದೆ.

ನಿತ್ಯಾನಂದಸ್ವಾಮಿ

ಪೋಲೀಸರು ಪುಂಡರಾಗುತ್ತಿದ್ದಾರೆ!

ಮುಖ್ಯಮಂತ್ರಿ ಯಡಿಯೂರಪ್ಪ, ರಾತ್ರೋರಾತ್ರಿ ಎಂಬಂತೆ ಒಂದು ಸಾವಿರಕ್ಕೂ ಹೆಚ್ಚು ಪೋಲೀಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದಾರೆ. ಕ್ರೈಸ್ತರ ಮೇಲೆ ಭಜರಂಗಿಗಳಿಂದ ದಾಳಿಗಳು ಆರಂಭವಾಗುವ ಕೆಲವೇ ದಿನಗಳ ಮೊದಲು ಪೋಲೀಸರ ಈ ವರ್ಗಾವಣೆ ನಡೆದಿದೆ. ಯಡಿಯೂರಪ್ಪನವರು "ಸರಿಯಾದ ಕೆಲಸಕ್ಕೆ ಸರಿಯಾದ ವ್ಯಕ್ತಿ" ಎಂದು ಹೇಳುವ ಮೂಲಕ ಪೋಲಿಸ್ ವರ್ಗಾವಣೆಯನ್ನು ಸಮರ್ಥಿಸಿದ್ದಾರೆ. ಅತಿ ಹೆಚ್ಚು ವರ್ಗಾವಣೆಗಳು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ನಡೆದಿವೆ. ಇಲ್ಲಿಯೇ ಅತಿ ಹೆಚ್ಚು ದಾಳಿಗಳು ನಡೆದಿದ್ದು, ಮೊದಲು ಮುಸಲ್ಮಾನರ ಮೇಲೆ ಮತ್ತು ಈಗ ಕ್ರೈಸ್ತರ ಮೇಲೆ.

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಪೋಲೀಸರು ಭಜರಂಗಿಗಳಾಗಿ ಮತಾಂತರಗೊಳ್ಳುವುದರ ವೇಗ ಹೆಚ್ಚಾಗಿದೆ. ಮಂಗಳೂರಿನಲ್ಲಿ ಇತ್ತೀಚೆಗೆ ಚರ್ಚುಗಳ ಮೇಲೆ ನಡೆದ ದಾಳಿಗಳ ಸಂದರ್ಭದಲ್ಲಿ ಪೋಲಿಸರು ಭಜರಂಗಿ ಬಂಟರಾಗಿಯೇ ಕೆಲಸ ಮಾಡಿದ್ದಾರೆ. ದಾಳಿ ಮಾಡುತ್ತಿದ್ದ ಭಜರಂಗಿ ಪುಂಡರನ್ನು ಬಂಧಿಸುವ ಬದಲು ಚರ್ಚುಗಳಲ್ಲಿ ಪ್ರಾರ್ಥನೆಗಾಗಿ ಸೇರಿದ್ದ ಕ್ರೈಸ್ತರನ್ನು, ಮಹಿಳೆಯರನ್ನು, ಮುದುಕರು ಎನ್ನುವುದನ್ನು ನೋಡದೇ ಲಾಠಿಗಳಿಂದ ಹೊಡೆದು ಓಡಿಸಿದ್ದಾರೆ. ಚರ್ಚುಗಳ ಒಳಗೆ ನುಗ್ಗಿ

ನಿಷ್ಪಕ್ಷಪಾತ ಕ್ರಮ ಅಗತ್ಯ

"ಕೇಂದ್ರ ಸರ್ಕಾರದ ಎಚ್ಚರಿಕೆಯ ನಂತರವೂ ಚರ್ಚ್‌ಗಳ ಮೇಲಿನ ದಾಳಿಗಳನ್ನು ನಿಯಂತ್ರಿಸುವಲ್ಲಿ ರಾಜ್ಯ ಸರ್ಕಾರ ಯಶಸ್ವಿಯಾಗಿಲ್ಲ. ಬೆಂಗಳೂರಿನ ಎರಡು ಮತ್ತು ಕೊಡಗಿನ ಒಂದು ಚರ್ಚ್ ಮೇಲೆಯೂ ದಾಳಿ ನಡೆದಿದೆ. ಇದನ್ನು ತಡೆಯುವಲ್ಲಿ ಆಡಳಿತಾಂಗ ಮತ್ತು ಕಾನೂನು ಸುವ್ಯವಸ್ಥೆ ಹೊಣೆ ಹೊತ್ತಿರುವವರು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ರಾಜ್ಯ ಸರ್ಕಾರದ ಅಸಹಾಯಕತೆ ನಾಚಿಕೆಗೇಡು. ಅಲ್ಪಸಂಖ್ಯಾತರಿಗೆ ರಕ್ಷಣೆ ನೀಡಬೇಕೆಂದು ಕೇಂದ್ರ ಸರ್ಕಾರ 24 ಗಂಟೆಗಳಲ್ಲಿ ಎರಡು ಪತ್ರಗಳನ್ನು ರವಾನಿಸಿದ ನಂತರ ಮಾತ್ರ ಅಪಾಯವನ್ನು ಮನಗಂಡ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ದಾಳಿಕೋರರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕೆಂದು ಸೂಚನೆ ನೀಡಿದರು. ಇದರ ಪರಿಣಾಮವಾಗಿ ಚರ್ಚ್‌ಗಳ ಮೇಲಿನ ದಾಳಿಯನ್ನು ಸಮರ್ಥಿಸಿಕೊಳ್ಳುತ್ತಿದ್ದ ಮತ್ತು ಅಂಥ ದಾಳಿಗಳನ್ನು ಮುಂದುವರೆಸುವೆ ಎಂದು ಬೆದರಿಕೆ ಹಾಕಿದ್ದ ಬಜರಂಗ ದಳದ ಸಂಚಾಲಕ ಮಹೇಂದ್ರಕುಮಾರ್ ಅವರನ್ನು ಬಂಧಿಸಲಾಯಿತು. ನ್ಯಾಯಾಂಗ ತನಿಖೆ ಪ್ರಕಟಿಸಲಾಯಿತು. ಕೇಂದ್ರ ಸರ್ಕಾರ ಒತ್ತಡ ತರದಿದ್ದರೆ ಬಹುಶ: ಇಂಥ ಕ್ರಮಕ್ಕೆ ಸರ್ಕಾರ ಮುಂದಾಗುತ್ತಿರಲಿಲ್ಲ."

ಪ್ರಜಾವಾಣಿ ಸಂಪಾದಕೀಯದಿಂದ


ಪೊಲೀಸರೇ ಪೀಠೋಪಕರಣಗಳನ್ನು ಧ್ವಂಸ ಮಾಡಿದ್ದಾರೆ. ಪೆರಮಣ್ಣೂರು ಸೈಂಟ್ ಸೆಬಾಸ್ಟಿಯನ್ ಚರ್ಚಿನ ಒಳನುಗ್ಗಿದ ಪೊಲೀಸರು ಅಲ್ಲಿದ್ದ ಮೇರಿ ಮಾತೆಯ ಪ್ರತಿಮೆಯನ್ನು ಒಡೆದು ಹಾಕಿದ್ದಾರೆ. ತಮ್ಮ ಚರ್ಚುಗಳ ರಕ್ಷಣೆಗೆಂದು ಧಾವಿಸಿದ ಕ್ರೈಸ್ತ ಯುವಕರನ್ನು ರಕ್ತ ಸುರಿಯುವವರೆಗೂ ಹೊಡೆದು ಜೈಲಿಗೆ ತಳ್ಳಿದ್ದಾರೆ. ದ.ಕ. ಜಿಲ್ಲೆಯ ಎಸ್.ಪಿ. ನೇತೃತ್ವದಲ್ಲಿ ನಡೆದ ಈ ಪೋಲೀಸ್ ಕಾರ್ಯಾಚರಣೆಯಲ್ಲಿ ಪೋಲಿಸರು ಬಜರಂಗದಳದ ಇನ್ನೊಂದು ಪಡೆಯಾಗಿ ಕೆಲಸ ಮಾಡಿದ್ದಾರೆ. ಪೋಲೀಸರು ಈ ರೀತಿ ಫ್ಯಾಶಿಸ್ಟ್ ಮನೋವೃತ್ತಿಗೆ ಮತಾಂತರ ಗೊಳ್ಳುತ್ತಿರುವುದು ಮುಂಬರುವ ಅಪಾಯದ ಮುನ್ಸೂಚನೆಯಾಗಿದೆ. ದ.ಕ. ಜಿಲ್ಲೆಯಲ್ಲಿ ಕೋಮುವಾದದ ವಿರುದ್ಧದ ಹೋರಾಟದ ಮುಂಚೂಣಿರುವ ಸಿಪಿಐ(ಎಂ) ಮತ್ತು ಡಿವೈಎಫ್ಐ ಕಾರ್ಯಕರ್ತರು ಇತ್ತೀಚೆಗೆ ಕುಡಿಯುವ ನೀರಿನ ದರ ಏರಿಕೆಯನ್ನು ವಿರೋಧಿಸಿ ಪ್ರತಿಭಟನೆ ನಡೆಸುತ್ತಿದ್ದಾಗ ಅಮಾನುಷವಾಗಿ ಥಳಿಸಿದರು ಇದೇ ಪೊಲೀಸರು.

ಸೌಹಾರ್ದತೆಯನ್ನು ಸಾಯಿಸುವ ಸಂಘರ್ಷ

ಕರ್ನಾಟಕ ಕೋಮು ಸೌಹಾರ್ದತೆಗೆ ಹೆಸರಾಗಿದೆ. ಇಲ್ಲಿನ ಬಹುಸಂಖ್ಯಾತ ಹಿಂದುಗಳಾಗಲಿ, ಅಲ್ಪಸಂಖ್ಯಾತ ಮುಸಲ್ಮಾನರು, ಕ್ರೈಸ್ತರು ಹಾಗೂ ಇತರ ಸಮುದಾಯಗಳಾಗಲಿ [illegible] ಶತಮಾನಗಳಿಂದ ಅನ್ಯೋನ್ಯವಾಗಿ ಬದುಕುತ್ತಾ ಬಂದಿದ್ದಾರೆ. ತಮ್ಮ ಧಾರ್ಮಿಕ ನಂಬಿಕೆಗಳು ಭಿನ್ನ ಭಿನ್ನವಾಗಿದ್ದರೂ, ಕೆಲವೊಮ್ಮೆ ಪರಸ್ಪರ ವಿರುದ್ಧವಾಗಿದ್ದರೂ ಅವರ ನಡುವೆ ಕೋಮು ಸಾಮರಸ್ಯಕ್ಕೆ ಕೊರತೆ ಇರುತ್ತಿರಲಿಲ್ಲ.

ನೂರಾರು ವರ್ಷಗಳಿಂದಲೂ ಕನ್ನಡ ನಾಡಿನಲ್ಲಿ ವಿಭಿನ್ನ ಕೋಮಿನ ಜನ ಸಾಮರಸ್ಯದಿಂದ ಬದುಕಿದ್ದಾರೆ ಎನ್ನುವುದಕ್ಕೆ ಇಲ್ಲಿ ಬೆಳೆದು ಬಂದಿರುವ ಸೂಫಿ ಪಂಥ ಒಂದು ಪ್ರಮುಖ ಸಾಕ್ಷಿಯಾಗಿದೆ. 'ದೇವರನ್ನು ತಲುಪಲು ಬಹಳಷ್ಟು ದಾರಿಗಳಿವೆ. ಭಗವಂತನ ದೃಷ್ಟಿಯಲ್ಲಿ ಹಿಂದೂ ಮುಸಲ್ಮಾನರೆಂಬ ಬೇಧ ಇಲ್ಲ" ಎನ್ನುವುದೇ ಸೂಫಿ ಧರ್ಮಕ್ಕೆ ಆಕರ್ಷಿತರಾದವರಿಗಿಂತ ಸೂಫಿ ಸಂತರ ಮೂಲಕ ಇಸ್ಲಾಂ ಧರ್ಮವನ್ನು ಸ್ವೀಕರಿಸಿಕೊಂಡವರ ಸಂಖ್ಯೆ ಹೆಚ್ಚು. ಖಾಜಾ ಬಂದಾನವಾಜ್ ಈ ಪಂಥದ ಪ್ರಮುಖ ಸಂತರು. ಬಾಬಾಬುಡನ್‌ಗಿರಿಯ ದಾದಾ ಕಲಂಧರ್ ಇದೇ ಸಂತರ ಕ್ಷೇತ್ರಗಳಿದ್ದು ಇವುಗಳು ಸಹಜವಾಗಿಯೇ ಮುಸಲ್ಮಾನರ ಮತ್ತು ಹಿಂದುಗಳ ತತ್ವ ಪದಗಳು ಹಾಗೂ ಸುಭಾಷಿತಗಳು ನಾಡಿನ ಜಾನಪದ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ. ಸೂಫಿ ಸಾಹಿತ್ಯ ಮುಖ್ಯವಾಗಿ ಕೋಮು ಸೌಹಾರ್ದತಾ ಸಾಹಿತ್ಯವಾಗಿದೆ. ಸೂಫಿ ಸಂತರು ಸಾರಿದ ಸೌಹಾರ್ದತೆಯನ್ನು ಸಾಯಿಸಲು ಯತ್ನಿಸುತ್ತಿರುವವರನ್ನು ಮನುಷ್ಯರೆನ್ನಬಹುದೇ?

ಇಸ್ಲಾಂ ಮೂಲ ಸೂಫಿಗಳಂತೆ ಹಿಂದೂಗಳ ಕಡೆಯೂ ಕೋಮು ಸಾಮರಸ್ಯವನ್ನು ಪ್ರತಿಪಾದಿಸುವ ಪರಂಪರೆ ಇದೆ. ಗೋಕಾಕ್ ತಾಲ್ಲೂಕಿನ ಸಾವಳಗಿ ಮಠ, ಶಿರಹಟ್ಟಿಯ ಫಕೀರೇಶ್ವರ ಮಠ ಇಂತಹ ಭವ್ಯ ಪರಂಪರೆಯನ್ನು ಮೆರೆಯುವ ಕ್ಷೇತ್ರಗಳು. ಈ ಮಠಗಳು ಹಿಂದೂ ಹಾಗೂ ಮುಸ್ಲಿಂ ಶಿಲ್ಪ ವಿನ್ಯಾಸವನ್ನು ಹೊಂದಿವೆ. ಇಲ್ಲಿನ ಉತ್ಸವಗಳಲ್ಲಿ ಹಿಂದೂಗಳ ಜೊತೆಯಲ್ಲಿ ಮುಸಲ್ಮಾನರೂ ಭಾಗವಹಿಸುತ್ತಾರೆ. ಇಲ್ಲಿನ ಪೀಠಾಧಿಪತಿಗಳು ಉತ್ಸವಗಳಲ್ಲಿ ರಾಜಪೋಷಾಕು ಹಾಗೂ ಮುಸ್ಲಿಂ ಪದ್ಧತಿಯ ಹಸಿರು ಬಣ್ಣದ ಪೋಷಾಕು ಹಾಗೂ ಪೇಟಾ ಧರಿಸುತ್ತಾರೆ. ಜಾತ್ರೆ ಸಂದರ್ಭದಲ್ಲಿ ಹಸಿರು ಮತ್ತು ಕಾವಿ ಬಣ್ಣದ ಧ್ವಜಗಳು ಮಠದಲ್ಲಿ ಮೇಲೆ ಹಾರಾಡುತ್ತಿರುತ್ತವೆ. ಎರಡು


ಧ್ವಂಸಗೊಂಡ ಬಾಲಯೇಸು

ವಿಭಿನ್ನ ಸಂಸ್ಕೃತಿಗಳ ಸುಮಧುರ ಸಮ್ಮಿಲನ! ಈ ಸಾಮರಸ್ಯದ ಪರಂಪರೆಯನ್ನು ಸಾಯಿಸಬಯಸುವವರೆಗೆ ಏನೆನ್ನಬೇಕು?

ಶತಮಾನಗಳಿಂದ ಹಿಂದೂ- ಮುಸ್ಲಿಂ-ಕ್ರೈಸ್ತರು ಒಂದಾಗಿ ಬಾಳಿದ ನೆಲ ಕರಾವಳಿ. ಇಲ್ಲಿ ಮತಾಂತರ ನಡೆದಿಲ್ಲ ಎಂದರೆ ತಪ್ಪಾದೀತು. ನಡೆದಿದೆ. ನೂರಾರು ವರ್ಷಗಳ ಹಿಂದೆ. ಹಿಂದೂ ದೇವರು ದೇವತೆಗಳನ್ನು ಹೀಯಾಳಿಸುವ, ಹಿಂದೂ ಸಮಾಜದಲ್ಲಿರುವ ಜಾತಿ ಪದ್ಧತಿಯನ್ನು ಟೀಕಿಸುವ ಸಾಹಿತ್ಯ ಪ್ರಕಟವಾಗುತ್ತಿತ್ತು. ಇತ್ತೀಚೆಗೆ ಅದೆಲ್ಲವೂ ಕಡಿಮೆಯಾಗಿದೆ. ಇತರ ಧರ್ಮಗಳಲ್ಲಿರುವ ದೋಷಗಳನ್ನೇ ದೊಡ್ಡದಾಗಿಸುವ ಬದಲು ಅವುಗಳಲ್ಲಿ ಇರುವ ಒಳ್ಳೆಯ ಅಂಶಗಳನ್ನು ಅಳವಡಿಸಿಕೊಳ್ಳಬೇಕೆಂಬ ವಿಚಾರಕ್ಕೆ ಇಂದು ಪ್ರಾಮುಖ್ಯತೆ ಬಂದಿದೆ. ಎಂದೋ ನಡೆದು ಹೋಗಿರುವ ತಪ್ಪುಗಳಾಗಿ ಇಂದಿನ ಮುಸಲ್ಮಾನರನ್ನಾಗಲಿ, ಕ್ರೈಸ್ತರನ್ನಾಗಲಿ ಶಿಕ್ಷಿಸಲು ಹಿಂದುತ್ವ ಶಕ್ತಿಗಳು ಹೊರಟಿರುವುದು ಎಷ್ಟು ಮಾತ್ರಕ್ಕೂ ಸರಿಯಲ್ಲ.

ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಕರ್ನಾಟಕದ ಕ್ರೈಸ್ತರ ಕೊಡುಗೆ ಅಪಾರವಾದುದು. ಬೆಂಗಳೂರಿ ಆರ್ಚ್ ಬಿಷಪ್ ಬರ್ನಾಡ್ ಮೊರಸ್ ಹೇಳಿರುವಂತೆ, 'ಸರ್ಕಾರ ಮಾಡದ ಕಾರ್ಯವನ್ನು ಕ್ರೈಸ್ತರು ಮಾಡುತ್ತಿದ್ದಾರೆ'. ಕರಾವಳಿಯ ಕೈಗಾರೀಕರಣದಲ್ಲಿ ಕ್ರೈಸ್ತ ಸಂಸ್ಥೆಗಳ ಪಾತ್ರ ಗಣನೀಯವಾಗಿದೆ. ಕರಾವಳಿಯ ಭೂತಾರಾಧನೆಗಳಲ್ಲಿ ಮುಸಲ್ಮಾನರು, ಕ್ರೈಸ್ತರು ಸಹ ಕೋಲ-ಹರಕೆ ಕೊಡುತ್ತಾರೆ. ಕ್ರೈಸ್ತರು ಬೆಳೆದ ಮಲ್ಲಿಗೆ ಹಿಂದೂ ದೇವಸ್ಥಾನಗಳಲ್ಲಿನ ಪೂಜೆಗೆ ಅರ್ಹವಾಗುತ್ತದೆ.ಮುಸಲ್ಮಾನರು ತಯಾರಿಸಿದ ಸಿಡಿಮದ್ದಿನಲ್ಲಿಯೇ ರಥದ ಗಾಲಿಗಳು ಚಲಿಸುತ್ತವೆ. ಹಿಂದೂಗಳು ಪೂಜಿಸುವ ಬೊಬ್ಬರ್ಯ ಒಬ್ಬ ಮುಸಲ್ಮಾನ. ಬಪ್ಪಬ್ಯಾರಿ ಎಂಬ ಮುಸಲ್ಮಾನ ಕಟ್ಟಿಸಿದ ಹಿಂದೂ ದೇವಾಲಯ ಇಂದು ಒಪ್ಪನಾಡು ಕ್ಷೇತ್ರವಾಗಿದೆ. ಇಲ್ಲಿನ ಅನೇಕ ಪುರಾತನ ಚರ್ಚುಗಳನ್ನು ನಿರ್ಮಿಸಲು ನೆರವಾದವರು ಅಂದಿನ ಹಿಂದೂ ಅರಸರು. ಬೆಂಗಳೂರಿನ ವಿವೇಕ ನಗರದ ಬಾಲ ಯೇಸುವಿನ ಚರ್ಚ್ ಶಿವಾಜಿನಗರದ ಮಾತೆ ಮೇರಿಯ ಬಾಸಿಲಿಕಾ ಹರಿಹರದ ಆರೋಗ್ಯ ಮಾತೆ ಚರ್ಚ್, ದೋರ್ನಹಳ್ಳಿಯ ಸಂತ ಅಂತೋನಿಯವರ ಚರ್ಚ್, ಕಾರ್ಕಳದ ಸಂತ ಲಾರೆನ್ಸ್ ಚರ್ಚ್‌ಗಳಿಗೆ ಬರುವವರಲ್ಲಿ ಅನ್ಯ ಧರ್ಮಿಯರು ದೊಡ್ಡ ಸಂಖ್ಯೆಯಲ್ಲಿ ಇರುತ್ತಾರೆ.

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ತಾಳಿಕಟ್ಟೆ ಎಂಬ ಪುಟ್ಟ ಗ್ರಾಮದಲ್ಲಿ ಮುಸ್ಲಿಂ ಸಮುದಾಯಕ್ಕೆ ಸೇರಿದ ಒಬ್ಬನೂ ಇಲ್ಲ. ಆದರೆ ಇಲ್ಲಿ ಸುಮಾರು 200 ವರ್ಷಗಳಷ್ಟು ಹಳೆಯದಾದ 'ಹಜರತ್ ಸೈಯದ್ ಇಸ್ಮಾಯಿಲ್' 'ಶಾವಲಿ ಖಾದ್ರಿ' ದರ್ಗಾ ಇದೆ. ದರ್ಗಾಕ್ಕೆ ಸಂಬಂಧಿಸಿದ ಎಲ್ಲ ಧಾರ್ಮಿಕ ಕಾರ್ಯಗಳನ್ನು ಗ್ರಾಮದ ಹಿಂದೂಗಳೇ ನಡೆಸಿಕೊಂಡು ಬರುತ್ತಿದ್ದಾರೆ. ಇಂತಹ ಸೌಹಾರ್ದ ಪರಂಪರೆ ನಾಶವಾಗಬೇಕೇ?

ಕೋಮು ಸಂಘರ್ಷದಿಂದ ಯಾರಿಗೆ ಲಾಭ? ದುಡಿಯುವ ಜನಗಳನ್ನು ಸುಲಿಯುವ ವರ್ಗಗಳಿಗೆ ಲಾಭ. ರಾಜಕೀಯವನ್ನು ದಂಧೆ ಮಾಡಿಕೊಂಡಿರುವ ಜನಗಳಿಗೆ ಲಾಭ. ಯಡಿಯೂರಪ್ಪನಂತಹ ಗೋಮುಖ ವ್ಯಾಘ್ರರಿಗೆ ಲಾಭ. ಮುಂಬರುವ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಯಡ್ಡಿ ಕರ್ನಾಟಕದ ಮೋದಿಯಾಗಲು ಹೊರಟಿದ್ದಾರೆ. ಹಿಂದೂ ಧರ್ಮಕ್ಕೆ ಮುಸಲ್ಮಾನರಿಂದ ಮತ್ತು ಕ್ರೈಸ್ತರಿಂದ ಅಪಾಯವಿದೆ ಎಂಬ ಗುಲ್ಲೆಬ್ಬಿಸಿ ಬಹುಸಂಖ್ಯಾತ ಮತ ಬ್ಯಾಂಕ್ ಮಾಡುವ ಮುಖ್ಯ ಉದ್ದೇಶ ಒಂದು ಕಡೆಯಾದರೆ ಅಲ್ಪಸಂಖ್ಯಾತ ಮುಸಲ್ಮಾನರನ್ನು ಮತ್ತು ಕ್ರೈಸ್ತರನ್ನು ಬೆದರಿಸಿ ಅವರ ಮತಗಳನ್ನು ಬಲವಂತದಿಂದ ಕಿತ್ತುಕೊಳ್ಳುವುದು ಕರ್ನಾಟಕದ ಮೋದಿಗಳ ದುರಾಲೋಚನೆ ಇನ್ನೊಂದು ಕಡೆ. ಶಾಂತಿಪ್ರಿಯರಾದ ಕರ್ನಾಟಕದ ಬಹುಸಂಖ್ಯಾತ ಹಿಂದೂಗಳಿಗೆ ಈ ಪ್ರಯತ್ನದ ಬಗ್ಗೆ ಸಹಮತ ಇಲ್ಲ. ಆದರೆ ಇವರೆಲ್ಲರನ್ನು ಬಲವಂತವಾಗಿ ಮತಾಂತರ ಮಾಡಲು ಹೊರಟಿದ್ದಾರೆ ಸಂಘ ಪರಿವಾರದವರು. ಕೆಲವು ಹಿಂದೂಗಳು ಕ್ರೈಸ್ತರಾಗಿಯೂ ಅಥವಾ ಮುಸಲ್ಮಾನರಾಗಿಯೇ ಮತಾಂತರ ಗೊಂಡರೆ ಯಾರಿಗೂ ಏನೂ ಅಪಾಯವಿಲ್ಲ. ಆದರೆ ಮುಗ್ಧರಾಗಿರುವ ಬಹುಸಂಖ್ಯಾತ ಹಿಂದೂ ಮನಸ್ಸುಗಳನ್ನು ಫ್ಯಾಶಿಸ್ಟ್ ಮೆದುಳು ತುಂಬುವ ಪ್ರಯತ್ನ ಹೆಚ್ಚು ಅಪಾಯಕಾರಿಯಾಗಿದೆ ಮುಸಲ್ಮಾನರನ್ನು, ಕ್ರೈಸ್ತರನ್ನು ದೇಶದ್ರೋಹಿಗಳೆಂದು ಬಿಂಬಿಸುವ ಪ್ರಯತ್ನ ಅಪಾಯಕಾರಿಯಾಗಿದೆ.

ದೇಶದಲ್ಲಿ ಇಂದು ಅಲ್ಪಸಂಖ್ಯಾತ ಯುವಕರು ಗಣನೀಯ ಸಂಖ್ಯೆಯಲ್ಲಿ ಭಯೋತ್ಪಾದನೆಯತ್ತ ಆಕರ್ಷಿತರಾಗುತ್ತಿರುವ ಆತಂಕದ ಬೆಳವಣಿಗೆಯನ್ನು ನಾವು ಕಾಣುತ್ತಿದ್ದೇವೆ. ಭಯೋತ್ಪಾದನೆಯನ್ನು ಕಾನೂನಿನ ಮೂಲಕ ತಡೆಗಟ್ಟಲು ಸಾಧ್ಯವಿಲ್ಲ. ಭಯೋತ್ಪಾದನೆಯ ಮೂಲ ಎಲ್ಲಿದೆ? ಯಾಕೆ ಅಲ್ಪಸಂಖ್ಯಾತ ಯುವಕರು ಇಂದು ಸಾಯಲು ಸಿದ್ಧರಾಗಿ ಸಾಯಿಸಲು ಹೊರಟಿದ್ದಾರೆ? ಒಂದು ಕಡೆ ಆರ್ಥಿಕ ಅಭದ್ರತೆ ಅವರನ್ನು ಕಾಡುತ್ತಿದೆ. ಇನ್ನೊಂದು ಕಡೆ ಅವರ ಸಮುದಾಯದ ಮೇಲೆ ಬಹುಸಂಖ್ಯಾತ ಸಮುದಾಯದಿಂದ ಆಗುತ್ತಿರುವ ದಾಳಿ ದೌರ್ಜನ್ಯಗಳಿಂದ ಅವರು ಹತಾಶರಾಗುತ್ತಿದ್ದಾರೆ. ಅವರ ಮೇಲೆ, ಅವರ ಆಸ್ತಿಪಾಸ್ತಿಗಳ ಮೇಲೆ, ಅವರ ಪ್ರಾರ್ಥನಾಲಯಗಳ ಮೇಲೆ ನಡೆಯುತ್ತಿರುವ ದಾಳಿಗೆ ವಿರುದ್ಧ ಸೇಡು ತೀರಿಸಿಕೊಳ್ಳಲು ಅವರು ಹಾತೊರೆಯುವಂತಾಗಿದೆ. ಭಾರತದ ಅಭಿವೃದ್ಧಿಯನ್ನು ಬಯಸದ ಗಡಿಯಾಚೆಗಿನ ಶಕ್ತಿಗಳು ಈ ಹತಾಶ ಯುವಕರೊಂದಿಗೆ ಕೈ ಜೋಡಿಸಲು ಸಿದ್ದರಿದ್ದಾರೆ. ಜಾರ್ಜ್‌ಬುಶ್‌ನಂತವನು ಅಮೇರಿಕಾಕ್ಕೆ ಅಧ್ಯಕ್ಷನಾಗಿ ಇರುವವರೆಗೂ ಸಾಮ್ರಾಜ್ಯಶಾಹಿ ಬದುಕಿರುವವರೆಗೂ ವಿಶ್ವದಲ್ಲಿ ಭಯೋತ್ಪಾದನೆ ಹೆಚ್ಚಾಗದೆ ಇರಲಾರದು. ಭಾರತದಲ್ಲಿ ಹಿಟ್ಲರ್ ಸಂತತಿ ಇರುವವರೆಗೂ ಭಯೋತ್ಪಾದನೆ ಕಡಿಮೆಯಾಗದು.

ಕೊನೆಯದಾಗಿ ಒಂದು ಮಾತು. ಹಾದಿ ತಪ್ಪಿದ ಯುವಕರು ಭಯೋತ್ಪಾದಕರಾಗುತ್ತಿದ್ದಾರೆ. ಅಮಾಯಕರನ್ನು ಸಾಯಿಸುತ್ತಿದ್ದಾರೆ. ಆದರೆ ಅವರು ಯಾರೂ ಮಹಿಳೆಯರ ಮೇಲೆ ಅತ್ಯಾಚಾರ ಮಾಡಿದ ಉದಾಹರಣೆಗಳಿಲ್ಲ. ಒರಿಸ್ಸಾದಲ್ಲಿ ಕ್ರೈಸ್ತರ ಮೇಲೆ ನಡೆದ ದಾಳಿಗಳಲ್ಲಿ ಹಿಂದುತ್ವದ ಭಯೋತ್ಪಾದಕರು ಕ್ರೈಸ್ತ ಸನ್ಯಾಸಿಯರನ್ನು ವಿವಸ್ತ್ರಗೊಳಿಸಿ ಸಾಮೂಹಿಕ ಅತ್ಯಾಚಾರವೆಸಗಿದ್ದಾರೆ! ಇವರು ಹಿಂದುಗಳೇ?


ಪೊಲೀಸರ ಕ್ರೂರ ವರ್ತನೆ

"ಚರ್ಚ್ ಮೇಲಿನ ಧಾಳಿ ಸಂಬಂಧ ಕರ್ನಾಟಕದ ವಿವಿಧ ಭಾಗಗಳಲ್ಲಿ ಇತ್ತೀಚೆಗೆ ನಡೆದ ಹಿಂಸಾಚಾರದ ವೇಳೆ ಕರ್ನಾಟಕದ ಪೊಲೀಸರು ಕ್ರೂರವಾಗಿ ವರ್ತಿಸಿದ್ದಾರೆ. ಇಡೀ ಘಟನೆಯನ್ನು ನಿರ್ವಹಿಸಿದ ರೀತಿ ಸ್ವಲ್ಪವೂ ಸರಿ ಇರಲಿಲ್ಲ.

ಚರ್ಚ್ ಮೇಲೆ ಏಕಾಏಕಿ ಧಾಳಿ ನಡೆಯಿತು ಎಂಬುದು ಸುಳ್ಳು. ಎಲ್ಲಾ ಧಾಳಿಗಳು ಪೂರ್ವ ನಿಯೋಜಿತವಾಗಿದ್ದವು. ಮತೀಯವಾದಿಗಳು ನಡೆಸಿದ ಈ ಧಾಳಿಯ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಂಪೂರ್ಣ ಅರಿವಿತ್ತು. ಕ್ರೈಸ್ತ ಸನ್ಯಾಸಿನಿಯರ ಮೇಲೆ ಧಾಳಿ ನಡೆಸುವ ಮೂಲಕ ಪೊಲೀಸರು ಕ್ರೂರವಾಗಿ ವರ್ತಿಸಿದ್ದಾರೆ."

ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ

(ರಾಜ್ಯಕ್ಕೆ ಭೇಟಿ ನೀಡಿದ ನಂತರ)





ಮುದ್ದು ಮಗು ಜನಿಸಿದ್ದು ಹೆಣ್ಣಾಗಿ. ಹೆತ್ತವರು ಚಿಂತೆಗೊಳಗಾದರು. ಈ ಮಗುವನ್ನು ಸ್ವೀಕರಿಸಲು ಸಿದ್ಧರಾಗಲೇ ಇಲ್ಲ. ಬಹಿರಂಗ ಮಾರಾಟಗಳೂ ನಡೆಯುತ್ತಿಲ್ಲ. ಏನು ಮಾಡುವುದು? ತಂದೆಯಾದವನು ಉಪಾಯ ಮಾಡಿದ. ಹರಿತ ಚೂರಿ ತಂದು, ಆಗ ತಾನೇ ಈ ಲೋಕದ ವಾತಾವರಣಕ್ಕೆ ಒಗ್ಗಿಕೊಳ್ಳುತ್ತಿರುವ ಒಂದೇ ಒಂದು ದಿನದ ಎಳೆ ಕಂದನ ಎದೆಗೆ ಇಳಿಸಿಯೇ ಬಿಟ್ಟ!!

'ಕರುಳ ಒಳಗಿನ ಕತ್ತರಿ.....'

ಹೆಣ್ಣು ಭ್ರೂಣ ಹತ್ಯೆ ತಡೆಗಾಗಿ ವಿಭಾಗ ಮಟ್ಟದ ವರ್ಕ್‌ಶಾಪ್(ಕಾರ್ಯಾಗಾರ) ನಡೆಯಿಸಿ, ಥಕಾವಟ್ಟು ಪರಿಹರಿಸಿಕೊಳ್ಳುವುದರೊಳಗೇ ಪತ್ರಿಕೆಯಲ್ಲಿ ಆಘಾತಕಾರಿ ಸುದ್ದಿಯೊಂದು ಬಿತ್ತರವಾಯ್ತು.

ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಕಾಶಾಪುರ ತಾಂಡಾದಲ್ಲಿ ಈ ಭೀಬತ್ಸ ಘಟನೆ ನಡೆಯಿತು. ಕೊಂಚಾವರಂ ಪ್ರದೇಶ ಪೂರ್ತಿ ಕಳೆದ ಆರೇಳು ವರ್ಷಗಳ ಹಿಂದೆ, ಮಕ್ಕಳ ಮಾರಾಟದ ಸುದ್ದಿ ಕೇಂದ್ರವಾಗಿತ್ತು. ಈ ಮತ್ತದೇ ಕರುಳಿರಿಯುವ ಪ್ರಕರಣ ತಲ್ಲಣದ ಅಲೆಗಳೆಬ್ಬಿಸುತ ಬಂದಿತು. ಮೊದಲ ಮೂರು ಮಕ್ಕಳು ಹೆಣ್ಣು ಕಂದಗಳೇ... ನಾಲ್ಕನೆಯದ್ದೇನಾದರೂ ಗಂಡಾಗಬಹುದೆಂದು, ದಂಪತಿಗಳು ಕಾದರು. ಬಡತನದ ಕಾರಣ ಪಟ್ಟಣಕ್ಕೆ ಹೋಗಿ ಸ್ಕ್ಯಾನ್ ಮಾಡಿಸಿಕೊಳ್ಳಲಿಲ್ಲ. ಮುದ್ದು ಮಗು ಜನಿಸಿದ್ದು ಹೆಣ್ಣಾಗಿ. ಹೆತ್ತವರು ಚಿಂತೆಗೊಳಗಾದರು. ಈ ಮಗುವನ್ನು ಸ್ವೀಕರಿಸಲು ಸಿದ್ಧರಾಗಲೇ ಇಲ್ಲ. ಬಹಿರಂಗ ಮಾರಾಟಗಳೂ ನಡೆಯುತ್ತಿಲ್ಲ. ಏನು ಮಾಡುವುದು? ತಂದೆಯಾದವನು ಉಪಾಯ ಮಾಡಿದ. ಹರಿತ ಚೂರಿ ತಂದು, ಆಗ ತಾನೇ ಈ ಲೋಕದ ವಾತಾವರಣಕ್ಕೆ ಒಗ್ಗಿಕೊಳ್ಳುತ್ತಿರುವ ಒಂದೇ ಒಂದು ದಿನದ ಎಳೆ ಕಂದನ ಎದೆಗೆ ಇಳಿಸಿಯೇ ಬಿಟ್ಟ. ತನ್ನದೆ ರಕ್ತ ಮಾಂಸ ಹಂಚಿಕೊಂಡು ಈ ಭೂಮಿಗೆ ಬಂದ ಹೆಂಗೂಸಿನ ಪ್ರಾಣ ಪಕ್ಷಿಯ ಹತ್ಯೆಯನ್ನು ತನ್ನ ಕೈಯಿಂದಲೇ ನೆರವೇರಿಸಿದ ಕಟುಕ ತಂದೆ. ಒತ್ತರಿಸಿ ಬರುವ ಎದೆ ಹಾಲು ಎಲ್ಲಿ ಚೆಲ್ಲುವಳು ಆ ತಾಯಿ? ಎಳೆಕೂಸಿನ ಕೊಲೆ ಮಾಡಿದ ರಕ್ತಸಿಕ್ತ ಕೈಗಳು ಎಲ್ಲಿ ತೊಳೆದುಕೊಳ್ಳುವನು ಆ ತಂದೆ? ಮತ್ತೆಂದೂ ವಾಪಸು ಬರಲಾಗದಂತೆ, ಮಿಸುಕಾಡದೇ ಹೆಣವಾದ ಕೂಸು ಕನಸಲ್ಲಾದರೂ ಕಾಡದೇ? ಎಂಥ ಪಾಷಾಣ ಹೃದಯ? ಹೆಣ್ಣಾಗಿ ಹುಟ್ಟಿದ್ದೇ ಹೆತ್ತವರ ಕೈಯಿಂದ ಹತ್ಯೆಯಾಗಲು ಕಾರಣ. ತಾಯಿ ಎದೆ ಹಾಲು ನಂಜಾಗಿ ಕೊಲ್ಲಿತು. ತಂದೆಯೆಂಬ ಬೇಲಿಯೇ ಎದ್ದು ಹೊಲ ನುಂಗಿ ನೊಣೆಯಿತು.

ಎದೆ ಸೀಳುತ್ತಿತ್ತು

ಒಂದು ಖಂಡನೆಯ ಹೇಳಿಕೆ ಪತ್ರಿಕೆಗೆ ಬರೆದು ಕಳಿಸಿದೆವು. ಆ ಪ್ರದೇಶದ ಬಡತನ ನೀಗಿಸಲು ಸರ್ಕಾರ ಕ್ರಮ ವಹಿಸಬೇಕೆಂದು ಒತ್ತಾಯಿಸಿದೆವು. ಸಾಮಾಜಿಕ ಪ್ರಜ್ಞೆ ಎತ್ತರಿಸಲು, ಲಿಂಗ ತಾರತಮ್ಯ ತೊಡೆಯಲು ಕಾರ್ಯಕ್ರಮ ರೂಪಿಸುವ ಆಲೋಚನೆಗಳು ಮುಕುರಿದವು. ಏನು ಮಾಡುವುದು. ಆರ್ಥಿಕ ಬೇಡಿಕೆ ಪಟ್ಟಿಯಿಟ್ಟು, ಚಳವಳಿ ನಡೆಸುವುದು ಮಾತ್ರ ಅಭ್ಯಾಸ ಮಾಡಿಕೊಂಡವರಿಗೆ ಇಂಥ ಪ್ರಶ್ನೆಗಳೆಲ್ಲ ಯಾಕೆ ಗಂಭೀರವಾಗಿ ಕಾಡುತ್ತಿಲ್ಲ? ಒಂದು ಮಾನವೀಯ ಮನಸು ಥಟ್ಟನೇ ಮಿಡಿಯಬೇಕಲ್ಲವೇ...? ಎಷ್ಟೊಂದು ಚಿಂತೆ, ಪ್ರಶ್ನೆಗಳ ಖಾತ್ರಿಯನ್ನು ದೀರ್ಘ ಬೆಳೆಸಿದವು. ಕಣ್ಮುಚ್ಚಿದರೆ ಆ ಹೆಣ್ಣು ಮಗುವಿನ ಚೀತ್ಕಾರ. ಈ ಲೋಕದ ಕ್ರೌರ್ಯಕ್ಕೆ ಬಲಿಯಾಗಿ ಒದ್ದಾಡುವ ಪ್ರಾಣ ಬಂದು ಥಟ್ಟನೆ ಕಣ್ತೆರೆದೆ. ಕಣ್ಮುಂದೆಯೇ ಕನಸು ಕೈ ಕಾಲು ಬಡಿದು ಆಡುತ್ತಿತ್ತು. ಕೈ ಚಾಚಿದರೆ ಹೆಣವಾಗಿ ರಕ್ತ ಹಾಸಿಗೆಯಲ್ಲಿ ಮಲಗಿತ್ತು. ರಾತ್ರಿಯೆಂಬಂತೆ ರಾತ್ರಿ ಪೂರ್ತಿ ಒಂದು ಹರಿತದ ನೋವು ಎದೆ ಸೀಳುತ್ತಿತ್ತು.

ಮುಂಜಾನೆದ್ದಾಗ ದೂರದ ಜಿಲ್ಲೆ ಬೆಳಗಾವಿಯಿಂದ ಫೋನಿತ್ತು. ಆಗ ತಾನೇ ಪರಿಚಯಿಸಿಕೊಂಡರೂ, ಎಷ್ಟೋ ಹಳೆಯ ಗೆಳತಿಯಂತೆ, ಮಾತಾಡಿದ ಸ್ವರ್ಣ ಮಹಿಳಾ ಸಮಾವೇಶಕ್ಕೆ ಬರಲು ಆಗ್ರಹಿಸಿದಳು. "ನೀವು ಬರೂದು ಬಾಳ ಜರೂರಿ ಐತ್ರೀ. ನಮ್ಮ ಜಿಲ್ಲಾದೊಳಗ ಇಲ್ಲಿನ ವ್ಯವಸ್ಥಾ ಹೆಣ್ಮಕ್ಕಳ ಜೀವನ ಸುದ್ದಾಗಾಕ ಬಿಡೂದಿಲ್ಲ. ಎಳೆ ಮಕ್ಕಳಿಗೆ ಮುದುಕರಗೂಡ ಮದುವಿ ಮಾಡ್ತಾರ. ಗುಜ್ಜರ್ ಮದುವೆ ಅಂತ ಕೇಳೀರೇನು? ಅದು ಮದುವಿ ಅಲ್ರೀ. ಅಕ್ಷರಶಃ ಹೆಣ್ಮಕ್ಕಳ ಮಾರಾಟ! ಐವತ್ತು ಸಾವಿರಕ್ಕ, ಲಕ್ಷಕ್ಕ, ಪೋಲಿಸರು, ಏಜೆಂಟ್‌ಗಳಿಗೆಲ್ಲ ಕಮಿಷನ್ ಹೋಗಿ ಹೆತ್ತವರ ಕೈಗೆ ಬರೂದು ಬರೇ ಇಪ್ಪತ್ತು ಸಾವಿರ!! ಮದುವಿ ಹೆಸರ್ನಾಗ ಮಾರಾಟದ ದಂಧೆ ಮಾಡೂ ಜಾಲ ಐತ್ರೀ. ಸರ್ಕಾರ ಪೋಲಿಸರು, ಸಮಾಜ ಹಿಂಗ ಎಲ್ರಿಗೂ ಗೊತ್ತೈತಿ. ಆದ್ರ, ಹೆಣ್ಮಕ್ಕಳನ್ನ ವಸ್ತುಗಳ ಹಂಗ ಮಾರೂದು ತಪ್ಪು ಅಂತ ಯಾರೂ ಹೇಳೂದಿಲ್ಲ. ಪ್ರತಿಭಟಿಸಿ ದನಿ ಎತ್ತಿದ್ರ ದೊಡ್ಡ ಸಂಘರ್ಷ ಎದರ್ಸಬೇಕಾಕ್ಕೈತಿ. ಏನು ಮಾಡೂದು? ಜನರ ನಡುಬರಕ ಜಾಗ್ರತಿ ಮೂಡ್ಸಾ ಕೆಲಸ ಮಾಡ್ತೀದೀವಿ. ಆದ್ರ, ಚಳವಳಿ ಇಲ್ದೇನೇ ಈ ಮಾರಾಟ ನಿಲ್ಲೂದಿಲ್ಲ..." ನಾನು ಕೇಳುತ್ತಲೇ ಇದ್ದೇ. ಮೊಬೈಲು ಹಿಡಿದ ಕೈ ಬೆವರಿ ಹೋಗಿತ್ತು. ವಿಚಿತ್ರ ಕಂಪನ ರೋಷ, ಸಿಟ್ಟು ಎದೆಯಲ್ಲಿ ಅವಲಕ್ಕಿ ಕುಟ್ಟಿದಂತೆ ಇತ್ತು. "ಗೆಳತಿ, ಏನಾದ್ರೂ ಮಾಡೋಣ... ಬರುವೆನು" ಫೋನಿಟ್ಟೆ.

ಕಲ್ಲು ಕರಗುವ ಸಮಯ

ಅದು ಕಲ್ಲು ಕರಗುವ ಸಮಯ. ಹಗಲು ಹೊತ್ತು ಹಲವು ಕೆಲಸದಲ್ಲಿ ಕಳೆಯಿತು. ಮತ್ತೆ ಕತ್ತಲೆ ಕಾಲಿಟ್ಟಿತು. ಯಾಕೆ ಬರದು ನಿದ್ದೆ? ವರದಕ್ಷಿಣೆಗಾಗಿ ಕೊಲೆಯಾದ ಮಗಳ ಹೆಣದ ಮೇಲೆ ಹಣ ಎಣಿಸಿಕೊಂಡು ಕೇಸು ಮಾಡದೆ, "ಸತ್ತ ಮಗಳು ಸತ್ಳು, ಕೇಸ್ ಮಾಡಿದ್ರ ಹೊಳ್ಳಿ ಬರ್ತಾಳೇನು?" ಎಂದು ನಮ್ಮನ್ನೇ ಪ್ರಶ್ನಿಸಿದ ತಾಯಿಯೊಬ್ಬಳ ಚಿತ್ರವೂ ಕತ್ತಲಲ್ಲಿ ತೇಲಿ ಬಂದಿತು. ಯಾಕಿಂಥ ಕಟುಕರು ನೀವು....?

ಕಣ್ರೆಪ್ಪೆ ಮುಚ್ಚಿದವು ನಿದ್ದೆಯೇ ಆವರಿಸಬೇಕು. ಆಲೋಚನೆಯ ಆಯಾಸದಿಂದಿರಬಹುದು. ಆದರೆ, ಅಲ್ಲೊಂದು ಲೋಕವೇ ಬಿಚ್ಚಿಕೊಂಡಿತು. ಹಾಲ್ದಿಂಗಳಂಥ ಬೆಳಗು. ಅಷ್ಟೇ ಮೋಡಿ ಮಾಡುತ ಬೊಚ್ಚು ಬಾಯಿಂದಲೇ ಮಾತಾಡುತ್ತಿತ್ತು. ಒಂದು ದಿನದ ಕೂಸು ಮಾತಾಡುವುದೇ...? ಹೌದು ನೇರವಾಗಿ ಕೇಳುತ್ತಿತ್ತು. "ನನ್ನ್ಯಾಕೆ ಹುಟ್ಟಿಸಿದ್ರಿ. ನನ್ಯಾಕ ಕೊಂದ್ರಿ. ಇರಿದ ಚೂರಿ ಹಾಗೇ ಇದೆ. ಗಾಯದಿಂದ ರಕ್ತ ನದಿಯಾಗಿ ಹರಿಯುತ್ತಿದೆ.ಆ ಮಗು ಕೇಳುತ್ತಲೆ ಇದೆ. ಕತ್ತು ಹೊರಳಿಸಿದರೆ, ಮಾರಾಟಗೊಂಡ ಹುಡುಗಿಯರು ಮದುವಣಗಿತ್ತಿಯರಂತೆ ಸಿಂಗಾರಗೊಂಡು ನಿಂತಿದ್ದಾರೆ. 'ಈ ಮುದುಕನ ಜೊತೆಗೆ ನಮಗ್ಯಾಕ ಕಳಿಸಿದ್ರು? ಮನ್ಯಾಗ ಒಜ್ಜೆ ಆಗಿದ್ವೇನು? ಅವ್ವ ಏಳಾಕು ಮೊದಲೇ ಎದ್ದು, ಅಂಗಳ ಕಸಗುಡಿಸಿ, ಪಾತ್ರಿ ತಿಕ್ಕಿ, ಬಡಾಬಡಾ ಅಡಿಗಿ ಮಾಡಿ, ಬಟ್ಟೆ ಒಗೆದು ಅಪ್ಪಗೆ ಬುತ್ತಿ ಕಟ್ಟಿ, ಅವ್ವಗ ಊಟಕ್ಕ ಕೊಟ್ಟು, ನಾಲ್ಕು ಮನಿ ಪಾತ್ರಿ ತಿಕ್ಕಿ, ಮತ್ತ ರಾತ್ರಿ ಅಡಿಗಿ ಮಾಡಿ, ಹರದ ಬಡ್ಡಿ ಹೊಲದು, ವಯಸ್ಸಾದ ಅಜ್ಜಿಗೆ ಔಷ್ದಿ ತಂದು ಎಲ್ಲರ ಉಪಚಾರ ಮಾಡ್ತಿದ್ದೆ. ನಾ ದುಡಿದ ರೊಕ್ಕದ ಮ್ಯಾಲೇ ಅವ್ವ, ಸಣ್ಣ ತಮ್ಮಗ ಉಡಿಸಿ ಜ್ವಾಪಾನ ಮಾಡ್ತಾಳ ಆದರೂ ಹೇಳಲಾರದೆ, ಗೊಡ್ಡೆಮ್ಮಿಗಿ ಕಸಾಯಿಖಾನಿಗೆ ಕೊಟ್ಟಂಗ ಯಾಕ ಕಳಿಸಿದ್ರು? ಈ ಕಟ್ಕೊಂಡಿದ ಮುದುಕ, ಇನ್ನಾರಿಗೋ ನಮಗ ಮಾರಾಟ ಮಾಡ್ಯಾನ, ಅಡ್ವಾನ್ಸ್, ರೊಕ್ಕನೂ ತಗೊಂಡಾನ, ಹೀಗೆ ಯಾರ್‍ಯಾರ ಕೈ ಸೇರಬೇಕು? ನಮಗ್ಯಾಕ ಶಿಕ್ಷೆ? ನನ್ನ ಕಣ್ಣೀರು ಕಾಣಿಸವಲ್ದೇನು?

ಆ ಸತ್ತ ಹುಡುಗಿ ಹೆಣವಾಗಿದ್ದಳಲ್ಲ... ಮಲಗಿದಲ್ಲೇ ಹೆಣ ಮಾತಾಡುತ್ತಿತ್ತು. ತಿಳುವಳಿಕೆ ಬಂದಾಗಿಂದ ತವರ ಮನ್ಯಾಗ ದುಡದೆ, ಮದುವಿ ಆದ ಮ್ಯಾಲ ಗಂಡನ ಮನ್ಯಾಗಂತೂ ಅಪಮಾನ ನುಂಗಿಯೂ ದುಡದೆ, ಕಟ್ಕೊಂಡಿದ ಗಂಡ ಊರಿನ ಆಲದ ಗಿಡದ ಕೆಳಗ ಕುಂತು ಇಸ್ಪಿಟ್ ಬಡಿತಿದ್ದ. ನಾನು ಏಳಿಕೂಸಿಗೆ ಉಡ್ಯಾಗ ಕಟ್ಕೊಂಡು ಕೂಲಿ ಮಾಡಿ ಹೈರಾಣಾಗ್ತಿದ್ದೇ. ಕುಡದು ಮನಿಗೆ ಬಂದು ತವರ್ಮನಿಲಿಂದ ರೊಕ್ಕ ತಗೊಂಬಾ ಅಂತ ದನಕ್ಕ ಬಡದಂಗ ಬಡಿತಿದ್ದ. ನಿಮಗ ಗೊತ್ತದಾ ಏನು? ನನ್ನಂಗ ಕೂಲಿ ಮಾಡಲಾಕ ಬರವರ್‍ದಾಗ ನೂರಕ್ಕ ಎಪ್ಪತ್ತ ಮಂದಿ ಹೆಣ್ಮಕ್ಕಳೇ. ಉಳಿದ ಗಂಡಸೂರಿಗೆ ಜೂಜು ಆಡಾದು ಕುಡಿದು ಹೆಂಡ್ರಿಗೆ ಹೊಡ್ಯಾದ ಅಟ್ಟೇ ಕೆಲಸ. ಏನಾದ್ರೂ ಆಗಲಿ ಸಂಸಾರದಾಗ ಈಸಿ ಜೈಸಬೇಕು ಅಂತ ನಂಗನೂ ಭಾಳ ಜಿದ್ದ ಇತ್ತು. ನಂಗ್ಯಾಂಗ ತಿಳಿಬೇಕು? ಕತ್ತಲ್ದಾಗ ಬಂದು ನಿದ್ದಿ ಮಾಡಾಗ ಮೈಮ್ಯಾಲ ಎಣ್ಣೆ ಹಾಕಿ ಬೆಂಕಿ ಹಚ್ಚಿ ಬಾಗಿಲ ಮುಚ್ಚಿದ್ರು ಗಂಡ ಅತ್ತಿ ಮಾವ. ಹೊರಗ ಪಡಸಾಲ್ಯಾಗ ಕೂಸು ಅಳ್ತಿತ್ತು. ಒಳಗ ನಾನು ಧಗ ಧಗ ಉರಿತಿದ್ದೆ... ಬೆಂಕಿ ಅಂದ್ರೇನು? ನಿಮಗ ಹ್ಯಾಂಗ ಗೊತ್ತಾಗಬೇಕು? ಹೊಟ್ಟೆಗೆ ಅನ್ನ ಇಲ್ದೆ ಮನಿಗಿ ನಡಸಿದ್ರೂ ನಂಗ ಯಾಕ ಕೊಲ್ಲಿದ್ರು...?"

ಯಾಕ ಕೊಲ್ಲಿದ್ರೀ...? ಯಾಕ ಕೊಲ್ಲಿದ್ರೀ...? ಜಗದ ಮೇಲಿನ ಮುಗಿಲಿಗೆ ಕಟ್ಟಿದ ಗಂಟೆಗಳನ್ನೆಳೆಯಂತ ಮಾರ್ದನಿಯಾಗುತ್ತಿತ್ತು. ಪ್ರಜ್ಞಾವಂತರೆಲ್ಲ ಈ ಪ್ರಶ್ನೆಗೆ ಉತ್ತರಿಸಲೇಬೇಕು.

ಬೆಳಕಾದಾಗ ಎಲ್ಲರೂ ಬೇರೆಯೇ ಆಗಿತ್ತು. ಆದರೆ ಪ್ರಶ್ನೆಗಳು ಮಾತ್ರ ಬೆಂಬಿಡದೆ ಕಾಡತೊಡಗಿದವು. ಮೂರು ಪಟ್ಟು ದುಡಿಮೆಯ ತರುವಾಯವೂ ಯಾಕೆ 'ಅವಳನ್ನು' ಒಪ್ಪುತ್ತಿಲ್ಲ ಅಪ್ಪುತ್ತಿಲ್ಲ? ಎಲ್ಲೆಲ್ಲೂ ಹೊರೆಯಲ್ಲ ಹೆಂಗೂಸು ಆದರೂ ಭುವಿಗೆ ಬರಲೇ ಬಿಡುತ್ತಿಲ್ಲ... ಯಾಕೆ? ಮುಚ್ಚಿಟ್ಟ ಕರುಳ ಒಳಗಿನ ಕತ್ತರಿ ಬಿಚ್ಚಿ ಬಯಲಾಗಿದೆ ಈಗ.

○

ರಾಷ್ಟ್ರವ್ಯಾಪಿ ಪ್ರತಿಭಟನೆ.....

ಪುಟ 5 ರಿಂದ

~~ಕುಮ್ಮಕ್ಕು ನೀಡಿ~~ ಅದನ್ನು ಸಮರ್ಥಿಸಿ ಕೊಳ್ಳುವುದಲ್ಲೇ ಸರ್ಕಾರದ ಕ್ರಮವನ್ನು ಖಂಡಿಸಿದ ಮೆರಾಜುದ್ದೀನ್ ಪಟೇಲ್ ವರ್ಗಾವಣೆ ದಂಧೆಯಲ್ಲಿ ಕೋಟ್ಯಾಂತರ ರೂಪಾಯಿ ಭ್ರಷ್ಟಾಚಾರ ನಡೆದಿದೆ ಎಂದರು. ಆರಂಭದಲ್ಲಿ ಪ್ರಸ್ತಾವಿಕ ಮಾತುಗಳನ್ನಾಡಿದ. ಜೆಡಿ(ಎಸ್)ಮುಖಂಡರು ವಕ್ತಾರರೂ ಆದ ವೈ.ವಿ.ಎಸ್.ದತ್ತಾರವರು ಮಾತನಾಡಿದರು. ಅಣು ಒಪ್ಪಂದದ ಷರತ್ತಿನಂತೆ ಭಾರತವೂ ಅಮೇರಿಕಾ ದ ಯುದ್ಧ ಮಿತ್ರನಾಗಬೇಕಾಗುತ್ತದೆ ಅದಾಗಬಾರದು. ಹಾಗಾದಲ್ಲಿ ಇರಾನ್. ಇರಾಕ್‌ಗಳಂತಹ ದೇಶಗಳ ಮೇಲೆ ಅಮೇರಿಕಾದೊಂದಿಗೆ ಸೇರಿ ದಾಳಿ ಮಾಡಬೇಕಾದ ಪ್ರಸಂಗ ಬರಬಹುದು ಎಂದರು.

ಕರ್ನಾಟಕದಲ್ಲಿನ ಕೋಮುಗಲಭೆಗಳ ಕುರಿತು ಮಾತನಾಡಿದ ವಿ.ಜೆ.ಕೆ.ನಾಯರ್, ದಾವಣಗೆರೆಯಲ್ಲಿ ಚರ್ಚ್ ಮೇಲೆ ದಾಳಿ ನಡೆದ ಕೂಡಲೇ ರಾಜ್ಯ ಸರ್ಕಾರ ಬಿಗಿ ಕ್ರಮ ತೆಗೆದುಕೊಂಡಿದಿದ್ದರೆ, ಆಗ ಮಂಗಳೂರು ಮತ್ತಿತರೆಡೆ ಚರ್ಚ್ ಮೇಲೆ ದಾಳಿ ನಡೆಯಲು ಅವಕಾಶವಿರುತ್ತಿರಲಿಲ್ಲ ಎಂದರು.

ಕರಾಳ ದಿನ: ಅಣು ಒಪ್ಪಂದಕ್ಕೆ ಸಹಿ ಹಾಕಲಾಗುವ ದಿನ ಭಾರತದ ಪಾಲಿಗೆ ಕರಾಳದಿನ ಎಂದ ಸಿಪಿಐ ರಾಜ್ಯ ಕಾರ್ಯದರ್ಶಿ ಕಾಂ:ಸಿದ್ದನಗೌಡ ಪಾಟೀಲರು, ಮನಮೋಹನ್ ಸರ್ಕಾರ ಜನತೆಗೆ ಕೊಟ್ಟ ವಚನವನ್ನು ಗಾಳಿಗೆ ತೂರಿ ದೇಶದ, ರೈತ, ಕಾರ್ಮಿಕರ, ಕೂಲಿಕಾರರ ಬಡವರ ಹಿತಾಸಕ್ತಿಗಳನ್ನು ಬಲಿ ಕೊಡಲಾಗಿದೆ ಎಂದರು. ಜನ ಮತಾಂತರ ಹೊಂದಲು ಕಾರಣ ಮನುಸಿದ್ಧಾಂತ ಎಂದ ಅವರು ಮತಾಂತರದ ವಿರುದ್ಧ ರಾಜಕೀಯ ಪ್ರಚಾರಕ್ಕಿಳಿದಿರುವ ಮಠಾಧಿಪತಿಗಳು ಕಾವಿ ಬಿಟ್ಟು ರಾಜಕೀಯಕ್ಕೆ ಬರಲಿ ಎಂದರು. ಫಾರ್ವರ್ಡ್ ಬ್ಲಾಕ್‌ನ ರಾಜ್ಯ ಅಧ್ಯಕ್ಷರಾದ ಜಿ.ಆರ್.ಶಿವಶಂಕರ್ ಮಾತನಾಡಿ ಭಗತ್‌ಸಿಂಗ್‌ರ ನಾಡಿನಿಂದ ಬಂದ ಮೊಂಟೆಕ್ ಸಿಂಗ್, ಮನಮೋಹನ್‌ಸಿಂಗ್‌ರ ನೀತಿಗಳು ದೇಶವನ್ನು ಗುಲಾಮಗಿರಿಯತ್ತ ತಳ್ಳುತ್ತಿರುವುದು ದುರಂತ ಎಂದರು. ರಾಜ್ಯದ ವಿವಿಧ ಜಿಲ್ಲೆಗಳಲ್ಲಿಯೂ ಸೆಪ್ಟೆಂಬರ್ 25 ರಂದು ಹಾಗೂ ಅಕ್ಟೋಬರ್ 4 ರಂದು ಪ್ರತಿಭಟನೆಗಳು ನಡೆದಿವೆ.

○

ಷೇರುಪೇಟೆಯಲ್ಲಿ ಹಗಲು ದರೋಡೆ ರಿಲೆಯನ್ಸ್ ಪವರ್ 'ಆದರ್ಶ'!

ಷೇರು ಮಾರುಕಟ್ಟೆ, ಷೇರು ವ್ಯವಹಾರಗಳಲ್ಲಿ ಜನತೆಗೆ, ದೇಶಕ್ಕೆ ಮೋಸವೆಸಗುವ ಎಂತೆಂತಹ ದ್ರೋಹ ವಂಚನೆಗಳು ನಡೆಯುತ್ತಿವೆ ಎಂಬುದಕ್ಕೆ ಇಲ್ಲೊಂದು ಸಾಕ್ಷಿ ಇದೆ. ರಿಲೆಯನ್ಸ್ ಎಂಬ ಒಂದು ದಗಾಕೋರ ಕಂಪನಿ ಯಾವೊಂದು ಪರಿಶ್ರಮವಿಲ್ಲದೇ ಯಾವೊಂದು ಸಾರ್ವಜನಿಕರ ಜೇಬಿಗೆ ಕನ್ನ ಹಾಕಿ ಸುಮಾರು 15 ಸಾವಿರ ಕೋಟಿಗಳನ್ನು ಗೋರಿಕೊಂಡ ಕತೆ ಇದು.

ದೇಶದ ವಿದ್ಯುತ್‌ನ ಅಗತ್ಯವೇನೋ ಬೆಳೆಯುತ್ತಿದೆ. ಕೇಂದ್ರ ಸರ್ಕಾರ ಖಾಸಗಿ ವಿದ್ಯುತ್ ಉತ್ಪಾದನೆಗೆ ಪ್ರೋತ್ಸಾಹ ನೀಡುತ್ತಿದೆ. 4000 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ವಿದ್ಯುತ್ ಸ್ಥಾವರಗಳು ಇಂದಿನ ಅಗತ್ಯ ಸಾಲುವುದಿಲ್ಲ ಎಂದು ಈಗ 'ಅಲ್‌ಟ್ರಾ ಮೆಗಾಪವರ್ ಪ್ಲಾಂಟ್' ಎಂಬ 3 ಬೃಹತ್ ಸ್ಥಾವರಗಳ ಸ್ಥಾಪನೆಗೆ ಕೇಂದ್ರ ಸರ್ಕಾರ ಅನುಮತಿ ನೀಡಿತು. ಮೂರು ಸ್ಥಾವರಗಳ ಪೈಕಿ ಒಂದು ಟಾಟಾ ಕಂಪನಿಗೆ ಸಿಕ್ಕರೆ ಮತ್ತೆರಡು ರಿಲೆಯನ್ಸ್ ಕಂಪನಿಗೆ ಸಿಕ್ಕಿತು.

2012-13 ರ ಹೊತ್ತಿಗೆ 25 ಸಾವಿರ ಮೆಗಾವ್ಯಾಟ್ ಉತ್ಪಾದನೆ ಮಾಡಲು ಯೋಜಿಸುವುದಾಗಿ ತೋರಿಸಿಕೊಂಡ ರಿಲೆಯನ್ಸ್ ಕಂಪನಿಯು ಒಂದು ಮೆಗಾವ್ಯಾಟ್‌ಗೆ 4 ಕೋಟಿಯಂತೆ 25 ಸಾವಿರ ಮೆಗಾವ್ಯಾಟ್‌ಗೆ 1 ಲಕ್ಷ ಕೋಟಿ ರೂಪಾಯಿಗಳ ಬಂಡವಾಳ ಅಗತ್ಯವೆಂದು ಹೇಳಿಕೊಂಡು ಅದಕ್ಕಾಗಿ ಸಾರ್ವಜನಿಕರಿಂದ ಬಂಡವಾಳ ಸಂಗ್ರಹಿಸಲು ಷೇರು ಬಿಡುಗಡೆ ಮಾಡಲು ಅನುಮತಿ ಪಡೆಯಿತು. ಮೂಲಬಂಡವಾಳಕ್ಕಾಗಿ ಸಂಗ್ರಹಿಸಲಾಗುವ ಈ ಬಂಡವಾಳ ಸಂಗ್ರಹವನ್ನು ಐಪಿಓ (Initial Public Offer ಎನ್ನಲಾಗುತ್ತದೆ.

ಇದಕ್ಕೆ ಮೊದಲೇ ಈಗ ರಿಲೆಯನ್ಸ್ ಎನರ್ಜಿ ಕಂಪನಿಯು(ಈಗ ರಿಲೆಯನ್ಸ್ ಇನ್‌ಫ್ರಾಸ್ಟ್ರಕ್ಚರ್) ಒಂದು ಬುದ್ಧಿವಂತಿಕೆ ತೋರಿಸಿತು. ತನ್ನ ಬಂಡವಾಳವನ್ನು (ಈಕ್ವಿಟಿ ಕ್ಯಾಪಿಟಲ್) ಅಂದರೆ 10ರೂ. ಮುಖ ಬೆಲೆಯ ಷೇರನ್ನು ಅದೇ ಬೆಲೆಗೆ 1 ಸಾವಿರ ಕೋಟಿಯಷ್ಟು ಮೌಲ್ಯದ ಷೇರನ್ನು ಅನಿಲ್ ಅಂಬಾನಿ ಒಡೆತನದ 'ಪರ್ಸನಲ್ ಇನ್‌ವೆಸ್ಟ್‌ಮೆಂಟ್' ಕಂಪನಿಗೆ ಹಂಚಿತು. ಕಂಪನಿಯು ನೋಂದಣಿಯಾದ 6 ತಿಂಗಳಲ್ಲಿ ಸಾರ್ವಜನಿಕರಿಗೆ ಷೇರು ಬಿಡುಗಡೆ ಮಾಡಿತ್ತು. 10 ರೂ. ಮುಖ ಬೆಲೆಯ ಷೇರಿನ ಬೆಲೆ ಎಷ್ಟಕ್ಕೆ ನಿಗದಿ ಮಾಡಲಾಯಿತು ಎಂದರೆ ಸಾರ್ವಜನಿಕರಿಗೆ 430 ರೂ. ಸಂಸ್ಥೆಗಳಿಗೆ 450 ರೂಪಾಯಿ ಅಷ್ಟೇ!!! ಈ ರೀತಿ 260 ಕೋಟಿ ಮುಖಬೆಲೆಯ ಷೇರನ್ನು ಕೊಟ್ಟು 11 ಸಾವಿರ ಕೋಟಿ ರೂ ಸಂಗ್ರಹಿಸಿತು.

ಈ ರಿಲೆಯನ್ಸ್ ಪವರ್ ಷೇರು ದೇಶದ ಷೇರು ಮಾರುಕಟ್ಟೆಯಲ್ಲಿ ಹೊಸ ದಾಖಲೆಯನ್ನೇ ಸೃಷ್ಟಿಸಿತು. 460 ಲಕ್ಷ ಜನರು ತಲಾ ಷೇರಿಗೆ 430 ರೂ.ನಂತೆ ಹಣಕೊಟ್ಟು ಷೇರು ಖರೀದಿಸಿದ್ದಾರೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕರನ್ನು ಹೂಡಿಕೆಗೆ ಕಂಪನಿ ಸೆಳೆಯಿತು. ಲಾಭದ ಆಸೆಗೆ ಜನರು ಸಾವಿರಾರು ಕೋಟಿಯನ್ನು ಇಲ್ಲಿ ತೊಡಗಿಸಿದರು.

ಅಮೇರಿಕಾದಲ್ಲಿ ಭೀಕರ ಆರ್ಥಿಕ ಕುಸಿತ ಷೇರುಪೇಟೆಯಲ್ಲಿ ತಲ್ಲಣ. ಈಗ ಈ ರಿಲೆಯೆನ್ಸ್ ಪವರ್ ಷೇರಿನ ಬೆಲೆ 150 ರಿಂದ 160 ಇದೆ. 430 ರೂ. 450 ರೂ. ಕೊಟ್ಟು ಷೇರು ಪಡೆದ



ಸಾರ್ವಜನಿಕರಿಗೆ ಸಂಸ್ಥೆಗಳಿಗೆ ಪಂಗನಾಮ. ಆದರೆ ಆಶ್ಚರ್ಯ! ಷೇರಿಗೆ ಕೇವಲ 10 ರೂ. ನಂತೆ ಹಣ ಕೊಟ್ಟು ಪಡೆದುಕೊಂಡ ಅನಿಲ್ ಅಂಬಾನಿ ಯವರದೇ ಒಡೆತನದ 'ಪರ್ಸನಲ್ ಇನ್‌ವೆಸ್ಟ್ ಮೆಂಟ್' ಕಂಪನಿಗೆ ಷೇರಿಗೂ 150-160 ರೂ ಬೆಲೆ.

ಆಹಾ ಷೇರು ಬಜಾರೆಂಬ ಮಾಯಾಬಜಾರ್‌ನ ಮಾಯೆಯೇ? ರಿಲೆಯನ್ಸ್ ಕಂಪನಿಗೆ 1000 ಕೋಟಿ ಬಂಡವಾಳ ಹೂಡಿ 15 ರಿಂದ 16 ಸಾವಿರ ಕೋಟಿ ರೂಪಾಯಿವರೆಗೆ ಲಾಭ ಹೊಡೆದೇ ಬಿಟ್ಟಿತು. ಅಮೇರಿಕನ್ ಆರ್ಥಿಕ ಕುಸಿತ ಇಲ್ಲದೆ ಹೋಗಿ ಷೇರು ಮಾರುಕಟ್ಟೆಯಲ್ಲಿ ಷೇರಿನ ಬೆಲೆ 430, ಅಥವಾ 450 ಕ್ಕಿಂತ ಹೆಚ್ಚಾಗಿದ್ದಿದ್ದರೆ ಸಾರ್ವಜನಿಕರೂ ಒಂದಷ್ಟು ಲಾಭಗಳಿಸುತ್ತಿದ್ದರು. ಆದರೆ ಆಗ ರಿಲೆಯನ್ಸ್ ಕಂಪನಿಗೆ ಇನ್ನೂ ಸೂಪರ್ ಲಾಭ ಆಗುತ್ತಿತ್ತು.

ಹಿಂದೆಲ್ಲಾ ಸಾರ್ವಜನಿಕರಿಗೆ ಬಿಡುಗಡೆ ಮಾಡಲಾಗುವ ಷೇರಿನ ಬೆಲೆ ಎಷ್ಟಿರಬೇಕೆಂದು ನಿರ್ಧರಿಸಲು CCI (controler of Capital Issues) ಎಂಬ ಸಂಸ್ಥೆ ಇತ್ತಂತೆ. ಅದು ಕಂಪನಿಯ ವಿಶ್ವಾಸರ್ಹತೆ, ಷೇರು ಮಾರುಕಟ್ಟೆ ಪರಿಸ್ಥಿತಿ, ಸಂಭವನೀಯ ಬೆಳವಣಿಗೆ ಎಲ್ಲ ಲೆಕ್ಕಾ ಹಾಕಿ. ಬೆಲೆ ನಿಗದಿ ಮಾಡುತ್ತಿತ್ತಂತೆ. ಉದಾರೀಕರಣ, ನೀತಿಯ ಭರಾಟೆ ಜೋರಾದಂತೆ ದೇಶದ ಬಂಡವಾಳಿಗರೆಲ್ಲಾ ಸೇರಿ ಗದ್ದಲ ಮಾಡಿ ಸಿಸಿಐ ಸಂಸ್ಥೆಯನ್ನು ರದ್ದು ಮಾಡಿಸಿದರಂತೆ. ಈಗ ಮುಕ್ತ ಮಾರುಕಟ್ಟೆ ಬೆಲೆ ನಿಗದಿ (Free prising Economy) ಹೆಸರಿನಲ್ಲಿ ಸಾರ್ವಜನಿಕರಿಗೆ ಮಾರುವ ತಮ್ಮ ಷೇರಿನ ಬೆಲೆಯನ್ನು ತಾವೇ ನಿಗದಿ ಮಾಡಿಕೊಳ್ಳಲು ಅವಕಾಶ ಸಿಕ್ಕಿದೆ. ಕುರಿಕಾಯಲು ತೋಳವನ್ನು ನೇಮಿಸಿದಂತೆ ಆಗಿದೆ ಈ ಕತೆ. ಎಷ್ಟಿದ್ದರೂ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಹೇಗಿದ್ದರೂ ಸೂಪರ್ ಬಂಡವಾಳಿಗರ ಸೂಪರ್ ಲಾಭಕ್ಕೆ, ಅಥವಾ ಲಾಭಗಳಿಕೆ ಹೆಸರಿನ ದರೋಡೆ ಮುಕ್ತ ಅವಕಾಶವನ್ನೇ ಒದಗಿಸಿಕೊಟ್ಟರೆ ಅದರಲ್ಲಿ ಆಶ್ಚರ್ಯವೇನಿದೆ ಬಿಡಿ. ○

'ಹಿಂದೂ ವೋಟ್‌ಬ್ಯಾಂಕ್' ರಾಜಕೀಯ....

ಪುಟ 7 ರಿಂದ

ಆಗುತ್ತಿರುವ ನಿಜವಾದ ಅನ್ಯಾಯಗಳು ಮತ್ತು ಅನ್ಯಾಯವಾಗುತ್ತಿದೆ ಎಂಬ ಅವರ ಭಾವನೆ ಕೂಡಾ ಇತ್ತೀಚೆಗೆ ಹೆಚ್ಚಾಗಿ ಕಾಣಬರುತ್ತಿರುವ ಭಯೋತ್ಪಾದಕ ದಾಳಿಗಳಿಗೆ ಕಾರಣವಾಗಿರುವ ಅಂಶಗಳಲ್ಲಿ ಒಂದಾಗಿರಬಹುದೇ ಎಂಬುದೀಗ ಸಾರ್ವಜನಿಕವಾಗಿ ಚರ್ಚೆಯಾಗುತ್ತಿದೆ. ಭಯೋತ್ಪಾದನೆಯನ್ನು ಖಂಡಿತಾ ಒಪ್ಪಲು ಸಾಧ್ಯವಿಲ್ಲ, ಅದರ ವಿರುದ್ಧ ಸಮರ ನಡೆಸಲು ದೇಶ ಮತ್ತು ದೇಶದ ಜನ ತಮಗೆ ಸಾಧ್ಯವಾದುದನ್ನೆಲ್ಲ ಮಾಡಬೇಕು ಎಂಬುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಆದರೆ ಇದನ್ನು ಪ್ರಭುತ್ವದ ವಿವಿಧ ಅಂಗಗಳು ಅತ್ಯಂತ ನಿಷ್ಪಕ್ಷಪಾತದಿಂದ ಮಾಡಬೇಕಾಗಿದೆ.

ಭಯೋತ್ಪಾದನೆಗೆ ಧರ್ಮವಿಲ್ಲ, ಅದು ಸ್ಪಷ್ಟವಾಗಿ ದೇಶ-ವಿರೋಧಿ. ಇತ್ತೀಚೆಗೆ ಮುಸ್ಲಿಮರು ಹೆಚ್ಚಾಗಿರುವ ಪ್ರದೇಶಗಳಲ್ಲಿ ಭಯೋತ್ಪಾದಕ ದಾಳಿಗಳ ಹೆಚ್ಚಳ ಕೆಲವು ಮುಸ್ಲಿಂ ಭಯೋತ್ಪಾದಕ ಕೃತ್ಯಗಳಿಗೆ ಹಿಂದೂ ಉಗ್ರರ ಪ್ರತಿಕ್ರಿಯೆಯೇ ಎಂಬ ನೈಜ ಅನುಮಾನಗಳನ್ನು ಎಬ್ಬಿಸಿದೆ. ಮುಸ್ಲಿಮರೇ ಹೆಚ್ಚಾಗಿರುವ ದಿಲ್ಲಿಯ ಮೆಹರೌಲಿಯಲ್ಲಿ ಬಾಂಬುದಾಳಿ ಅಥವ ಮಹಾರಾಷ್ಟ್ರದ ಮಾಲೇಗಾಂವ್‌ನಲ್ಲಿ ಬಾಂಬ್ ದಾಳಿಯಲ್ಲಿ ಆಗಷ್ಟೇ ರಂಜಾನ್ ಉಪವಾಸ ಮುಗಿಸಿದ ಜನಗಳು ಸೇರಿದ್ದ ಸ್ಥಳದಲ್ಲಿ ನಾಲ್ವರು ಮುಸ್ಲಿಮರ ಸಾವು ಇಂತಹ ಸಂದೇಹಗಳನ್ನು ಬಲಪಡಿಸುತ್ತವೆ. ಮಾಲೆಗಾಂವ್‌ನಲ್ಲಿ ಮಾಧ್ಯಮದವರು ಹಿಂದೂ ಉಗ್ರಗಾಮಿಗಳ ಕೈವಾಡದ ಶಂಕೆಯಿದೆಯೆ ಎಂದು ಕೇಳಿದಾಗ ಅಡಿಶನಲ್ ಪೋಲಿಸ್ ಮಹಾ ನಿರ್ದೇಶಕರು(ಕಾನೂನು ವ್ಯವಸ್ಥೆ) 'ಈ ಹಂತದಲ್ಲಿ ಆ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ' ಎಂದಿದ್ದಾರೆ.

ಕೇಂದ್ರದ ಜವಾಬ್ದಾರಿ

ಈ ಹಿಂದೆ ಪೋಲೀಸ್ ತನಿಖೆಗಳಿಂದ ದೇಶದಲ್ಲಿ ನಡೆದ ವಿವಿಧ ಬಾಂಬು ಸ್ಫೋಟಗಳಲ್ಲಿ ಭಜರಂಗ ದಳ ಮತ್ತು ಆರೆಸ್ಸೆಸ್‌ನ ಇತರ ಕಬಂಧ ಬಾಹುಗಳು ಭಾಗಿಯಾಗಿರುವುದು ಕಂಡು ಬಂದಿದೆ. ಮಹಾರಾಷ್ಟ್ರದ ಪರ್ಬಾನಿ, ಜಾಲ್ನಾ ಮತ್ತು ಜಲಗಾಂವ್ ಜಿಲ್ಲೆಗಳಲ್ಲಿ 2003ರಲ್ಲಿ, 2005ರಲ್ಲಿ ಉತ್ತರ ಪ್ರದೇಶದ ಮಾವು ಜಿಲ್ಲೆಯಲ್ಲಿ, 2006ರಲ್ಲಿ ನಾಂದೇಡ್‌ನಲ್ಲಿ, ತಿರುನಲ್ವೇಲಿ ಜಿಲ್ಲೆಯ ತೆಂಕಾಸಿಯಲ್ಲಿ, ಜನವರಿ 2008ರಲ್ಲಿ ಆರೆಸ್ಸೆಸ್ ಕಚೇರಿಯಲ್ಲಿ, ಆಗಸ್ಟ್ 2008ರಲ್ಲಿ ಕಾನ್ಪುರ ಮುಂತಾದೆಡೆಗಳಲ್ಲಿ ಇದು ಕಂಡು ಬಂದಿದೆ. ಇಂತಹ ಎಲ್ಲಾ ಘಟನೆಗಳನ್ನು ಕೂಡಾ ನಿಷ್ಪಕ್ಷಪಾತವಾಗಿ ಮತ್ತು ಅಷ್ಟೇ ತೀಕ್ಷ್ಣತೆಯಿಂದ ತನಿಖೆ ಮಾಡಿದರೆ ಮಾತ್ರವೇ ದೇಶದ ಆಂತರಿಕ ಭದ್ರತೆಯನ್ನು ಬಲಪಡಿಸಲು ಸಾಧ್ಯ.

ರಾಜಕೀಯ ಲಾಭಕ್ಕಾಗಿ ದೇಶದ ಹಿತವನ್ನು ಬಲಿಗೊಟ್ಟು ಕೋಮುವಾದಿ ಧ್ರುವೀಕರಣವನ್ನು ನಡೆಸುವ, ಜನಗಳ ರಕ್ತ ಹರಿಸುವ ಪ್ರಯತ್ನಗಳನ್ನಂತೂ ವಿಫಲಗೊಳಿಸಲೇ ಬೇಕು. ಅತ್ತ ಭಯೋತ್ಪಾದನೆಯನ್ನು ಎದುರಿಸುವ ಮತ್ತು ಆಂತರಿಕ ಭದ್ರತೆಯನ್ನು ಬಲಗೊಳಿಸುವ ಪ್ರಯತ್ನಗಳನ್ನು ಅತ್ಯಂತ ನಿಷ್ಪಕ್ಷಪಾತದಿಂದ ನಡೆಸಬೇಕು. ಕರ್ನಾಟಕದ ಕುರಿತು ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ ಹೇಳಿರುವಂತೆ ಅಲ್ಪಸಂಖ್ಯಾತರ ಮೇಲೆ ಹಿಂಸಾಚಾರ ನಡೆಸಿದವರನ್ನು ಬಂಧಿಸಿದ ನಂತರ ತಕ್ಷಣವೇ ಜಾಮೀನಿನಲ್ಲಿ ಬಿಡಲಾಗುತ್ತಿದೆ, ಆದರೆ ಇಂತಹ ಕೋಮು ಹಿಂಸಾಚಾರಕ್ಕೆ ಬಲಿಯಾದವರಿಗೆ ರಕ್ಷಣೆ ಕೊಡುವ ಬದಲು ಅವರು ಜೈಲಿನಲ್ಲಿ ಕೊಳೆಯುವಂತಾಗಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ರಾಜ್ಯ ಸರಕಾರಗಳು ಇಂತಹ ಕೋಮುವಾದಿ ಧ್ರುವೀಕರಣಕ್ಕೆ ಮತ್ತು ಅದರಿಂದಾಗುವ ದಾಳಿಗಳಿಗೆ ಪೋಷಣೆ ನೀಡುವುದನ್ನು ಮುಂದುವರೆಸಿದರೆ ಯುಪಿಎ ಯ ಕೇಂದ್ರ ಸರಕಾರ ಸಂವಿಧಾನದ ಪ್ರಕಾರ 'ಜಾತಿ, ಪಂಥಗಳ ಭೇದ ಭಾವವಿಲ್ಲದೆ' ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ನಿರೀಕ್ಷೆ ಸಹಜವೇ. ○

ಕಲೆ ಮತ್ತು ಸಾಹಿತ್ಯದ ನೈಜ ಪಾತ್ರ

ಕಲೆಗಾಗಿ ಕಲೆಯೋ, ಜನರಿಗಾಗಿ ಕಲೆಯೋ ಎಂಬ ಚರ್ಚೆ ಮತ್ತೆ ಮತ್ತೆ ಅಗತ್ಯವಾಗುತ್ತದೆ. ಏಕೆಂದರೆ ಸಮಾಜದೊಳಗಿನ ಬಿಕ್ಕಟ್ಟು ತೀವ್ರಗೊಂಡಂತೆ ಜನರ ಪರವಾಗಿ ಕಲೆ, ಕಲಾವಿದರೂ ಕೈಜೋಡಿಸಬೇಕಾದ ಅಗತ್ಯ ತೀವ್ರಗೊಳ್ಳುತ್ತಿದೆ.

ಮೂಲ ಲೇಖನ:
ನ್ಯಾಯಮೂರ್ತಿ ಮಾರ್ಕಾಂಡೇಯ ಕಾಟ್ಜು
(ಹಾಲಿ ಸುಪ್ರೀಮ್ ಕೋರ್ಟ್ ನ್ಯಾಯಮೂರ್ತಿಗಳು)
ಕನ್ನಡಕ್ಕೆ: ತಡಗಳಲೆ ಸುರೇಂದ್ರ ರಾವ್

ಭಾರತವಿಂದು ಅಗಾಧ ಸಮಸ್ಯೆಗಳನ್ನು ಎದುರಿಸುತ್ತಿದೆ. ಕೆಲವು ರಾಜ್ಯಗಳಲ್ಲಿ, ರೈತರು ಮತ್ತು ನೇಕಾರರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಜೀವನಾವಶ್ಯಕ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿವೆ. ನಿರುದ್ಯೋಗ ವಿಪರೀತವಾಗಿದೆ ಮತ್ತು ಬೇರೂರಿದೆ. ನೀರು ಮತ್ತು ವಿದ್ಯುತ್ ಕೊರತೆ ವ್ಯಾಪಕವಾಗಿದೆ. ಭ್ರಷ್ಟಾಚಾರ ಮತ್ತು ಮೋಸ ಸರ್ವವ್ಯಾಪಿಯಾಗಿದೆ. ವೈದ್ಯಕೀಯ ಚಿಕಿತ್ಸೆ ಎಣಿಸಲಾರದಷ್ಟು ದುಬಾರಿಯಾಗಿದೆ. ವಸತಿ ದುರ್ಲಭವಾಗಿದೆ. ಶಿಕ್ಷಣ ವ್ಯವಸ್ಥೆ ಹದಗೆಟ್ಟಿದೆ. ಹಲವಾರು ಪ್ರದೇಶಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುಸಿದಿದೆ ಮತ್ತು ಅಂಥ ಕಡೆಗಳಲ್ಲಿ ಪಾತಕಿಗಳದ್ದೇ ಕಾರುಬಾರು.

ಇವುಗಳಿಗೂ, ಕಲೆ ಮತ್ತು ಸಾಹಿತ್ಯಕ್ಕೂ ಎತ್ತಣಿಂದೆತ್ತಣ ಸಂಬಂಧವಯ್ಯಾ?

ಎರಡು ಪಂಥಗಳು


ಕಲೆ ಮತ್ತು ಸಾಹಿತ್ಯದಲ್ಲಿ ಸ್ಥೂಲವಾಗಿ ಎರಡು ಪಂಥಗಳಿವೆ. ಮೊದಲನೆಯದು 'ಕಲೆಗಾಗಿ ಕಲೆ.' ಎರಡನೆಯದು 'ಸಾಮಾಜಿಕ ಉದ್ದೇಶಕ್ಕಾಗಿ ಕಲೆ.'


ಮೊದಲನೆಯದರಲ್ಲಿ, ಕಲೆ ಮತ್ತು ಸಾಹಿತ್ಯದ ಉದ್ದೇಶವು, ಜನರನ್ನು ಮತ್ತು ಕಲಾವಿದರನ್ನು ರಂಜಿಸುವ ಸೌಂದರ್ಯದ ಅಥವಾ ಮನರಂಜನೆಯ ಕೃತಿಗಳನ್ನು ಸೃಷ್ಟಿಸುವುದು ಮಾತ್ರವಾಗಿರುತ್ತದೆ. ಸಾಮಾಜಿಕ ವಿಚಾರಗಳನ್ನು ಪ್ರಸಾರ ಮಾಡುವ ಉದ್ದೇಶ ಅವಕ್ಕಿರುವುದಿಲ್ಲ. ಕಲೆ ಮತ್ತು ಸಾಹಿತ್ಯವನ್ನು ಸಾಮಾಜಿಕ ವಿಚಾರಗಳ ಪ್ರಸಾರಕ್ಕೆ ಬಳಸಿದರೆ ಆಗ ಅದು ಪ್ರಚಾರವಾಗುತ್ತದೆ. ಇಂಗ್ಲಿಷ್ ಸಾಹಿತ್ಯಲೋಕದಲ್ಲಿ ಇಂತಹ ಅಭಿಪ್ರಾಯಗಳನ್ನು ಪ್ರತಿಪಾದಿಸುವವರಲ್ಲಿ ಕೀಟ್ಸ್, ಟೆನ್ನಿಸನ್, ಎಜ್ರಾ ಪೌಂಡ್ ಮತ್ತು ಟಿ.ಎಸ್.ಈಲಿಯಟ್ ಪ್ರಮುಖರು; ಅಮೆರಿಕನ್ನರಲ್ಲಿ ಎಡ್ಗರ್ ಅಲೆನ್ ಪೊ; ಹಿಂದಿಯಲ್ಲಿ ಅಜ್ಞೆಯ ಮತ್ತು 'ರೀತಿಕಲ್' ಹಾಗೂ 'ಛಾಯಾವಾದಿ' ಕವಿಗಳು; ಉರ್ದುವಿನಲ್ಲಿ ಜಿಗರ್ ಮೊರಾದಾಬಾದಿ; ಮತ್ತು ಬಂಗಾಳಿಯಲ್ಲಿ ಟಾಗೋರ್.

ಮತ್ತೊಂದು ವಾದವೆಂದರೆ, ದಬ್ಬಾಳಿಕೆ ಮತ್ತು ಅನ್ಯಾಯದ ವಿರುದ್ಧ ಜನರ ಭಾವನೆಗಳನ್ನು ಉದ್ದೀಪನಗೊಳಿಸಿ ಮತ್ತು ಅವರ ಕಷ್ಟನಷ್ಟಗಳು ಮತ್ತು ನೋವಿನ ಬಗ್ಗೆ ಅವರನ್ನು ಸಂವೇದನಾಶೀಲರನ್ನಾಗಿಸುವ ಮೂಲಕ ಕಲೆ ಮತ್ತು ಸಾಹಿತ್ಯವು ಜನರಿಗಾಗಿ ದುಡಿಯುವಂತಾಗಬೇಕು ಹಾಗೂ ಉತ್ತಮ ಬದುಕಿಗಾಗಿ ಅವರು ನಡೆಸುವ ಹೋರಾಟಗಳಿಗೆ ನೆರವಾಗಬೇಕು. ಈ ವಾದದ ಪ್ರತಿಪಾದಕರಲ್ಲಿ ಇಂಗ್ಲಿಷ್ ಸಾಹಿತ್ಯದ ಚಾರ್ಲ್ಸ್ ಡಿಕನ್ಸ್, ಬರ್ನಾರ್ಡ್‌ಷಾ; ಅಮೆರಿಕನ್ ಸಾಹಿತ್ಯದಲ್ಲಿ ವಾಲ್ಟ್ ವಿಟ್ ಮನ್, ಮಾರ್ಕ್ ಟ್ವೈನ್, ಹ್ಯಾರಿಟ್ ಬೀಚರ್ ಸ್ಟೋ, ಅಪ್ಟನ್ ಸಿಂಕ್ಲರ್ ಹಾಗೂ ಜಾನ್ ಸ್ಟೀನ್‌ಬಕ್; ರಶಿಯನ್ನರಲ್ಲಿ ಟಾಲಸ್ಟಾಯ್, ಗೊಗೊಲ್, ದೊಸ್ತೊವಸ್ಕಿ ಮತ್ತು ಮ್ಯಾಕ್ಸಿಂ ಗಾರ್ಕಿ; ಹಿಂದಿಯಲ್ಲಿ ಪ್ರೇಮ್‌ಚಂದ್ ಮತ್ತು ಕಬೀರ್; ಬಂಗಾಳಿಯಲ್ಲಿ ಶರತ್‌ಚಂದ್ರ ಚಟ್ಟೋಪಾಧ್ಯಾಯ ಮತ್ತು ಕಾಜಿ ನಸ್ರುಲ್ ಇಸ್ಲಾಂ; ಉರ್ದುವಿನಲ್ಲಿ ನಾಜಿರ್, ಫೈಜ್, ಜೋಶ್ ಮತ್ತು ಮಂಟೋ ಪ್ರಮುಖರು.

ಯಾವ ಮಾರ್ಗ?

ಭಾರತದ ಕಲಾವಿದರು ಮತ್ತು ಬರಹಗಾರರು ಇವೆರಡರಲ್ಲಿ ಯಾವ ಮಾರ್ಗವನ್ನು ಹಿಡಿಯಬೇಕು? ಈ ಪ್ರಶ್ನೆಗೆ ಉತ್ತರ ನೀಡುವುದಕ್ಕೆ ಮೊದಲು, ಈ ಎರಡೂ ಪಂಥಗಳಲ್ಲಿ ಶ್ರೇಷ್ಠ ಕಲಾವಿದರು ಮತ್ತು ಬರಹಗಾರರು ಆಗಿಹೋಗಿದ್ದಾರೆ ಎಂಬುದನ್ನು ಸ್ಪಷ್ಟಪಡಿಸಬೇಕು. ಶೇಕ್ಸ್‌ಪಿಯರ್ ಮತ್ತು ಕಾಳಿದಾಸ ಇಬ್ಬರೂ ಸ್ಥೂಲವಾಗಿ 'ಕಲೆಗಾಗಿ ಕಲೆ' ಎಂಬ ಮೊದಲ ಪಂಥಕ್ಕೆ ಸೇರಿದವರೆಂದು


ಮ್ಯಾಕ್ಸಿಂ ಗೋರ್ಕಿ


ರವೀಂದ್ರನಾಥ ಟ್ಯಾಗೋರ್

ವರ್ಗೀಕರಿಸಬಹುದು. ಮನರಂಜನೆ ಒದಗಿಸುವುದು ಮತ್ತು ಮನುಷ್ಯರ ಮಾನಸಿಕ ಆವೇಗ ಹಾಗೂ ಪ್ರೇರಣೆಗಳನ್ನು ಗ್ರಹಿಸುವುದರ ಆಚೆ ಇನ್ನಾವ ಸಾಮಾಜಿಕ ಉದ್ದೇಶವನ್ನೂ ಅವರ ನಾಟಕಗಳು ಹೊಂದಿಲ್ಲ. ಶೇಕ್ಸ್‌ಪಿಯರ್ ಮೂಲತಃ ಒಬ್ಬ ವಾಸ್ತವವಾದಿಯಾಗಿದ್ದಾಗ್ಯೂ, ಸಮಾಜ ಸುಧಾರಣೆಯ ಉದ್ದೇಶ ಅಥವಾ ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಡುವ ಮನಸ್ಥಿತಿ ಅವನಿಗಿರಲಿಲ್ಲ. ಆದರೂ ಕೂಡ ಅವನೊಬ್ಬ ಶ್ರೇಷ್ಠ ಕಲಾವಿದ. ಅವನ ದುರಂತ ಅಥವಾ ಚಾರಿತ್ರಿಕ ಅಥವಾ ಸುಖಾಂತ ನಾಟಕಗಳಲ್ಲಿ ಮನುಷ್ಯರ ಮಾನಸಿಕ ತುಮುಲಗಳನ್ನು ಹಾಗೂ ಮಾನವ ಕ್ರಿಯೆಯಲ್ಲಿನ ಅನಿರೀಕ್ಷಿತ ಏಳುಬೀಳುಗಳನ್ನು ಕಣ್ಣಿಗೆ ಕಟ್ಟುವಂತೆ ಹೇಳುವ ರೀತಿ ಮತ್ತು ಅವನ ಸೂಕ್ಷ್ಮಗ್ರಹಣಶಕ್ತಿ ಯಾರನ್ನೂ ದಂಗುಬಡಿಸುತ್ತವೆ. ಅವನ ಪಾತ್ರಗಳು ಎಷ್ಟರ ಮಟ್ಟಿಗೆ ರಕ್ತ ಮಾಂಸಗಳಿಂದ ತುಂಬಿಕೊಂಡಿರುತ್ತವೆಂದರೆ ಅವು ನಮ್ಮ ಅನುಭವದಲ್ಲಿ ಬರುವ ನಿಜವಾದ ಮನುಷ್ಯರೇನೋ ಎನಿಸುತ್ತದೆ.

ಅದೇ ರೀತಿಯಲ್ಲಿ, ಕಾಳಿದಾಸನ ಮೇಘದೂತ ಅತ್ಯುತ್ತಮವಾದ ಪ್ರೇಮ ಕಾವ್ಯ. ಅದರಲ್ಲಿನ ಹಳ್ಳಿಗಾಡಿನ ಚಿತ್ರಣವು ಸೌಂದರ್ಯದ ಪರಾಕಾಷ್ಠೆ ಎನ್ನಬಹುದು. ವರ್ಡ್ಸ್‌ವರ್ತ್ ಕೂಡ ಅವನ ಸಮಾನ ನಿಲ್ಲಲು ಸಾಧ್ಯವಿಲ್ಲ. ಇಷ್ಟೆಲ್ಲಾ ಹೇಳಿದ ಮೇಲೂ, ಕಾಳಿದಾಸನ ಕೃತಿಗಳಲ್ಲಿ ಸಾಮಾಜಿಕ ಕಳಕಳಿ ಇರಲಿಲ್ಲ.

ಅತ್ತ, ಬರ್ನಾರ್ಡ್ ಷಾ ಸಾಮಾಜಿಕ ಕೆಡುಕುಗಳ ವಿರುದ್ಧ ಹೋರಾಡುವ ಹಾಗೂ ಸಮಾಜ ಸುಧಾರಣೆಯ ಸ್ಪಷ್ಟ ಉದ್ದೇಶಗಳನ್ನು ಹೊತ್ತ ಸಾಮಾಜಿಕ ಕಳಕಳಿಯ ನಾಟಕಗಳನ್ನೇ ಬರೆದ. ಅವನ ನಾಟಕಗಳು ಸಾಮಾಜಿಕ ಕೆಡುಕುಗಳ ವಿರುದ್ಧ ಸ್ಪಷ್ಟವಾದ ಹಾಗೂ ಪ್ರಬಲವಾದ ಖಂಡನೆಯಾಗಿವೆ. ಚಾರ್ಲ್ಸ್ ಡಿಕನ್ಸ್ ತನ್ನ ಕಾದಂಬರಿಗಳಲ್ಲಿ ತನ್ನ ಕಾಲದ ಇಂಗ್ಲೆಂಡಿನ ಸಾಮಾಜಿಕ ಅನಿಷ್ಟಗಳ ವಿರುದ್ಧ ಸಮರ ಸಾರಿದ್ದ.


'ಕಲೆಗಾಗಿ ಕಲೆ'ಯನ್ನು ಪ್ರತಿನಿಧಿಸುವ ಶೇಕ್ಸ್‌ಪಿಯರ್ ಅಥವಾ 'ಸಾಮಾಜಿಕ ಕಳಕಳಿ'ಯನ್ನು ಪ್ರತಿನಿಧಿಸುವ ಷಾ, ಇವರಲ್ಲಿ ಅತ್ಯಂತ ಶ್ರೇಷ್ಠರು ಯಾರು? ಅದಕ್ಕೆ ಉತ್ತರವನ್ನು ತದನಂತರ ಕೊಡುವ ಪ್ರಯತ್ನ ಮಾಡೋಣ.


ಪದಗಳ ಕಲೆಯಾದ ಹಾಗೂ ಚಿಂತನೆಗೆ ತೀರ ಹತ್ತಿರದ ಕಲೆಯಾದ ಸಾಹಿತ್ಯ ಕಲಾಪ್ರಕಾರದಲ್ಲಿ ಅದರ ಸ್ವರೂಪಕ್ಕಿಂತ ಅದರಲ್ಲಿ ವೈಚಾರಿಕ ವಸ್ತುವಿಗೆ ಹೆಚ್ಚಿನ ಪ್ರಾಶಸ್ತ್ಯ ಇರುವುದರಿಂದ, ವರ್ಣಚಿತ್ರ ಮತ್ತು ಸಂಗೀತ ಕಲಾಪ್ರಕಾರಗಳಿಗಿಂತ ಅದು ಭಿನ್ನವಾಗಿ ನಿಲ್ಲುತ್ತದೆ. ಮತ್ತೊಂದು ಕಡೆ, ಶಾಸ್ತ್ರೀಯ ಸಂಗೀತದಂಥಾ ಕಲಾಪ್ರಕಾರವು ಒಂದು ಮನಸ್ಥಿತಿಯನ್ನು ಉಂಟುಮಾಡಲು ಸಂಪೂರ್ಣವಾಗಿ ಮುಡುಪಾಗಿರುತ್ತದೆಯೇ ವಿನಃ ಯಾವುದೇ ವೈಚಾರಿಕ ಜಾಗೃತಿಯನ್ನುಂಟುಮಾಡುವುದಿಲ್ಲ.

ಉದಾಹರಣೆಗೆ, ಉತ್ತರ ಭಾರತದ ಶಾಸ್ತ್ರೀಯ ಸಂಗೀತವಾದ ಖಯಾಲ್‌ನಂಥ ಪ್ರಧಾನ ಪ್ರಕಾರದಲ್ಲಿ ವೈಚಾರಿಕವಾದದ್ದು ಏನೂ ಇಲ್ಲ(ಏಕೆಂದರೆ ಅದರಲ್ಲಿ ಶಬ್ದಗಳ ಬಳಕೆ ತೀರ ಕಡಿಮೆ). ಆದರೆ ಒಂದು ಮನೋಲ್ಲಾಸ ಉಂಟುಮಾಡುವ ಮತ್ತು ಸೌಂದರ್ಯ ಭಾವನೆಗಳನ್ನು ಉದ್ದೀಪನಗೊಳಿಸುವ ಅದಮ್ಯ ಶಕ್ತಿ ಅದರಲ್ಲಿದೆ. ವರ್ಷಕಾಲದ ಮಲ್ಹಾರ್ ರಾಗವಿರಬಹುದು (ಅದರಲ್ಲಿಯೂ ಅನೇಕ ಬಗೆಯ ಮಲ್ಹಾರ್‌ಗಳು-ಮೇಘ ಮಲ್ಹಾರ್ ಇತ್ಯಾದಿ) ಅಥವಾ ಮುಂಜಾನೆಯ ರಾಗವಾದ ಜಾನ್‌ಪುರಿ, ತೋಡಿ, ಭೈರವ್ ಇತ್ಯಾದಿ, ಅಥವಾ ರಾತ್ರಿ ರಾಗಗಳಾದ ದರ್ಬಾರಿ ಅಥವಾ ಮಾಲ್‌ಕೌಂಸ್(ಕರ್ನಾಟಕ ಸಂಗೀತದ ಹಿಂದೋಳ) ಅನುಕ್ರಮವಾಗಿ ನೀಡುವ ಮಳೆಗಾಲದ ಅನುಭವ, ನಿದ್ದೆಯಿಂದ ಎಬ್ಬಿಸುವ ಅನುಭವ ಅಥವಾ ಜೋಗುಳ ಹಾಡಿ ಮಲಗಿಸುವ ಅನುಭವ ನಿಜಕ್ಕೂ ಅಪ್ಯಾಯಮಾನ. ಇನ್ನು ಯಾವ ಸಮಯದಲ್ಲಿ ಅಥವಾ ಯಾವ ಋತುವಿನಲ್ಲಿ ಬೇಕಾದರೂ ಹಾಡಬಹುದಾದ ಭೈರವಿ ರಾಗ ಎಂಥವರನ್ನೂ ಮಂತ್ರಮುಗ್ಧರನ್ನಾಗಿಸುತ್ತದೆ. ವಿವಿಧ ರೀತಿಯ ಮನೋಲ್ಲಾಸವನ್ನು ಉಂಟುಮಾಡುವ ಇನ್ನೂ ಹಲವಾರು ರಾಗಗಳು ಎಲ್ಲರನ್ನು ಸೆಳೆಯುತ್ತವೆ. ಉತ್ತರ ಭಾರತದ ಮತ್ತೊಂದು ಶಾಸ್ತ್ರೀಯ ಸಂಗೀತವಾದ ಟುಮ್ರಿಯಲ್ಲಿ ಹೆಚ್ಚು ಚಿಂತನೆಯ ಅಂಶಗಳಿವೆ, ಏಕೆಂದರೆ ಅದರಲ್ಲಿ ಖಯಾಲ್‌ಗಿಂತ ಹೆಚ್ಚಿನ ಶಬ್ದಗಳ ಬಳಕೆ ಆಗಿದೆ. ಆದಾಗ್ಯೂ ಸಾಮಾಜಿಕ ಅನ್ಯಾಯಗಳ ವಿರುದ್ಧ ಭಾವನೆಗಳನ್ನು ಉದ್ದೀಪನಗೊಳಿಸುವ ಯಾವುದೇ ಶೈಲಿ ಅಥವಾ ರಾಗ ಉತ್ತರ ಭಾರತೀಯ ಅಥವಾ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಇಲ್ಲ. ಅದು ಶುದ್ಧ ಕಲೆಗಾಗಿ ಕಲೆ, ಆದರೂ ಅದು ನಿಸ್ಸಂಶಯವಾಗಿ ಶ್ರೇಷ್ಠ ಕಲೆ.

ಕಲಾ ವಿಮರ್ಶಕರು ಸಾಮಾನ್ಯವಾಗಿ, ಕಲೆ ಮತ್ತು ಸಾಹಿತ್ಯದಲ್ಲಿರುವ ಎರಡು ಮೂಲ ಪ್ರವೃತ್ತಿ ಅಥವಾ ಒಲವುಗಳನ್ನು ವಾಸ್ತವವಾದ(ಯತಾರ್ಥವಾದ) ಮತ್ತು ಕಲ್ಪನಾವಾದ ಅಥವಾ ಭಾವನಾವಾದ ಎಂದು ಕರೆಯುತ್ತಾರೆ. ಜನಸಮುದಾಯದ ಮತ್ತು ಅವರ ಸಾಮಾಜಿಕ ಸ್ಥಿತಿಗತಿಗಳನ್ನು ಯಾವರೀತಿಯಲ್ಲಿಯೂ ತಿರುಚದೆ, ಇರುವುದನ್ನು ಇರುವ ಹಾಗೆ ಚಿತ್ರಿಸಿದಾಗ ಅದನ್ನು ವಾಸ್ತವವಾದ ಎನ್ನುತ್ತಾರೆ. ಭಾವನಾವಾದದಲ್ಲಿ ಕಲ್ಪನೆಗೆ, ಭಾವೋದ್ರೇಕಕ್ಕೆ ಮತ್ತು ಭಾವಾವೇಶದ ತೀವ್ರತೆಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ.

ವಾಸ್ತವವಾದ ಮತ್ತು ಭಾವನಾವಾದ ಎರಡೂ ಜಡ(ನಿಷ್ಕ್ರಿಯ)ವಾಗಬಹುದು ಅಥವಾ ಕ್ರಿಯಾಶೀಲವಾಗಬಹುದು. ಜಡ ವಾಸ್ತವವಾದವು ಯಥಾಪ್ರಕಾರ ಯಾವ ಉಪದೇಶವನ್ನೂ ಮಾಡದೆ, ಇರುವುದನ್ನು ಇರುವ ಹಾಗೆ ವಾಸ್ತವತೆಯನ್ನು ಚಿತ್ರಿಸುತ್ತದೆ. ಜೇನ್ ಆಸ್ಟೆನ್, ಜಾರ್ಜ್ ಈಲಿಯಟ್, ಮತ್ತು ಬ್ರಾಂಟೆ ಸಿಸ್ಟರ್ಸ್ ಇವರುಗಳ ಕಾದಂಬರಿಗಳು ಈ ಸಾಲಿಗೆ ಸೇರುತ್ತವೆ. ಈ ಅರ್ಥದಲ್ಲಿ ಅದನ್ನು ಸಾಮಾಜಿಕವಾಗಿ ತಟಸ್ಥ ಎನ್ನಬಹುದು. ಆದರೆ, ಜಡ ವಾಸ್ತವವಾದವು ಕೆಲವು ಸಂದರ್ಭದಲ್ಲಿ ದೈವವಾದವನ್ನು ಅಥವಾ ವಿಧಿವಾದವನ್ನು, ಜಡತೆಯನ್ನು ಅಥವಾ ನಿಷ್ಕ್ರಿಯತೆಯನ್ನು, ಕೆಡುಕುಗಳಿಗೆ ಸಾತ್ವಿಕ ಪ್ರತಿರೋಧವನ್ನು, ನರಳುವಿಕೆಯನ್ನು, ವಿನಯವನ್ನು ಅಥವಾ ನಮ್ರತೆಯನ್ನು ಬೋಧಿಸುತ್ತದೆ. ಟಾಲ್‌ಸ್ಟಾಯನ 'ಯುದ್ಧ ಮತ್ತು ಶಾಂತಿ' (ವಾರ್ ಅಂಡ್ ಪೀಸ್)ಯಲ್ಲಿ ತನ್ನ ವಿಧಿಯನ್ನು ಅತ್ಯಂತ ದೀನನಾಗಿ ಮತ್ತು ಸಂತೋಷದಿಂದ ಒಪ್ಪಿಕೊಳ್ಳುವ ವಿನೀತ ರೈತ ಪ್ಲೇಟನ್ ಕರಟಯೇವ್‌ನ ಚಿತ್ರಣವು


ಲೋರ್ಕ


ಪಿಕಾಸೋ

ಪುಟ 14ಕ್ಕೆ

ಹರಿಹರವನ್ನು ಸಾಯಿಸ ಹೊರಟಿರುವ ಕೋಮುವಾದಿಗಳು

ಹರಿಹರ ಹೈಸ್ಕೂಲ್ ಬಡಾವಣೆ ಮೂರನೇ ಮುಖ್ಯರಸ್ತೆಯ ಮಾರುತಿ ಮಂದಿರದ ಕಂಬವೊಂದರ ಮೇಲೆ ಸೀಮೆಸುಣ್ಣದಲ್ಲಿ ಅವಹೇಳನಕಾರಿ ಬರವಣಿಗೆಯ ಸುದ್ದಿಯನ್ನು ಸಂಘಪರಿವಾರದವರು ಕ್ಷಿಪ್ರಗತಿಯಲ್ಲಿ ನಗರದಲ್ಲೆಲ್ಲಾ ಅಂತೆ ಕಂತೆಗಳೊಂದಿಗೆ ಹರಡಿ ಸಾವಿರಾರು ಜನ ಉದ್ರೇಕಗೊಂಡು ಗಲಭೆ ನಡೆಸುವಂತಾಗಿ ಹರಿಹರ ನಗರವನ್ನು ಸೆಪ್ಟೆಂಬರ್ 22 ರಂದು ತಲ್ಲಣಗೊಳಿಸಿದ್ದಾರೆ. ಮಾರುತಿ ದೇವಸ್ಥಾನವು ಸವಿತಾ ಸಮಾಜಕ್ಕೆ ಸೇರಿದ್ದು, ಅದರ ಪಕ್ಕದಲ್ಲೇ ಮಸೀದಿ ಇದೆ. ಮಸೀದಿಯಿಂದ 100 ಅಡಿ ದೂರ ಆ ಲೈನಿನಲ್ಲೇ ರಾಮದೇವಸ್ಥಾನ ಇದೆ. ಈ ರಸ್ತೆ ಮತ್ತು ಸುತ್ತಮುತ್ತ ಅಲ್ಪಸಂಖ್ಯಾತರು ಹೆಚ್ಚಾಗಿದ್ದು, ದಲಿತ ಹಿಂದುಳಿದವರೂ ವಾಸಿಸುತ್ತಿದ್ದಾರೆ. ಕೋಮುವಾದಿಗಳು ಈ ಪ್ರದೇಶವನ್ನು ಗಲಭೆ ಹಬ್ಬಿಸಲು ಆಯ್ದುಕೊಂಡಿದ್ದಾರೆ.





ಬರಹದ ಸುದ್ದಿ ಮುಂಜಾನೆ ತಿಳಿದೊಡನೆ ಎಲ್ಲಾ ಕೋಮಿನವರೂ ಸೇರಿದಾಗ, ಮುಖಮಡರು ಘಟನೆ ಬಗ್ಗೆ ತಪ್ಪಿತಸ್ಥರನ್ನು ತಪಾಸಿಸಿ ಶಿಕ್ಷೆಗೆ ಒತ್ತಾಯಿಸಲು, ಹಾಗೂ ಪರಿಸ್ಥಿತಿಯನ್ನು ಉದ್ವಿಗ್ನಗೊಳಿಸದೆ ಶಾಂತಿಗಾಗಿ ಪ್ರಯತ್ನಿಸಿದ್ದರು. ಆ ಸಂದರ್ಭದಲ್ಲಿ ಬಿಜೆಪಿಯ ನಗರಸಭಾ ಸದಸ್ಯರು (ಒಬ್ಬರೇ ಬಿಜೆಪಿ ಸದಸ್ಯರಿರುವುದು) ಸಂಘ ಪರಿವಾರದ ಮುಖಂಡರನ್ನು ಸಂಪರ್ಕಿಸಿ ಪರಿಸ್ಥಿತಿಯನ್ನು ಉದ್ವಿಗ್ನಗೊಳಿಸಲು ಕಾರಣರಾದರೆಂದು ಆ ವಿಭಾಗದ ನಾಗರೀಕರು ಹೇಳುತ್ತಾರೆ. ಸಾವಿರಾರು ಜನರ ಬೆಳಿಗ್ಗೆ 10 ಗಂಟೆಗೆ ಜಯಾಯಿಸಿ, ಅಶ್ಲೀಲ ಘೋಷಣೆ ಯೊಂದಿಗೆ ಅಲ್ಪಸಂಖ್ಯಾತ ಮುಸ್ಲಿಂ ವಿರೋಧಿ ಭಾವನೆ ಕೆರಳಿಸುತ್ತಾ ಅಲ್ಪಸಂಖ್ಯಾತರಿಗೆ ಸೇರಿದ 2, 3 ಕಾರು, ಅನೇಕ ಸ್ಕೂಟರ್ ಬೈಕ್ ಮನೆಗಳಿಗೆ ಕಲ್ಲು ಹೊಡೆದು ಜಖಂಗೊಳಿಸಲಾಗಿದೆ. ತಾಲ್ಲೂಕು ಕಛೇರಿವರೆಗೆ ದಾಂಧಲೆ ನಡೆಸುತ್ತಾ ಹೊರಟ ಗುಂಪನ್ನು ಮಧ್ಯಾಹ್ನ 2 ಸುಮಾರಿಗೆ ನಿಯಂತ್ರಣಕ್ಕೆ ತರುವಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಆಡಳಿತ ಯಶಸ್ವಿಯಾಯ್ತು.


ಈ ಘಟನೆಗೆ 4 ದಿನ ಮೊದಲು ಅದೇ ಪ್ರದೇಶದಲ್ಲಿರುವ ಕಾಲೇಜು ಮಹಡಿ ಗೋಡೆಯಲ್ಲಿ ಹಿಂದೂಗಳನ್ನು ಕೆರಳಿಸುವ ಬರಹವನ್ನು ಬಣ್ಣದಲ್ಲಿ ಬರೆಯಲಾಗಿತ್ತು. ಆ ಸಂದರ್ಭದಲ್ಲಿಯೂ ಕೋಮುದ್ವೇಷವನ್ನು ಹಬ್ಬಿಸಲು ಜನರನ್ನು ಸೇರಿಸಿ ಕೆರಳಿಸಿ ನಡೆಸಿದ ಪ್ರಯತ್ನವನ್ನು ವಿಫಲಗೊಳಿಸಲಾಗಿತ್ತು.



ಸಿಪಿಐ(ಎಂ) ಪಕ್ಷದ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಕೆ.ಎಲ್.ಭಟ್ ಪಕ್ಷದ ಮುಖಂಡರಾದ ನಾಗರಾಜ್, ರೇವಣಸಿದ್ದಪ್ಪ ಮತ್ತು ಮಂಜುನಾಥ್ ಇವರು ಘಟನೆ ನಡೆದ ದೇವಸ್ಥಾನ ಮತ್ತು ಕಾಲೇಜಿಗೆ ಭೇಟಿ ನೀಡಿ, ಸವಿತಾ ಸಮಾಜ ಅಧ್ಯಕ್ಷ, ಕಾರ್ಯದರ್ಶಿ ಮಾಜಿ ಅಧ್ಯಕ್ಷ, ನಗರಸಭೆಯ ಅಧ್ಯಕ್ಷಿಣಿ, ಮುಸ್ಲಿಂ ಸಮುದಾಯದವರು, ಅಕ್ಕಪಕ್ಕದ ನಾಗರೀಕರನನ್ನು ಕಂಡು ಘಟನೆ ಬಗ್ಗೆ ವಿವರ ಪಡೆಯಿತು.

ಅಲ್ಪಸಂಖ್ಯಾತರು ದಲಿತರು ಹಿಂದುಳಿದವರು ಹೆಚ್ಚಾಗಿರುವ ಪ್ರದೇಶ, ಅವರ ಆರಾಧನಾ ಸ್ಥಳಗಳು. ಅಕ್ಕಪಕ್ಕದಲ್ಲಿರುವ ಸ್ಥಳವನ್ನು ಗಲಭೆ ಸೃಷ್ಟಿಸಲು ಆಯ್ಕೆ ಮಾಡಿರುವುದು ಯೋಜನಾ ಬದ್ಧವಾಗಿ 2 ಗಂಟೆಯೊಳಗೆ ಜನರನ್ನು ಸೇರಿಸಿ ಉದ್ರೇಕಗೊಳಿಸಿ ಅಲ್ಪಸಂಖ್ಯಾತರ ವಾಹನ ಮನೆಗಳನ್ನು ಗುರಿಯಿಟ್ಟು ಹಾನಿಪಡಿಸಿರುವುದು ಕಂಡು ಬಂತು. ಕಳೆದ 8 ವರ್ಷಗಳ ಹಿಂದೆ ಮೈಸೂರು ಕಿರ್ಲೋಸ್ಕರ್ ಕಂಪನಿಯ ದಿಢೀರ್ ಮುಚ್ಚುವಿಕೆಯಿಂದ ನಿರ್ಗತಿಕರಾಗಿರುವ ಸಾವಿರಾರು ಕುಟುಂಬಗಳಿರುವ ವ್ಯಾಪಾರ ವಹಿವಾಟನಿಂದ ಅರೆಸತ್ತಿರುವ ಹರಿಹರವನ್ನು ಕೋಮುದ್ವೇಶ ಹಬ್ಬಿಸಿ ಪೂರ್ತಿ ಸಾಯಿಸುವ ಹುನ್ನಾರವನ್ನು ವಿಫಲಗೊಳಿಸಬೇಕಾಗಿದೆ.

ವರದಿ: ಕೆ.ಎಲ್.ಭಟ್



'ದೈವ' ಕಣಗಳ ಬೆಂಬತ್ತಿ ಹೊರಟ ವಿಜ್ಞಾನಿಗಳು

ಮೂರು ವಾರಗಳ ಹಿಂದೆ ವಿಜ್ಞಾನಿಗಳು ಆರಂಭಿಸಿದ ದೈತ್ಯ ಡಿಕ್ಕಿಕಾರಕ (ಲೈಟ್ ಹ್ಯಾಡ್ರನ್ ಕೊಲೈಡರ್) ಪ್ರಯೋಗದಿಂದಾಗಿ ಭೂಮಂಡಲದಲ್ಲಿ ಪ್ರಳಯವುಂಟಾಗುವುದೆಂದು ಹಲವರು ಭಯ ಉಂಟುಮಾಡಿದ್ದರು. ಆದರೆ ನಂತರದಲ್ಲಿ, ಅಮೇರಿಕಾದ ಆರ್ಥಿಕ ವ್ಯವಸ್ಥೆಯನ್ನೇ ಬುಡಮೇಲು ಮಾಡಿ ಪ್ರಳಯವುಂಟು ಮಾಡಿರುವುದು ಇತಿಹಾಸದ ಭಾಗ! ಕಾರಣ: ಜಾರ್ಜ್‌ಬುಷ್ ಅನುಸರಿಸಿದ ಆರ್ಥಿಕ-ಮಿಲಿಟರಿ ಧೋರಣೆಗಳು ಮತ್ತು ಅಮೇರಿಕಾದ ಬಂಡವಾಳಶಾಹಿ ಕಂಪನಿಗಳು ಜನರಿಗೆ ತೋರಿಸಿಕೊಂಡು ಬಂದ ತಪ್ಪು ಲೆಕ್ಕಗಳು. ಇದರ ಕುರಿತಾಗಿ ಗೊತ್ತಿದ್ದೂ ಯಾವೊಂದು ಬಂಡವಾಳಶಾಹಿ ಮಾಧ್ಯಮವು ಮುನ್ಸೂಚನೆ ಕೊಡದಿದ್ದರಿಂದ ಅಲ್ಲಿಯ ಜನಸಾಮಾನ್ಯರಿಗೆ 700 ಬಿಲಿಯನ್ ಡಾಲರ್ ದುಬಾರಿ ತೆರಿಗೆ ಹೊರೆ!

ಭೂಗರ್ಭ ಪ್ರಯೋಗಾಲಯದಲ್ಲಿ 'ದೈವ'ಕಣಗಳ ಪರೀಕ್ಷೆ ಸ್ಥಗಿತ:

ಭೂತಳದ 27 ಮೈಲು ಉದ್ದದ ಸುರಂಗ ಮಾರ್ಗದ ಪ್ರಯೋಗಾಲಯದಲ್ಲಿ ನಡೆಯುತ್ತಿದ್ದ ವಿಶ್ವ 'ಮಹಾ ಸ್ಫೋಟ'ದ ಪರೀಕ್ಷೆ ಸದ್ಯಕ್ಕೆ ಸ್ಥಗಿತಗೊಂಡಿದೆ. ಪ್ರಯೋಗ ಸಮಯದಲ್ಲಿ ಕಣಗಳ ಡಿಕ್ಕಿಯ ರಭಸಕ್ಕೆ ವಿದ್ಯುತ್ ತಂತುಗಳು ಕಡಿತಗೊಂಡಿರುವುದು ಇದಕ್ಕೆ ಕಾರಣ. ಇದನ್ನು ಸರಿಪಡಿಸಿದ ನಂತರ ಪ್ರಯೋಗಾಲಯದಲ್ಲಿ ಪರೀಕ್ಷೆಗಳು ಪುನರಾರಂಭವಾಗುತ್ತವೆಂದು ಹೇಳಲಾಗಿದೆ.

ನಮ್ಮ ವಿಶ್ವ ಒಂದು ಮಹಾಸ್ಫೋಟದ ಮೂಲಕ ಸೃಷ್ಟಿಯಾಗಿದೆಯೆಂದು ಪ್ರತಿಪಾದಿಸುವ 'ಮಹಾ ಸ್ಫೋಟ' ಸಿದ್ಧಾಂತ (ಬಿಗ್‌ಬ್ಯಾಂಗ್ ಥಿಯರಿ)ದಲ್ಲಿ ಕೆಲವು ವಿವರಿಸದೇ ಬಿಟ್ಟಿರುವ ಅಂಶಗಳಿವೆ. ಎಲ್ಲ ವಸ್ತುಗಳು ಮೂಲ ವಸ್ತುಗಳಿಂದ ಆಗಿವೆ. ಮೂಲವಸ್ತುಗಳು ಪರಮಾಣುವಿನಿಂದಾಗಿವೆ. ಆದರೆ ಈ ಪರಮಾಣುಗಳ ಒಳಗಿರುವ ಮೂಲ ಕಣಗಳು ಯಾವುದು? ಈ ಕಣಗಳು ಹೇಗೆ ತಮ್ಮ ದ್ರವ್ಯರಾಶಿಯನ್ನು ಗಳಿಸಿಕೊಳ್ಳುತ್ತವೆ? ಎಂಬುದು ಯಕ್ಷಪ್ರಶ್ನೆಯಾಗಿತ್ತು. ಪರಮಾಣುವಿನ ಗರ್ಭದಲ್ಲಿ ಧನ ವಿದ್ಯುದಾವೇಶ ಹೊಂದಿದ ಪ್ರೋಟಾನ್ ಹಾಗೂ ಆವೇಶರಹಿತ ನ್ಯೂಟ್ರಾನ್‌ಗಳಿರುವುದು ಪತ್ತೆಯಾಯಿತು. ಕೆಲವು ನೈಸರ್ಗಿಕ ಭಾರಧಾತುಗಳು (ಯುರೇನಿಯಂ) ಸ್ವಪ್ರೇರಿತವಾಗಿ ವಿಘಟಿಸುವ ವಿಕಿರಣಪಟುತ್ವವೆಂಬ (ರೇಡಿಯೊ ಆಕ್ಟಿವಿಟಿ) ಪ್ರಕ್ರಿಯೆಯ ಆವಿಷ್ಕಾರ ಮತ್ತೊಂದು ಮೈಲಿಗಲ್ಲು. 1963ರಲ್ಲಿ ಪ್ರೋಟಾನ್ ಮತ್ತು ನ್ಯೂಟ್ರಾನ್‌ಗಳು 'ಕ್ವಾರ್ಕ್' ಎಂಬ ಮೂಲಕಣಗಳಿಂದಾಗಿವೆಯೆಂದು ಮರ್ರೆಗೆಲ್‌ಮನ್ ಮತ್ತು ಜಾರ್ಜ್‌ಜ್ವಿಗ್ ಪರಿಕಲ್ಪನೆ ನೀಡಿದರು.

ಕಣ ಭೌತಶಾಸ್ತ್ರ (ಪಾರ್ಟಿಕಲ್ ಫಿಸಿಕ್ಸ್) ಮತ್ತು ಮೂಲಕಣಗಳ ಶೋಧ

ವಿಜ್ಞಾನಿಗಳನ್ನು ಕಾಡುತ್ತಿರುವ ಮೂಲಭೂತ ಸಮಸ್ಯೆಯಾದ ಸೃಷ್ಟಿರಹಸ್ಯವನ್ನು ಅರಿಯುವಲ್ಲಿ ಕಣಭೌತ ವಿಜ್ಞಾನ ನೆರವಾಗುತ್ತಿದೆ. ಉಪಕಣಗಳಾಗಿ ವಿಭಜಿಸಲು ಸಾಧ್ಯವಾಗದೆಂದು ಭಾವಿಸಲಾಗಿರುವ ವಸ್ತು ಘಟಕವೇ ಮೂಲಕಣ; ಸ್ವತಂತ್ರವಾಗಿ ಉಳಿಯಬಲ್ಲ ಹಾಗೂ ಶಕ್ತಿಯುಳ್ಳ ವಸ್ತುವಿನ ಸರಳ ರೂಪ. ಇನ್ನೂ ಹೆಚ್ಚು ಸಣ್ಣ ಘಟಕಗಳಾಗಿ ಒಡೆಯಲಾಗದ ಕಣ. ಇವುಗಳನ್ನು ಲೆಪ್ಟಾನ್ ಮತ್ತು ಹೇಡ್ರಾನ್ ಹಾಗೂ ಗೇಜ್ ಬೋಸಾನ್‌ಗಳೆಂದು ವಿಂಗಡಿಸಲಾಗುತ್ತದೆ. ಗೇಜ್ ಬೋಸಾನ್ ಕಣಗಳಲ್ಲಿ ನಾಲ್ಕು ಮಾದರಿಗಳಿವೆ: ಫೋಟಾನ್, ಗ್ಲೂ ಆನ್, ವೆಕ್ಟರ್ ಬೋಸಾನ್ ಮತ್ತು ಗ್ರಾವಿಟಾನ್. ಬಿಗ್‌ಬ್ಯಾಂಗ್ ಪರಿಕಲ್ಪನೆಯಲ್ಲಿ ಹೇಡ್ರಾನ್‌ಗಳ ಸೃಷ್ಟಿಯಲ್ಲಿ ಕ್ವಾರ್ಕ್‌ಗಳದ್ದೇ ಪ್ರಧಾನಪಾತ್ರ. ನಂತರದಲ್ಲಿ ಕಣ ಭೌತಶಾಸ್ತ್ರದ 'ಸ್ಟ್ಯಾಂಡರ್ಡ್ ಮಾಡೆಲ್' ಸಿದ್ಧಾಂತವು ಪರಮಾಣುವಿನಲ್ಲಿ 'ಹಿಗ್ಸ್ ಬೋಸಾನ್' ಎಂಬ ಉಪಕಣಗಳಿವೆಯೆಂದು ತಿಳಿಸಿತು.

ಹೀಗೆ, ಪರಮಾಣುವಿನಲ್ಲಿ ಕಂಡು ಬರುವ ಒಂದು ರೀತಿಯ ಉಪ-ಕಣಕ್ಕೆ 'ಬೋಸಾನ್' ಎಂದು ಹೆಸರು. 1924ರಲ್ಲಿ ಸತ್ಯೇಂದ್ರ ಬೋಸ್ ಇದನ್ನು ಪ್ರತಿಪಾದಿಸಿದ್ದರಿಂದ ಅವರ ಹೆಸರನ್ನೇ ಇಡಲಾಗಿದೆ. ಮಹಾಸ್ಫೋಟ ಜರುಗಿದ ಕ್ಷಣಾರ್ಧದಲ್ಲಿ ವಿಶ್ವದಲ್ಲಿರುವ ದ್ರವ್ಯ ತನ್ನ ದ್ರವ್ಯರಾಶಿಯನ್ನು ಹೇಗೆ ಗಳಿಸಿಕೊಂಡಿತು ಎಂಬ ಸಿದ್ಧಾಂತವನ್ನು ಬ್ರಿಟನ್ ವಿಜ್ಞಾನಿ ಪೀಟರ್ ಹಿಗ್ಸ್ ಮಂಡಿಸಿದ್ದರು. ಅದರಿಂದಲೇ 'ಬೋಸಾನ್ ಹಿಗ್ಸ್' ಸಿದ್ಧಾಂತ ಪ್ರಚುರಗೊಂಡಿತು. ಈ ಸಿದ್ಧಾಂತದ ಪ್ರಕಾರ ಮಹಾಸ್ಫೋಟಗೊಂಡಾಗ ಹಿಗ್ಸ್ ಕ್ಷೇತ್ರವಿತ್ತು. ಅದರಲ್ಲಿ ಬೋಸಾನ್ ಕಣಗಳು ತಮಗೆ ಡಿಕ್ಕಿ ಹೊಡೆಯುವ ಪರಮಾಣುವಿನ ಇತರೆಲ್ಲ ಉಪಕಣಗಳಿಗೆ ದ್ರವ್ಯರಾಶಿಯನ್ನು ನೀಡುತ್ತವೆ. ಬೋಸಾನ್ ಕಣಗಳೊಂದಿಗೆ ಹೆಚ್ಚೆಚ್ಚು ಡಿಕ್ಕಿ ಹೊಡೆದಂತೆಲ್ಲ ಉಪ ಕಣಗಳು ಹೆಚ್ಚೆಚ್ಚು ದ್ರವ್ಯರಾಶಿ ಗಳಿಸಿಕೊಳ್ಳುತ್ತ ಹೋಗುತ್ತವೆ. ಬೋಸಾನ್ ಕಣಗಳ ಸಂಪರ್ಕಕ್ಕೆ ಬರದೆ ಡಿಕ್ಕಿ ಹೊಡೆಸಿಕೊಳ್ಳದ ಕಣಗಳು ದ್ರವ್ಯರಾಶಿ ಗಳಿಸಿಕೊಳ್ಳದೇ ಹಗುರಾಗುತ್ತ ಹೋಗುತ್ತವೆ. ಹೀಗೆ ಬೋಸಾನ್ ಕಣಗಳಿಗೆ ಡಿಕ್ಕಿ ಹೊಡೆದು ದ್ರವ್ಯರಾಶಿ ಪಡೆಕೊಳ್ಳುವ ಕಣಗಳಿಗೆ 'ಹಿಗ್ಸ್ ಬೋಸಾನ್' ಎಂದು ಹೆಸರು. ಇವುಗಳನ್ನು 'ದೈವ ಕಣಗಳು' ಎಂದೂ ಕರೆಯಲಾಗುತ್ತದೆ.

ಆದರೆ ಇದುವರೆಗಿನ ಯಾವೊಂದು ಪರೀಕ್ಷೆಯಿಂದಾಗಿಯೂ ಈ 'ದೈವ' ಕಣಗಳ ಇರುವಿಕೆಯನ್ನು ಪ್ರತ್ಯಕ್ಷದರ್ಶಿಸಲು ಸಾಧ್ಯವಾಗಿಲ್ಲ. ಪ್ರಸ್ತುತ ಮಹಾ ಪರೀಕ್ಷೆ ಅದರ ಇರುವಿಕೆಯ ಕುರಿತು ಬೆಳಕು ಚೆಲ್ಲಲಿದೆಯೆಂಬುದು ವಿಜ್ಞಾನಿ ಸಮುದಾಯದ ಮಹದಾಸೆ. ○

ಕಲೆ ಮತ್ತು ಸಾಹಿತ್ಯ.....

ಪುಟ 12 ರಿಂದ

ಅದಕ್ಕೊಂದು ಉದಾಹರಣೆ. ಕೆಲವು ಬರಹಗಾರರು ಪ್ರಾರಂಭದಲ್ಲಿ ಕ್ರಿಯಾಶೀಲರಾಗಿದ್ದು ಆನಂತರದಲ್ಲಿ ನಿಷ್ಕ್ರಿಯರಾಗುತ್ತಾರೆ. ದೊಸ್ತೊವಸ್ಕಿ ಇದಕ್ಕೊಂದು ನಿದರ್ಶನ. ಮತ್ತೊಂದೆಡೆ, ಟಾಲ್‌ಸ್ಟಾಯ್ 'ಯುದ್ಧ ಮತ್ತು ಶಾಂತಿ'ಯಲ್ಲಿ ವಿಧಿವಾದಿಯಾಗಿದ್ದವನು 'ಪುನರುತ್ಥಾನ'(ರಿಸರೆಕ್ಷನ್) ಬರೆದಾಗ ಸಮಾಜ ಸುಧಾರಕನಾಗಿ ಬದಲಾಗಿದ್ದ.

ಚಾರ್ಲ್ಸ್ ಡಿಕನ್ಸ್, ವಿಕ್ಟರ್ ಹ್ಯೂಗೋ, ಮ್ಯಾಕ್ಸಿಮ್ ಗಾರ್ಕಿ, ಹಾಗೂ ಶರತ್ ಚಂದ್ರ ಚಟ್ಟೋಪಾಧ್ಯಾಯ ಇವರುಗಳು ಕ್ರಿಯಾಶೀಲ ವಾಸ್ತವವಾದಿಗಳ ಗುಂಪಿಗೆ ಸೇರುತ್ತಾರೆ. ಇವರುಗಳು ದೈವವಾದ ಅಥವಾ ವಿಧಿವಾದವನ್ನು, ನಿಷ್ಕ್ರಿಯತೆ ಯನ್ನು, ಮತ್ತು ಅನ್ಯಾಯ ಹಾಗೂ ಅನಿಷ್ಟಗಳ ವಿರುದ್ಧ ಪ್ರತಿಭಟಿಸಬಾರದು ಎನ್ನುವ ವಾದವನ್ನು ವಿರೋಧಿಸುತ್ತಾರೆ. ಸಾಮಾಜಿಕ ಕೆಡುಕುಗಳ ವಿರುದ್ಧ ಸೆಣಸಲು ಅವರು ಸ್ಫೂರ್ತಿ ನೀಡುತ್ತಾರೆ. ಶರತ್ ಚಂದ್ರರ ಕತೆ ಮತ್ತು ಕಾದಂಬರಿಗಳಲ್ಲಿ, ಮಹಿಳೆಯರ ಮೇಲಿನ ದಬ್ಬಾಳಿಕೆ ಮತ್ತು ಜಾತಿ ವ್ಯವಸ್ಥೆಯ ವಿರುದ್ಧ ಪ್ರಬಲವಾದ ಧಾಳಿಯನ್ನು ನಾವು ಕಾಣಬಹುದು.

ಜಡ ವಾಸ್ತವವಾದದ ಶಕ್ತಿ ಇರುವುದು ಅದು ಎತ್ತಿತೋರಿಸುವ ಮಾನವ ಪ್ರೇರಣೆಗಳು ಮತ್ತು ಸಾಮಾಜಿಕ ಅನಿಷ್ಟಗಳು, ಹಾಗೆಯೇ ಸ್ಪಷ್ಟವಾದ ತತ್ವ ಮತ್ತು ಆದರ್ಶಗಳ ಕೊರತೆಯೇ ಅದರ ದೌರ್ಬಲ್ಯ. ಈ ಸಾಹಿತ್ಯ ಅಮೂಲ್ಯವಾದದ್ದು ಏಕೆಂದರೆ ವಾಸ್ತವತೆಯ ಬಗೆಗೆ ಅದು ತಳೆದಿರುವ ನೈಜ ಧೋರಣೆ, ಕಣ್ಣಿಗೆ ಕಾಣುವುದನ್ನು ಮತ್ತು ವಾಸ್ತವವನ್ನು ಸೂಕ್ಷ್ಮ ವಿವರಗಳೊಂದಿಗೆ ಹೇಳುವುದರತ್ತ ಹೆಚ್ಚು ಗಮನ ನೀಡುವುದು.



ಯುದ್ಧದ ದುಷ್ಪರಿಣಾಮದ ಕುರಿತ ಪಿಕಾಸೋ ಅವರ ವಿಶ್ವವಿಖ್ಯಾತ ಕಲಾಚಿತ್ರ

ಆದರೆ ಅದು ಜನರಿಗೆ ಯಾವ ಮಾರ್ಗವನ್ನೂ ತೋರಿಸಲಿಲ್ಲ. ಅದು ಪ್ರತಿಯೊಂದರಲ್ಲೂ ದೋಷ ಹುಡುಕಿತೇ ವಿನಃ ಏನನ್ನೂ ಪ್ರತಿಪಾದಿಸಲಿಲ್ಲ. ಮತ್ತು ಹೆಚ್ಚಿನ ಸಂದರ್ಭಗಳಲ್ಲಿ ಅದು ಮನುಷ್ಯನನ್ನು ದೈವವಾದದ ದೃಷ್ಟಿಯಲ್ಲೇ ನೋಡಿ, ಅವನು ಪರಿಸ್ಥಿತಿಯ ನಿಷ್ಕ್ರಿಯ ಶಿಶು ಹಾಗೂ ಅವನು ಸಾಮಾಜಿಕ ಪರಿಸ್ಥಿತಿಯನ್ನು ಬದಲಾಯಿಸಲಾಗದ ಅಸಹಾಯಕ ಮತ್ತು ಅಸಮರ್ಥ ಪ್ರಾಣಿ ಎಂದೇ ಪರಿಗಣಿಸಿತು.

ಜಡ ಹಾಗೂ ಕ್ರಿಯಾಶೀಲ ವಾಸ್ತವವಾದಗಳೆರಡೂ ಒಂದು ಸಾಮಾಜಿಕ ಗುರಿಯನ್ನು ಸಾಧಿಸಬಹುದು. ಆದರೆ ಜಡ ವಾಸ್ತವವಾದವು ಅನೇಕ ವೇಳೆ ದೈವವಾದವನ್ನು, ನಿರಾಶಾವಾದವನ್ನು ಮತ್ತು ಸಮಾಜವನ್ನು ಉತ್ತಮಪಡಿಸುವ ಪ್ರಯತ್ನಗಳೆಲ್ಲವೂ ನಿರರ್ಥಕವೆಂದು ಬೋಧಿಸುತ್ತದೆ. ಕ್ರಿಯಾಶೀಲ ವಾಸ್ತವವಾದವು, ಅದಕ್ಕೆ ವ್ಯತಿರಿಕ್ತವಾಗಿ, ಆಶಾವಾದವನ್ನು, ಉತ್ಸುಕತೆ ಹಾಗೂ ಜನರ ಬಗೆಗಿನ ಕಾಳಜಿಯ ಗುಣಗಳೊಂದಿಗೆ ಅವರ ದೀನಾವಸ್ಥೆಯ ವಿರುದ್ಧ ಸೆಣಸಲು ಮತ್ತು ಸಾಮಾಜಿಕ ಸ್ಥಿತಿಯನ್ನು ಉತ್ತಮಗೊಳಿಸಲು ಸ್ಫೂರ್ತಿ ನೀಡುತ್ತದೆ.

ಶೇಕ್ಸ್‌ಪಿಯರ್, ಬಾಲ್ಜಾಕ್, ಟಾಲ್‌ಸ್ಟಾಯ್, ಮತ್ತು ಮಿರ್ಜಾ ಘಾಲಿಬ್ ರವರಂಥ ಬರಹಗಾರರನ್ನು ಅವರು ಭಾವನಾವಾದಿಗಳೆ ಅಥವಾ ವಾಸ್ತವವಾದಿಗಳೆ ಎಂದು ಸಾಕಷ್ಟು ಕರಾರುವಾಕ್ಕಾಗಿ ನಿರ್ಧರಿಸುವುದು ಕಷ್ಟ. ಅವರ ಕೃತಿಗಳಲ್ಲಿ ಎರಡು ಪ್ರವೃತ್ತಿಗಳೂ ಒಂದಕ್ಕೊಂದು ಹೊಸೆದುಕೊಂಡಿವೆ. ನಿಜ ಹೇಳಬೇಕೆಂದರೆ, ಉತ್ತಮ ಕಲೆಯು ಹಲವು ಬಾರಿ ಇವೆರಡರ ಸಂಗಮ.

ಭಾವನಾವಾದವು, ವಾಸ್ತವ ವಾದದಂತೆಯೇ, ಜಡವೂ ಆಗಿರಬಹುದು ಅಥವಾ ಕ್ರಿಯಾಶೀಲವೂ ಆಗಿರಬಹುದು. ಜಡ ಭಾವನಾವಾದವು ಜನರ ಗಮನವನ್ನು ವಾಸ್ತವ ಪ್ರಪಂಚದಿಂದ ಬೇರೆಡೆಗೆ ಸೆಳೆದು ಕಲ್ಪನಾ ಜಗತ್ತಿಗೆ ಅಥವಾ ಭ್ರಮಾಲೋಕಕ್ಕೆ ಕೊಂಡೊಯ್ಯುವ; ಅಥವಾ ತಮ್ಮದೇ ಆದ ನಿಷ್ಫಲ ಒಳಜಗತ್ತಿನಲ್ಲಿ ನಿರತರಾಗಿರುವಂತೆ ಮಾಡುವ, 'ಬದುಕಿನ ನಿಗೂಢತೆ'ಯ ಅಥವಾ ಪ್ರೇಮ ಮತ್ತು ಸಾವಿನ ಚಿಂತೆಯಲ್ಲಿ ಮುಳುಗುವಂತೆ ಮಾಡುವ ಪ್ರಯತ್ನ ಮಾಡುತ್ತಿರುತ್ತದೆ. ಅದರ ಪಾತ್ರಗಳು ಭ್ರಮಾಲೋಕದ ವೀರಾಧಿವೀರ, ರಾಜಕುಮಾರ, ದೆವ್ವ, ಭೂತಗಳು ಮುಂತಾದವುಗಳಾಗಿರುತ್ತವೆ. ರಾಜರುಗಳನ್ನು ಮತ್ತು ರಾಜಕುಮಾರರನ್ನು ಸಂಪ್ರೀತಗೊಳಿಸಲು, ಮತ್ತು ಶೃಂಗಾರ ಹಾಗೂ ಪ್ರೇಮದ ವಿಷಯಗಳ ಕುರಿತು ಬರೆದ ಬಹುಮಟ್ಟಿನ ರೀತಿಕಲ್ ಹಿಂದಿ ಕಾವ್ಯಗಳು ಈ ವರ್ಗಕ್ಕೆ ಸೇರಿದವು. ಜಡ ಭಾವನಾವಾದವು ಯಾವ ಸಾಮಾಜಿಕ ಉದ್ದೇಶವನ್ನೂ ಹೊಂದಿರುವುದಿಲ್ಲ.

ಕ್ರಿಯಾಶೀಲ ಭಾವನಾವಾದವು, ಅತ್ತ ಕಡೆಯಲ್ಲಿ, ಸಾಮಾಜಿಕ ಅನಿಷ್ಟಗಳ ವಿರುದ್ಧ ಮನುಷ್ಯನನ್ನು ಎಬ್ಬಿಸುವ ಪ್ರಯತ್ನಮಾಡುತ್ತಿರುತ್ತದೆ. ಅದು ಸ್ಪಷ್ಟವಾಗಿ ಒಂದು ಸಾಮಾಜಿಕ ಗುರಿಯನ್ನು ಹೊಂದಿರುತ್ತದೆ. ಕ್ರಿಯಾಶೀಲ ಭಾವನಾವಾದವು ವಾಸ್ತವತೆಯಿಂದ ಇನ್ನೂ ಮೇಲಕ್ಕೆ ಹೋಗುತ್ತದೆ, ಅದನ್ನು ಕಡೆಗಣಿಸುವುದರ ಮೂಲಕವಲ್ಲ ಬದಲಿಗೆ ಅದನ್ನು ಪರಿವರ್ತಿಸಲು ಹೆಣಗುವುದರ ಮೂಲಕ. ವಾಸ್ತವವನ್ನು ಬಿಂಬಿಸುವುದು ಹಾಗೂ ಈಗ ಅಸ್ತಿತ್ವದಲ್ಲಿರುವುದನ್ನು ಚಿತ್ರಿಸುವುದಷ್ಟೆ ಅಲ್ಲ, ಅದಕ್ಕಿಂತಲೂ ಉನ್ನತವಾದ ಗುರಿ ಸಾಹಿತ್ಯಕ್ಕಿರಬೇಕು ಎಂದು ಸಕ್ರಿಯ ಭಾವನಾವಾದವು ಬಯಸುತ್ತದೆ. ರೂಸ್ಸೋನ ಎಮಿಲಿ ಹಾಗೂ ನ್ಯೂ ಹೆಲೈಸ್ ಇದಕ್ಕೆ ಉದಾಹರಣೆಗಳು.

'ಸಾಮಾಜಿಕ ಉದ್ದೇಶಕ್ಕಾಗಿ ಕಲೆ'ಯನ್ನು ಯಾವಾಗಲೂ ನೇರವಾಗಿ ವ್ಯಕ್ತಪಡಿಸಬೇಕಾಗಿಲ್ಲ, ಅದನ್ನು ಪರೋಕ್ಷವಾಗಿ, ಸುತ್ತುಬಳಸಿ ಅಥವಾ ಮರೆಮಾಚಿ ಕೂಡ ಅನೇಕ ವೇಳೆ, ಉದಾಹರಣೆಗೆ, ವಿಡಂಬನೆಯ ರೀತಿಯಲ್ಲಿ ಸಹ ವ್ಯಕ್ತಪಡಿಸಬಹುದು.

ಒಂದು ಸಾಮಾಜಿಕ ಉದ್ದೇಶವನ್ನು ಬಹುಪಾಲು ಸಾಧಿಸುವ ಬಹುಮಟ್ಟಿನ ಉರ್ದು ಕಾವ್ಯ (ದಮನಕಾರಿ ಸಂಪ್ರದಾಯಗಳು ಮತ್ತು ಆಚರಣೆಗಳನ್ನು ಕಬೀರನ ಕವಿತೆಗಳಲ್ಲಿ ಖಂಡಿಸಿರುವಂತೆ) ತನ್ನ ಸಾಮಾಜಿಕ ಕಳಕಳಿಯನ್ನು ಪರೋಕ್ಷವಾಗಿ ವ್ಯಕ್ತಪಡಿಸಿವೆ. 'ಸಾಮಾಜಿಕ ಉದ್ದೇಶದ ಕಲೆ'ಯು ಧಾರ್ಮಿಕ ರೂಪದಲ್ಲಿಯೂ ಬರಬಹುದು; ಹಿಂದಿಯಲ್ಲಿನ ಭಕ್ತಿ ಪಂಥದ ಕವಿತೆಗಳು ಅದಕ್ಕೆ ನಿದರ್ಶನ.

ಸ್ವೀಕಾರಾರ್ಹ ಉದ್ದೇಶ

ಈಗ, ಮತ್ತದೇ ಪ್ರಶ್ನೆಗೆ ಹಿಂದಿರುಗೋಣ; ಭಾರತದಲ್ಲಿನ ಕಲಾವಿದರು ಮತ್ತು ಬರಹಗಾರರು 'ಕಲೆಗಾಗಿ ಕಲೆ' ಅಥವಾ 'ಸಾಮಾಜಿಕ ಉದ್ದೇಶಕ್ಕಾಗಿ ಕಲೆ' ಇವೆರಡರಲ್ಲಿ ಯಾವುದನ್ನು ಅನುಸರಿಸಬೇಕು? ದೇಶಕ್ಕಿಂದು ಯಾವುದು ಹೆಚ್ಚು ಪ್ರಯೋಜನ? 'ಕಲಾವಿದನಾಗಿ ಯಾರು ಶ್ರೇಷ್ಠ, ಶೇಕ್ಸ್‌ಪಿಯರ್‌ನೋ ಅಥವಾ ಬರ್ನಾರ್ಡ್ ಷಾನೋ' ಎಂಬ ಪ್ರಶ್ನೆ ಇಲ್ಲಿ ಹೆಚ್ಚು ಪ್ರಸ್ತುತವಲ್ಲ.

ಭಾರತದಂತಹ ಬಡ ದೇಶದಲ್ಲಿ, ಎರಡನೆಯ ಮಾರ್ಗ('ಸಾಮಾಜಿಕ ಉದ್ದೇಶಕ್ಕಾಗಿ ಕಲೆ') ಮಾತ್ರವೇ ಇಂದು ಸ್ವೀಕಾರಾರ್ಹ. ಉತ್ತಮ ಭಾರತಕ್ಕಾಗಿ ಹೋರಾಡುತ್ತಿರುವವರ ಜತೆ ಕಲಾವಿದರು ಮತ್ತು ಬರಹಗಾರರು ತಮ್ಮನ್ನು ಗುರುತಿಸಿಕೊಳ್ಳಬೇಕು. ದೌರ್ಜನ್ಯ ಮತ್ತು ಅನ್ಯಾಯಗಳ ವಿರುದ್ಧದ ತಮ್ಮ ಬರವಣಿಗೆಗಳ ಮೂಲಕ ಅವರು ಆ ಜನರಲ್ಲಿ ಸ್ಫೂರ್ತಿ ತುಂಬಬೇಕು.

ಆದರೆ, ಇಂದು ಅಂತಹ ಉತ್ತಮ ಕಲೆ ಮತ್ತು ಸಾಹಿತ್ಯ ದುರ್ಲಭ. ಇಂದಿನ ಪ್ರೇಮಚಂದ್ ಅಥವಾ ಶರತ್ ಚಂದ್ರ ಅಥವಾ ಫೈಜ್ ಎಲ್ಲಿದ್ದಾರೆ? ಇಂದಿನ ಕಬೀರ ಅಥವಾ ಚಾರ್ಲ್ಸ್ ಡಿಕನ್ಸ್ ಎಲ್ಲಡಗಿದ್ದಾರೆ? ಕಲಾತ್ಮಕ ಮತ್ತು ಸಾಹಿತ್ಯಿಕ ಶೂನ್ಯತೆ ಇದೆಯೇನೋ ಅನ್ನಿಸುತ್ತಿದೆ. ಪ್ರತಿಯೊಂದೂ ವ್ಯಾಪಾರೀಕರಣಗೊಳ್ಳುತ್ತಿದೆಯೇನೋ ಎನ್ನುವ ಭಾವನೆ ಬರುತ್ತಿದೆ. ಜನಸಮುದಾಯದ ದೀನಾವಸ್ಥೆಯ ಕುರಿತು ಬರೆಯದ ಲೇಖಕರು ಹಣ ಗಳಿಸುವ ಸಲುವಾಗಿ ಬರೆಯುತ್ತಿದ್ದಾರೆ.

ಹಿಂದಿ ಪತ್ರಿಕೆಗಳು ಮುಚ್ಚಿಹೋಗುತ್ತಿವೆ ಎಂದು ಕೆಲವು ಹಿಂದಿ ಬರಹಗಾರರು ದೂರುತ್ತಿದ್ದಾರೆ. ಏತಕ್ಕೆ ಹೀಗಾಗುತ್ತಿದೆ ಎಂಬುದನ್ನು ಈ ಜನ ಎಂದಾದರೂ ಯೋಚಿಸಿದ್ದಾರಾ? ನಿಜ ಹೇಳಬೇಕೆಂದರೆ ಇವರು ಬರೆಯುವುದನ್ನು ಓದಲು ಯಾರಿಗೂ ಆಸಕ್ತಿ ಇಲ್ಲ, ಏಕೆಂದರೆ ಇವರು ಜನರ ಸಮಸ್ಯೆಗಳ ಬಗ್ಗೆ ಬರೆಯುತ್ತಿಲ್ಲ, ಮತ್ತು ಉತ್ತಮ ಬದುಕಿಗಾಗಿ ಹೋರಾಡಲು ಅವರಲ್ಲಿ ಸ್ಫೂರ್ತಿ ತುಂಬುವ ಕೆಲಸ ಮಾಡುತ್ತಿಲ್ಲ.

ಮ್ಯಾಕ್ಸಿಮ್ ಗಾರ್ಕಿ ರಶಿಯಾದ ಬೀದಿಗಿಳಿದಾಗ ಅವನನ್ನು ಜನರು ಮುತ್ತಿಕೊಳ್ಳುತ್ತಿದ್ದರು. ಅವನು ಅವರ ಬದುಕಿನ ಬಗ್ಗೆ ಬರೆಯುತ್ತಿದ್ದ ಮತ್ತು ಅವರ ಸಮಸ್ಯೆಗಳ ಪರಿಹಾರಕ್ಕಾಗಿ ಶ್ರಮಿಸುತ್ತಿದ್ದ, ಆದ್ದರಿಂದಲೇ ಜನ ಅವನನ್ನು ಆ ಪರಿಯಾಗಿ ಪ್ರೀತಿಸುತ್ತಿದ್ದರು. ಇವತ್ತಿನ ಯಾವನಾದರೂ ಹಿಂದಿ ಬರಹಗಾರ ಈ ರೀತಿಯಾಗಿ ಹೇಳಿಕೊಳ್ಳಲು ಸಾಧ್ಯವೆ? ಯಾವಾಗ ಬರಹಗಾರರು ಜನರಿಂದ ದೂರವಾಗುತ್ತಾರೆ ಮತ್ತು ತಮ್ಮದೇ ಆದ ಒಂದು ಲೋಕದಲ್ಲಿ ಬದುಕುತ್ತಾರೆ, ಆಗ ಯಾರೂ ಅವರ ಕೃತಿಗಳನ್ನು ಓದಲು ಬಯಸುವುದಿಲ್ಲ.

ಇಂದು ಭಾರತದ ಜನ ಉತ್ತಮ ಸಾಹಿತ್ಯಕ್ಕಾಗಿ ತಹತಹಿಸುತ್ತಿದ್ದಾರೆ. ಯಾರಾದರೂ ಜನರ ಸಮಸ್ಯೆಗಳ ಕುರಿತು ಬರೆದರೆ, ಅದು ಜನಪ್ರಿಯವಾಗುತ್ತದೆ. ಆದರೆ ನಮ್ಮ ಲೇಖಕರು ಹೀಗೆ ಮಾಡುತ್ತಿದ್ದಾರೆಯೇ? ಕಲೆ ಮತ್ತು ಸಾಹಿತ್ಯ ಜನರ ಸೇವೆಗೆ ಸಿದ್ಧವಾಗಬೇಕು. ಬರಹಗಾರರು ಜನರ ಬಗ್ಗೆ ನಿಜವಾದ ಅನುಕಂಪ ಹೊಂದಿರಬೇಕು ಮತ್ತು ಅವರ ನೋವು ನಲಿವುಗಳ ಬಗ್ಗೆ ಬರೆಯಬೇಕು. ಅನ್ಯಾಯರಹಿತ ಸಾಮಾಜಿಕ ಹಾಗೂ ಆರ್ಥಿಕ ಹೊಸ ಜಗತ್ತನ್ನು ಸೃಷ್ಟಿಸಲು ಮತ್ತು ಎಲ್ಲಿ ಬದುಕು ನಿಜವಾಗಿಯೂ ಮನುಷ್ಯರ ಅಸ್ತಿತ್ವಕ್ಕೆ ಅನುಕೂಲವಾಗಿರುತ್ತದೋ, ಅಂತಹ ಉತ್ತಮ ಜೀವನಕ್ಕಾಗಿ ಹೋರಾಡಲು ಅವರನ್ನು ಪ್ರೇರೇಪಿಸುವಂತೆ ಸಾಹಿತ್ಯವನ್ನು ಅವರು ಬರೆಯುವಂತಾಗಬೇಕು. ಆಗ ಮಾತ್ರವೇ ಜನ ಅವರನ್ನು ಗೌರವಿಸುತ್ತಾರೆ.

ಸಾಮಾಜಿಕ ಸುಧಾರಣೆಗಾಗಿ ಕಲೆ ಮತ್ತು ಸಾಹಿತ್ಯವನ್ನು ಬಳಸುವ ಕಲ್ಪನೆ ಬಂದದ್ದೇ ಇತ್ತೀಚೆಗೆ. ಕೈಗಾರಿಕಾ ಕ್ರಾಂತಿಗೂ ಮುಂಚೆ ಅದರ ಸಾಧ್ಯತೆ ಕಡಿಮೆ ಇತ್ತು, ಪಾಳೇಗಾರಿ ವ್ಯವಸ್ಥೆಯ ತನಕ ತನ್ನ ಸಾಮಾಜಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳಲು ಅಥವಾ ಬದಲಾಯಿಸಲು ತನ್ನ ಪ್ರಯತ್ನಗಳಿಂದಲೇ ಸಾಧ್ಯ ಎನ್ನುವ ಕಲ್ಪನೆಯೇ ಮನುಷ್ಯನಿಗೆ ಇರಲಿಲ್ಲ. ಏನು ಅಸ್ತಿತ್ವದಲ್ಲಿದೆ ಮತ್ತು ಮುಂದೆ ಏನಾಗುತ್ತದೆ ಎನ್ನುವುದು ದೇವರ ಅಥವಾ ವಿಧಿಯ ತೀರ್ಮಾನ ಹಾಗೂ ಅಲ್ಲಿ ಮನುಷ್ಯನ ಪಾತ್ರವೇನೂ ಇಲ್ಲ ಎಂದು ನಂಬಲಾಗುತ್ತಿತ್ತು. ಈಗ ವಿಜ್ಞಾನ ಯುಗ ಉದಯವಾದಮೇಲೆ ಮನುಷ್ಯರ ಪ್ರಯತ್ನದಿಂದ ಸಾಮಾಜಿಕ ಪರಿಸ್ಥಿತಿಯನ್ನು ಬದಲಿಸಲು ಸಾಧ್ಯ ಎಂದಾದ ಮೇಲೆ, ಕಲೆ ಕೂಡ ಆ ಪ್ರಯತ್ನದಲ್ಲಿ ತನ್ನ ಕೈಗೂಡಿಸಬೇಕು. ಭಾರತದಂತಹ ಬಡ ದೇಶದಲ್ಲಿ ಕಲೆಗಾಗಿ ಕಲೆ ಪಲಾಯನವಾದವಾಗುತ್ತದೆ. ಹಿಂದಿ, ಉರ್ದು ಮತ್ತು ಇತರ ಭಾರತೀಯ ಭಾಷೆಗಳ ಬರಹಗಾರರು ಸರಳ ಭಾಷೆಯನ್ನು ಬಳಸಬೇಕು. ಹಿಂದಿ ಮತ್ತು ಉರ್ದು ಎರಡು ಭಾಷೆಗಳೂ ಖರಿಬೋಲಿ(ಹಿಂದೂಸ್ತಾನಿ)ಗೆ ಹತ್ತಿರವಾಗಬೇಕು, ಏಕೆಂದರೆ ಅದು ಜನಭಾಷೆ. ಕೆಲವು ಹಿಂದಿ ಪುಸ್ತಕಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟ, ಏಕೆಂದರೆ ಅದರಲ್ಲಿ ಕ್ಲಿಷ್ಟ ಭಾಷೆಯನ್ನು ಬಳಸಲಾಗಿದೆ. ಇದೇ ಪರಿಸ್ಥಿತಿ ಉರ್ದುವಿನಲ್ಲೂ ಇದೆ. ಬರೆದಿರುವುದನ್ನು ಗ್ರಹಿಸಲು ಸಾಧ್ಯವಾಗದಿದ್ದರೆ ಅಂತಹ ಸಾಹಿತ್ಯದ ಪ್ರಯೋಜನವಾದರೂ ಏನು? ವಿನ್‌ಸ್ಟನ್ ಚರ್ಚಿಲ್ಲನ ಯುದ್ಧ ಕಾಲದ ಭಾಷಣಗಳಂತಹ ಅಥವಾ ಪ್ರೇಮ್‌ಚಂದ್ ಹಾಗೂ ಶರತ್ ಚಂದ್ರರ ಕತೆಗಳಂತಹ ಶ್ರೇಷ್ಠ ಸಾಹಿತ್ಯವು ಸರಳ ಭಾಷೆಯಲ್ಲಿರುತ್ತವೆ. ○

ಇದ್ದದ್ದು ಇದ್ದಾಂಗ...

ಹೊಸ ಕಾನೂನಿಗೆ ಮೊದಲು ಒಮ್ಮೆ ಪೋಲೀಸರತ್ತ ನೋಡಿ

"ಜಂಟಿ ಅಧಿವೇಶನದ ಮೂಲಕ ಪೋಟೋಗೆ ಅಂಗೀಕಾರ ಪಡೆದು ಕಾಯಿದೆಯನ್ನಾಗಿ ಜಾರಿಗೆ ದ ನಂತರವಾದರೂ ಭಯೋತ್ಪಾದಕರ ಕೃತ್ಯಗಳು ನಿಂತುಹೋದವೇ? ಗುಜರಾತ್‌ನ ಅಕ್ಷರಧಾಮ, ಮ್ಮುವಿನ ರಘುನಾಥ ಮಂದಿರ ಹಾಗೂ ಮುಂಬೈನ ಘಾಟ ಕೋಪರ್ ಗೇಟ್‌ವೇ ಆಫ್ ಇಂಡಿಯಾ ಳುಂದ್‌ಗಳಲ್ಲಿ ಯಥಾಪ್ರಕಾರ ಅದು ಮುಂದುವರಿಯಿತು. ಜನತೆ ಕೇಳಿ ಬೆಚ್ಚಿಬೀಳುವಂತಹ ಒಬ್ಬನೇ ಬ್ಬ ಭಯೋತ್ಪಾದಕನ ಬಂಧನವೂ ಪೋಟಾದಡಿ ನಡೆಯಲಿಲ್ಲ. ಲಂಡನ್‌ನ ಹೌಸ್ ಆಫ್ ಕಾಮನ್ಸ್‌ನ ೀಲಿನ ಉದ್ದೇಶಿತ ಅಲ್‌ಖೈದಾ ದಾಳಿಯ ತಂಡದ ಸದಸ್ಯನೆಂದು ಶಂಕಿಸಿ ಮುಂಬೈನ ಮಹಮ್ಮದ್ ಪ್ರೋಜ್‌ನನ್ನು ಪೋಟಾದಡಿ ಬಂಧಿಸಲಾಯಿತು. ಮುಂಬೈನ ಪಿಲೀಸ್ ಆಯುಕ್ತ ಎಂ.ಎನ್.ಸಿಂಗ್ ವರೇ ಸಾಕ್ಷ್ಯ ಸಂಗ್ರಹಕ್ಕಾಗಿ ಬ್ರಿಟನ್, ಆಸ್ಟ್ರೇಲಿಯಾ ಮತ್ತು ಅಮೇರಿಕಾಗಳಿಗೆ ಭೇಟಿ ನೀಡಿದ್ದರು. ಕೊನೆಗೂ ಕ್ಷ್ಯಾಧಾರಗಳ ಕೊರತೆಯಿಂದಾಗಿ ಆರು ತಿಂಗಳ ನಂತರ ಅಪ್ರೋಜ್‌ನ ಮೇಲಿನ ಪೋಟಾ ಆರೋಪ ಟ್ಟಿಯನ್ನು ಹಿಂದಕ್ಕೆ ಪಡೆಯಲಾಯಿತು. ಕೊನೆಗೂ ಪೋಟಾವನ್ನು ಯಶಸ್ವಿಯಾಗಿ ಬಳಸಿಕೊಂಡವರು ಡಿನ ರಾಜಕಾರಣಕ್ಕೆ ಹೆಸರಾದ ಇಬ್ಬರು ಮಹಿಳಾ ನಾಯಕಿಯರು. ತಮಿಳುನಾಡು ಮುಖ್ಯಮಂತ್ರಿ ಯಲಲಿತಾ ಎಂಡಿಎಂಕೆ ನಾಯಕ ಮೈಕೋ ಅವರನ್ನು ಮತ್ತು ಉತ್ತರಪ್ರದೇಶದ ಮುಖ್ಯಮಂತ್ರಿ ಾಯಾವತಿ ಕುಂಡಾದ ಗೂಂಡಾ ರಾಜಾ ಭಯ್ಯಾನನ್ನು ಜೈಲಿಗೆ ತಳ್ಳಿದರು."

ದಿನೇಶ್ ಅಮೀನಮಟ್ಟು ತಮ್ಮ ಅಂಕಣದಲ್ಲಿ

★

ಪರ್ಯಾಯಕ್ಕೆ ಹುಡುಕಾಟ

"ಕಳೆದ ಎರಡು ದಶಕಗಳ ಹಿಂದೆ ಎದ್ದ ಬಂಡವಾಳಶಾಹಿ ವ್ಯವಸ್ಥೆಯ ಮುಕ್ತ ಆರ್ಥಿಕ ನೀತಿಗಳ ಅಲೆ ಮ್ಯುನಿಸ್ಟ್ ವಿಶ್ವದಪತನಕ್ಕೆ ಕಾರಣವಾಯಿತು. ಸಮಾಜವಾದಿ ವ್ಯವಸ್ಥೆಯಿಂದ ಮುಕ್ತ ಆರ್ಥಿಕ ನೀತಿಗಳಿಂದ ಾತ್ರ ಅದು ಸಾಧ್ಯವೆಂಬ ವಾದ ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ ನೆಲೆ ಕಂಡುಕೊಂಡಿತು. ಆದರೆ ಸಮಾಜವಾದಿ ದ್ಧಾಂತಕ್ಕೆ ಪರ್ಯಾಯ ಎಂದು ಬಿಂಬಿಸಲಾದ ಬಂಡವಾಳಶಾಹಿ ಮಾರುಕಟ್ಟೆ ವ್ಯವಸ್ಥೆಯೂ ಇದೀಗ ಫಲಗೊಂಡು ಅಮೇರಿಕ ಸೇರಿದಂತೆ ಆ ವ್ಯವಸ್ಥೆಯ ಪ್ರತಿಪಾದಕ ದೇಶಗಳು ಆಘಾತಕ್ಕೆ ಒಳಗಾಗಿವೆ.

ಬಿಕ್ಕಟ್ಟನ್ನು ನಿಭಾಯಿಸಲು ಕಮ್ಯೂನಿಸ್ಟ್ ವ್ಯವಸ್ಥೆಯ ಸಮಾಜವಾದಿ ಮಾದರಿಯನ್ನು ಆಯ್ಕೆ ಾಡಿಕೊಳ್ಳಬೇಕಾಗಿ ಬಂದದ್ದು ಒಂದು ವಿಪರ್ಯಾಸ. ಬಂಡವಾಳಶಾಹಿ ವ್ಯವಸ್ಥೆಯ ದೊಡ್ಡ ಮಾದರಿ ಷ್ಟವಾಗಿದ್ದ ಅಮೇರಿಕದಲ್ಲಿ ಬೃಹತ್ ಬಂಡವಾಳ ಹೂಡಿಕೆ ಸಂಸ್ಥೆಗಳು ತರಗೆಲೆಗಳಂತೆ ದುರಿಹೋಗುತ್ತಿರುವ ಹಿನ್ನೆಲೆಯಲ್ಲಿ ಅವುಗಳನ್ನು ರಕ್ಷಿಸಲು ಅಮೇರಿಕ ಸರ್ಕಾರ ಮುಂದೆ ಹೆಜ್ಜೆ ಇಟ್ಟಿದೆ. ಕ್ಕಟ್ಟಿನಿಂದ ಪಾರು ಮಾಡಲು ಸಾಮಾನ್ಯ ತೆರಿಗೆದಾರರ ಹಣವನ್ನು ಭಾರೀ ಪ್ರಮಾಣದಲ್ಲಿ ಈ ಸಂಸ್ಥೆಗಳಿಗೆ ಡಬೇಕಾಗಿ ಬಂದಿದೆ."

'ಪ್ರಜಾವಾಣಿ' ಸಂಪಾದಕೀಯದಿಂದ

★

'ಪೂರ್ಣಚಂದ್ರ ತೇಜಸ್ವಿ ಅವರಿಗಿದ್ದ ಹುಮ್ಮಸ್ಸು, ಸಮಾಜವಾದದ ಕಲ್ಪನೆ, ಸೂಕ್ಷ್ಮತೆ, ಮೇಲ್ನೋಟಕ್ಕೆ ಮಿಕ್ ಆಗಿ ಕಾಣುತ್ತಿದ್ದರೂ ಅವರ ಎಲ್ಲಾ ಬರಹದ ಅಂತರ್ಯದಲ್ಲಿದ್ದ ವ್ಯಾಗ್ರತೆ ವಿಶಿಷ್ಟವಾದವು. ಂತಹ 'ಸ್ಪಿರಿಟ್' ನಮಗೆಲ್ಲರಿಗೂ ಬೇಕಾಗಿದೆ. ಬಹಳಷ್ಟು ಲೇಖಕರು ನಗರಕ್ಕೆ ಬಂದು ಹಳ್ಳಿಗಳ ಬಗ್ಗೆ ರೆಯುತ್ತಾರೆ. ಆದರೆ ತೇಜಸ್ವಿ ನಮ್ಮ ಕನ್ನಡ ಕಾದಂಬರಿಗಳ ನಾಯಕನಂತೆ ವಾಪಸ್ಸು ಹಳ್ಳಿಗೆ ಹೋಗಿ ಾರೂ ಕಾಣದ ಲೋಕವನ್ನು ತೆರೆದಿಟ್ಟರು. ವಿಶಿಷ್ಟ ಲೇಖಕರಾದರು'

ಡಾ: ನಟರಾಜ್ ಹುಳಿಯಾರ್

'ಪೂರ್ಣಚಂದ್ರ ತೇಜಸ್ವಿ 70' ಕಾರ್ಯಕ್ರಮದಲ್ಲಿ

★

ಅಣು ಒಪ್ಪಂದ : ಒಳಗೇನಿದೆ?

'...ಒಳಗೇನಿದೆ ಎಂಬುದನ್ನು ಊಹಿಸಿಯೇ ಅನೇಕರು ಕಂಗಾಲಾಗುತ್ತಿದ್ದಾರೆ. ಪತ್ರಿಕೆಗಳ ಒಳಪುಟಗಳಲ್ಲಿ ಣು ಒಪ್ಪಂದ ಕುರಿತ ಗಂಭೀರ ಅಪಸ್ವರಗಳು ಕೇಳಿಬರುತ್ತಿವೆ. ಅಣು ವಿದ್ಯುತ್ ತೀರ ದುಬಾರಿ.... ದ 30 ವರ್ಷಗಳಲ್ಲಿ ತಾನಾಗಿ ಒಂದೇ ಒಂದು ಪರಮಾಣು ವಿದ್ಯುತ್ ಘಟಕವನ್ನೂ ಸ್ಥಾಪಿಸದ ಮೇರಿಕ, ನಮಗೆ ನೆರವು ನೀಡಲು ಏನೆಲ್ಲ ಸಹಕಾರ ತೋರಿದೆ. ನಮಗೆ ಇತ್ತ ಇರಾನಿನ ನೈಸರ್ಗಿಕ ಅನಿಲವೂ ಸಿಗದ ಹಾಗೆ ಮಾಡಿ, ಅತ್ತ ಮಯನ್ಮಾರ್‌ನ ಪೆಟ್ರೋಲಿಯಂ ನಿಕ್ಷೇಪಗಳು ಮರೀಚಿಕೆ ಆಗುವಂತೆ ಾಡಿ, ನ್ಯೂಕ್ಲಿಯರ್ ಖೆಡ್ಡಾದತ್ತ ನಮ್ಮನ್ನು ಒಯ್ದಿದೆ. ಕುಂಟುತ್ತ ಸಾಗಿರುವ ನಮ್ಮ ಹಳೇ 13 ಸ್ಥಾವರಗಳಿಗೆ ಂಧನ ಕೊಡಿಸುತ್ತೇನೆಂದು ಹೇಳಿ, ಒಟ್ಟೊಟ್ಟಿಗೆ 24 ಹೊಸ ಪರಮಾಣು ಸ್ಥಾವರಗಳು ತಲೆ ಎತ್ತುವತ್ತ ಸುಮಾರು 40 ಸಾವಿರ ಕೋಟಿ ರೂಪಾಯಿಗಳ ಸಾಲದ ವ್ಯವಸ್ಥೆಯ ಭರವಸೆ ನೀಡಿದೆ. ಆ ಹಣದ ಬಹು ಾಗವೆಲ್ಲ ತಾಂತ್ರಿಕ ನೆರವು ನೀಡುವ ವಿದೇಶಿ ಕಂಪನಿಗಳಿಗೆ ಹೋಗುತ್ತದೆ. ಆ ಮಾತು ಬೇರೆ. ಇಷ್ಟೆಲ್ಲ ಾಡಿ ನಮ್ಮೊಂದಿಗೆ ಕೈ ಕುಲುಕುವ ನೆಪದಲ್ಲಿ ನಮ್ಮ ಅಣ್ವಸ್ತ್ರ ತಯಾರಿಸುವ ಸಾಮರ್ಥ್ಯವನ್ನೇ ಕಸಿದಿದೆ. ವು ಅದನ್ನು ಧಿಕ್ಕರಿಸಿ ಅಣ್ವಸ್ತ್ರ ತಯಾರಿಸಲು ಹೋದರೆ, ನಮ್ಮ ಹೊಸ ಸ್ಥಾವರಗಳಿಗೆ ಇಂಧನವೇ ಸಿಗದ ಾಗೆ ಪರಮಾಣು ಇಂಧನ ಪೂರೈಕೆ ದೇಶಗಳ ಮೇಲೆ ನಿಯಂತ್ರಣ ಇಟ್ಟುಕೊಂಡಿದೆ. 'ಅಣ್ವಸ್ತ್ರವೇ ಏಕೆ ಕು, ನಾವು ಶಸ್ತ್ರಾಸ್ತ್ರ ನೀಡುತ್ತೇವೆ' ಎಂದು ಹೇಳಿ ಪಾಕಿಸ್ತಾನಕ್ಕೆ ಧರ್ಮಾರ್ಥ ಕೊಟ್ಟಿದ್ದನ್ನೇ ನಮಗೆ ಉದಾರವಾಗಿ ಮಾರಲು ಮುಂದೆ ಬಂದಿದೆ....?

- ನಾಗೇಶ ಹೆಗಡೆ, ಪ್ರಜಾವಾಣಿ ಲೇಖನದಲ್ಲಿ

ಚುಚ್ಚುಮದ್ದು

ನೆಮ್ಮದಿ ಬೇಕೆ?

■ "ಬಡತನಕ್ಕೆ ಮಾತ್ರವೇ ಸುಖದ ಬೆಲೆ ಗೊತ್ತಿರುತ್ತದೆ. ಐಶ್ವರ್ಯ ಹೆಚ್ಚಿದಷ್ಟು ನೆಮ್ಮದಿ ಹಾಳಾಗುತ್ತದೆ"

ಮತ್ತೂರು ಕೃಷ್ಣಮೂರ್ತಿ

★

ರಾಷ್ಟ್ರ ಗ್ರಂಥವಾಗಬೇಕು

■ "ಜೀವನದ ಉನ್ನತ ಮೌಲ್ಯಗಳನ್ನು ಮತ್ತು ಸಾರವನ್ನು ತಿಳಿಸುವ ಭಗವದ್ಗೀತೆ ರಾಷ್ಟ್ರೀಯ ಗ್ರಂಥವಾಗಬೇಕು."

ರಾಮಚಂದ್ರ ಗೌಡ ರಾಜ್ಯ ವೈದ್ಯಕೀಯ ಶಿಕ್ಷಣ ಸಚಿವ

▶ ಈ ಮೇಲಿನ ಎರಡೂ ಹೇಳಿಕೆಗಳಿಗೂ ಏನೋ ಒಂಥರಾ ಸಂಬಂಧ ಇದ್ದ ಹಾಗಿದೆಯಲ್ಲ.

★

'ಧರ್ಮ ಪ್ರಚಾರಕರು

■ "ಚರ್ಚ್‌ಗಳ ಮೇಲಿನ ದಾಳಿಗೆ 'ನ್ಯೂಲೈಫ್' ಸಂಸ್ಥೆಯ ಮಹಾ ಪೋಷಕರಾದ ಸಂಸದ ಎಚ್.ಟಿ ಸಾಂಗ್ಲಿಯಾನ ಮತ್ತು ಅದರ ಅಧ್ಯಕ್ಷ ವಿ.ಎಂ.ಸಾಮ್ಯುಯಲ್ ಕಾರಣ. ಕೂಡಲೇ ಅವರನ್ನು ಬಂಧಿಸಬೇಕು. ಎಲ್ಲ ವರ್ಗದ ಜನರ ಏಳಿಗೆಗಾಗಿ ಶ್ರಮಿಸಬೇಕಾದ ಸಾಂಗ್ಲಿಯಾನರವರು ಕೇವಲ ಒಂದು ಧರ್ಮದ ಪ್ರಚಾರಕರಂತೆ ವರ್ತಿಸುತ್ತಿರುವುದನ್ನು ಖಂಡಿಸುತ್ತೇವೆ"

-ಮೂವರು ಬಿಜೆಪಿ ಶಾಸಕರು

▶ ಸಾಂಗ್ಲಿಯಾನರವರು ಬಿಜೆಪಿ ಕೊಟ್ಟ ತುತ್ತೂರಿ ಊದುತ್ತಿರುವವರೆಗೆ ಪಾಪ ಇದೆಲ್ಲಾ ಕಾಣಲಿಲ್ಲ . ಅಲ್ಲವೇ?

★

'ಆತ್ಮವಿಶ್ವಾಸ' ಸಾಕು

■ "ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಗೆಲುವಿನ ಬಗ್ಗೆ ಅತಿಯಾದ ವಿಶ್ವಾಸ ಬೇಡ. ಆತ್ಮವಿಶ್ವಾಸವಿರಲಿ. ಪಕ್ಷದ ಗೆಲುವಿಗೆ ಒಗ್ಗಟ್ಟಿನಿಂದ ದುಡಿಯಿರಿ"

ಎಲ್.ಕೆ.ಅಡ್ವಾಣಿ, ಬಿಜೆಪಿ ಮುಖಂಡ

▶ ಕಳೆದ ಚುನಾವಣೆಯ ಪಾಠ ಸ್ವಲ್ಪ ನೆನಪಲ್ಲಿದೆ. ಪರವಾಗಿಲ್ಲ, ಭೇಷ್

ಕಾಂಗ್ರೆಸ್‌ನ ಹಾದಿಯೇನು?......

ಪುಟ 3 ರಿಂದ

ಮೀರಿದ್ದು ಅಗತ್ಯವೇ?... ಇವೆಲ್ಲದಕ್ಕೇ ನೇಮಿತ ಹೊಸ ನಾಯಕತ್ವ ಉತ್ತರಿಸಬೇಕು, ಅಥವಾ ಕಾರ್ಯವೆಸಗಬೇಕು. ಇಂತಹ ಕಠಿಣ ಸವಾಲನ್ನು ಕಾಂಗ್ರೆಸ್ ಕೈಗೆತ್ತಿಕೊಳ್ಳುವುದೇ ಎಂಬುದು ಪ್ರಶ್ನೆ!

ಆದರೆ ಕಾಂಗ್ರೆಸ್ ನಾಯಕರ ನಡೆ ನುಡಿಗಳು ಇನ್ನೂ ಇಂತಹ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರವನ್ನು ನೀಡಿಲ್ಲ. ಬದಲಾಗಿ ನುಡಿ-ನಡೆಗಳು ಆಂತಕವನ್ನು ಹುಟ್ಟಿಸುವಂತಿದೆ.

ಚಿಡ್ಡಿಗಳ ಕಾಲಿಗೆ

ಮೊನ್ನೆ ಆರ್.ವಿ.ದೇಶಪಾಂಡೆಯವರು ಕಾಂಗ್ರೆಸ್ ಅಧ್ಯಕ್ಷರಾದ ಖುಷಿಯನ್ನು ಹಂಚಿಕೊಳ್ಳಲು ಗೋಕರ್ಣದಲ್ಲಿ ಬಿಟ್ಟಿಯಾಗಿ ಸಿಕ್ಕುವ ಕೋಟ್ಯಾಂತರ ಆಸ್ತಿ ಹಾಗೂ ದೇವಸ್ಥಾನವನ್ನು ನುಂಗಿ ಜೀರ್ಣಸಿಕೊಳ್ಳಲು ಠಿಕಾಣಿಹೂಡಿರುವ ರಾಮಚಂದ್ರಪುರ ಮಠದ ರಾಘವಭಾರತಿ ಸ್ವಾಮಿಯವರನ್ನು ಭೇಟಿ ಮಾಡಲು ಧಾವಿಸಿದ್ದರು. ಸ್ವಾಮಿಗಳ ಕಾಲಿಗೆ ಬಿದ್ದು ಪ್ರಥಮಾಶೀರ್ವಾದವನ್ನು ಬೇಡಿದರು. ಕಾಂಗ್ರೆಸ್ ನಂತಹ ಒಂದು ದೊಡ್ಡ ರಾಜಕೀಯ ಸಂಸ್ಥೆಯ ಮುಖ್ಯಸ್ಥನೇ ತಮ್ಮ ಕಾಲು ಹಿಡಿದಿದ್ದನ್ನು ಕಂಡು ಖುಷಿಗೊಂಡ ಸ್ವಾಮಿ ಶಾಲುಹೊದಿಸಿ ಸನ್ಮಾನಿಸಿ ಆಶೀರ್ವಾದದ ಸಂದೇಶ ನೀಡಿ, ಮೈದಡವಿದರು. ಇದೇ ಸಂದರ್ಭದಲ್ಲಿ ಮಾತನಾಡಿದ ದೇಶಪಾಂಡೆಯೆಂಬ ದಂಡ ನಾಯಕ 'ರಾಮಚಂದ್ರಪುರ ಮಠಕ್ಕೆ ಗೋಕರ್ಣ ದೇವಸ್ಥಾನ ಹಾಗೂ ಆಸ್ತಿಯನ್ನು ನೀಡಿದ ರಾಜ್ಯ ಸರ್ಕಾರದ ಕ್ರಮವನ್ನು ಸ್ವಾಗತಿಸಿ-ಸಮರ್ಥಿಸಿಕೊಂಡರು! ಇದು ಕಾನೂನುಬಾಹಿರ ಅಕ್ರಮ ನಿರ್ಧಾರವೆಂಬುದು ದೇಶಪಾಂಡೆಯಂತಹ ನಾಯಕರಿಗೆ ತಿಳಿಯದ ವಿಷಯವೇನಲ್ಲ. 'ಈ ಹಿಂದೆಯೇ ಕಾಂಗ್ರೆಸ್‌ಪಕ್ಷ, ಮಲ್ಲಿಕಾರ್ಜುನ ಖರ್ಗೆ(ಹಿಂದಿನ ಅಧ್ಯಕ್ಷ) ದೇವಸ್ಥಾನದ ನೀಡಿಕೆಯನ್ನು ಖಡಾಖಂಡಿತವಾಗಿ ವಿರೋಧಿಸಿದ್ದರು. ಆರ್.ಎಸ್.ಎಸ್.ನ ಕಟ್ಟಾ ಸ್ವಯಂಸೇವಕನೂ ಉಗ್ರ ಹಿಂದುತ್ವದ ಪ್ರತಿಪಾದಕನೂ, ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಕೆಂಡಕಾರುವ ಕಡು ಕೋಮುವಾದಿಯೂ, ಆಗಿರುವ ರಾಮಚಂದ್ರಪುರದ ಮಠದ ಸ್ವಾಮಿಗೆ ಶರಣಾಗಿ ಹೀಗೆ ಮಾತನಾಡಿದ ದೇಶಪಾಂಡೆಯ ವರ್ತನೆ, ನಿಲುವು ದಂಗುಬಡಿಸುವಂತಹದ್ದು. ಅಂದರೆ ಅಧ್ಯಕ್ಷನಾಗಿ ನೇಮಕವಾದ ಕೂಡಲೇ ಕಾಂಗ್ರೆಸ್‌ನ ನಿಲುವು ಪೂರ್ಣ ತಲೆಕೆಳಗಾಯಿತೆ? ಇದನ್ನು ವೈಯಕ್ತಿಕವೆಂದು ಹೇಳಲಾಗುವುದಾದರೂ ಹೇಗೆ? ಅಂತರಂಗವೂ-ಬಹಿರಂವೂ ಒಂದಾಗಿ ಕೋಮುವಾದವನ್ನು ಹಿಮ್ಮೆಟ್ಟಿಸಲು ಸಮರ ಸಾರಬೇಕಿಂದಿದ್ದರೆ ಹಾಗೆಲ್ಲಾ ದ್ವಿಮುಖದ ಮಾತುಗಳನ್ನು ಆಡಲಾದೀತೇ?

ರಾಜ್ಯದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರು ಆತಂಕದಿಂದ ನರಳುತ್ತಿರುವಾಗ, ಸಂಘ ಪರಿವಾರ ಭಯೋತ್ಪಾದನಾ, ಕೃತ್ಯಗಳು ಭಯೋತ್ಪಾದನೆ ಬೆದರಿಕೆಯನ್ನು ಹೆಚ್ಚಿಸುತ್ತಿರುವಾಗ ದೇಶಪಾಂಡೆ ನಿಲುವಿನ ಅರ್ಥವೇನು? ಕಾಂಗ್ರೆಸ್ ತನ್ನ ನೀತಿಯನ್ನು ಬದಲಾಯಿಸಿಕೊಂಡಿದೆಯೇ ಎಂಬ ಬಗ್ಗೆ ಜನತೆಗೆ ಸ್ಪಷ್ಟನೆ ನೀಡಬೇಕು. ಇಲ್ಲವೆಂದರೆ ಹಾರ್ಡ್ ಹಿಂದುತ್ವ (ಕಠೋರ) ಕ್ಕೆ ಬದಲಾಗಿ ಸಾಫ್ಟ್ (ನಯಗಾರಿಕೆಯ) ಹಿಂದುತ್ವವನ್ನು ಕಾಂಗ್ರೆಸ್ ನೆಚ್ಚಿಕೊಂಡಿದೆಯೇ ಎಂಬುದನ್ನು ಬಹಿರಂಗ ಸ್ಪಷ್ಟನೆ ನೀಡಬೇಕು. ಜನತೆಯ ಪಾಲಿಗೆ ಕಾಂಗ್ರೆಸ್‌ನ 'ಬೆಂಡೋ, ಗುಂಡೋ' ಎಂಬುದನ್ನು ಈ ಪ್ರಸಂಗ ಹಾಗೂ ಮುಂದಿನ ಹೆಜ್ಜೆಗಳು ಸ್ಪಷ್ಟಗೊಳಿಸುತ್ತವೆ. ○

ಕಾಲೇಜೆಂದರೆ ಕಣಕಣದಲ್ಲೂ ಪ್ರೇಮಕಾರಂಜಿ



ನಮ್ಮ ಸಿನಿಮಾಗಳ ಬಹುದೊಡ್ಡ ಪ್ರೇಕ್ಷಕ ಗಣ ವಿದ್ಯಾರ್ಥಿಗಳು. ಹಲವಾರು ಸಾರಿ ಸಿನಿಮಾಗಳ ನಾಯಕ ನಾಯಕಿಯರು ಕತೆಯಲ್ಲಿ ವಿದ್ಯಾರ್ಥಿಗಳೇ ಆಗಿರುತ್ತಾರೆ. ನಿಜ ಜೀವನದಲ್ಲಿ ವಿದ್ಯಾರ್ಥಿಗಳಾಗಿರುವುದೂ ಇದೆ.

ನಮ್ಮ ಸಿನಿಮಾಗಳಲ್ಲಿ ಕಾಣ ಬರುವ ಕಾಲೇಜು ದೃಶ್ಯಗಳು ಕಾಲೇಜಿನ ತರಗತಿಯ ದೃಶ್ಯಗಳ 'ಸೊಬಗನ್ನು' ಸವಿಯುವುದೇ ಒಂದು ಚಂದ.

ಹಲವಾರಿ ಬಾರಿ ಸಿನಿಮಾಗಳಲ್ಲಿ ಅಧ್ಯಾಪಕರು ಪಾಠ ಮಾಡುವ ದೃಶ್ಯ ಇರುತ್ತದೆ. ಅದೇನು ಮಾಯೆಯೋ ಏನೋ? ಒಟ್ಟಾರೆ ಈ ಪಾಠಗಳೆಲ್ಲಾ 'ರೋಮಿಯೋ-ಜ್ಯೂಲಿಯೆಟ್' ಲೈಲಾ-ಮಜ್ನು, ದುಷ್ಯಂತ-ಶಕುಂತಲಾ, ಮಮತಾಜ್-ಶಹಜಹಾನ್, ಹೀಗೆ ಪ್ರೇಮಿಗಳ ಕುರಿತಾದದ್ದೇ ಆಗಿರುತ್ತದೆ.

ಪಾಠ ಮಾಡುವ ಅಧ್ಯಾಪಕ/ಕಿಯರು ಪಾಠ ಮಾಡುತ್ತಾ ಮಾಡುತ್ತಾ ವಿದ್ಯಾರ್ಥಿಗಳನ್ನು 'ಪ್ರೇಮಲೋಕ'ಕ್ಕೆ ಕರೆದುಕೊಂಡು ಹೋಗಿ ಬಿಡುತ್ತಾರೆ. ಪ್ರೇಮಲೋಕದ ಪಾಠ ಇಲ್ಲವಾದರೆ ವಿದ್ಯಾರ್ಥಿಗಳು ಪಾಠ ಮಾಡುವುದಕ್ಕೆ ಬಿಡುವುದಿಲ್ಲ, ನೂರೆಂಟು ತರಲೆ, ಮಾರಿ ಗದ್ದಲ ಮಾಡುತ್ತಾರೆ. ಇದರಲ್ಲಿ ಹೀರೋಗಳೇನು ಹಿಂದೆ ಬೀಳುವುದಿಲ್ಲ.

ಬಹಳ ಸಾರಿ ಇಲ್ಲಿ ಪಾಠ ಮಾಡುವ ಶಿಕ್ಷಕರನ್ನು, ವಿದ್ಯಾರ್ಥಿಗಳು ಬಫೂನ್‌ಗಳಂತೆ ಆಡಿಸುತ್ತಾರೆ. ಅವರು ಕೇಳುವ ಪ್ರಶ್ನೆಗಳಿಗೆ ಪೋಲಿ-ಪೋಲಿ, ತರಲೇ ಉತ್ತರಗಳೇ ವಿದ್ಯಾರ್ಥಿಗಳಲ್ಲಿ ಸಿದ್ಧವಾಗಿರುತ್ತವೆ. ದ್ವಂದ್ವಾರ್ಥ, ಅಶ್ಲೀಲ ಸಂಭಾಷಣೆ ತರಗತಿಗಳಿಗೆ ನುಗ್ಗಿ ಬರುತ್ತದೆ. ಇದನ್ನೆಲ್ಲಾ ಹಾಸ್ಯದ ಹೆಸರಿನಲ್ಲಿ ನಮ್ಮ ಮುಂದೆ ಇಡಲಾಗುತ್ತದೆ.

ಉಮಾಶ್ರೀ ಕನ್ನಡ ಅಧ್ಯಾಪಕಿಯಾಗಿ ನಟಿಸಿರುವ ಒಂದು ಕನ್ನಡ ಚಿತ್ರವೊಂದರಲ್ಲಿ ತರಗತಿಯಲ್ಲಿ ಆಕೆ ವಿದ್ಯಾರ್ಥಿಗಳಿಗೆ ಕೇಳುವ ಪ್ರಶ್ನೆ ಏನೆಂದು ನೋಡಿ. ಕನ್ನಡ ಚಿತ್ರರಂಗದಲ್ಲಿ 'ಡಗಾರ್' ಎಂಬ ಶಬ್ದವನ್ನು ಹೇಳಿದಂತಾಗುತ್ತದೆ. ಆದರೆ ನಮ್ಮ ಕಾಲೇಜುಗಳು ಈ ಸಿನಿಮಾಗಳಲ್ಲಿ ಇರುವಂತೆ ನಿಜವಾಗಿಯೂ ಇರುವುದಾದರೆ ಖಂಡಿತ ಈಗ ಇರುವ ಅರ್ಧಕ್ಕರ್ಧ ಜನ ವಿದ್ಯಾರ್ಥಿಗಳನ್ನು ಪೋಷಕರು ಕಾಲೇಜು ಬಿಡಿಸಿಬಿಡುತ್ತಾರೆ.

ಇಲ್ಲಿ ಹುಡುಗರೆಂದರೆ ಹುಡುಗಿಯ ಒಂದು ನೋಟಕ್ಕಾಗಿ ಒಂದು ನಗುವಿಗಾಗಿ ಮೂಳೆ ನೆನೆದು ಜೊಲ್ಲು ಸುರಿಸುವ ನಾಯಿಯಂತೆ.

ಕಾಲೇಜು ಕ್ಯಾಂಪಸ್‌ನಲ್ಲಿ ಹುಡುಗರಿಗೇನು ಬೇರೆ ಕೆಲಸವೇ ಇಲ್ಲ. ಅವಳಿಗೆ ಹೂವು ಕೊಡುತ್ತೇನೆ, ಇವಳಿಗೆ ಮುತ್ತು ಕೊಡುತ್ತೇನೆಂದು ಚಾಲೆಂಜ್ ಮಾಡುವುದು, ಹುಡುಗಿಯ ಬೆನ್ನು ಬಿದ್ದು ಕಾಡುವುದು ಹೀರೋಗಳ ಅಥವಾ ಅವರ ಪಟಾಲಂಗಳ ನಿತ್ಯ ಕಾಯಕ.

ಪ್ರೀತಿಸಲು ನಿರಾಕರಿಸುವ ಹುಡುಗಿಯರಿಗೆ ಇವರು ಕೊಡುವ ಕಾಟ ನೋಡಿದರೆ ಇವರು ಯಾವ ಕ್ರಿಮಿನಲ್‌ಗಳಿಗೂ ಕಡಿಮೆ ಇಲ್ಲ ಅನಿಸುತ್ತದೆ. ಕಾಲೇಜಿನ ಗೋಡೆಗಳ ಮೇಲೆ ಹೆಸರು ಕೆತ್ತುವುದು, ಕಾಲೇಜು ಕಟ್ಟಡದ ಮೇಲೇರಿ ಹೋಗಿ ಅಲ್ಲಿ ನಿಂತು ನಾಯಕಿ ತನ್ನ ಬಗ್ಗೆ 'ಐ ಲವ್ ಯು' ಅಂತ ಹೇಳದಿದ್ದರೆ ಮೇಲಿಂದ ಬಿದ್ದು ಸಾಯುತ್ತೇನೆಂದು ಮೊದಲು ಬಳಕೆಗೆ ತಂದವರು ಯಾರು? ಅಬ್ಬಬ್ಬ!! ಏನು ಪ್ರಶ್ನೆ. ಏನು ಅಭಿರುಚಿ, ಏನು ಹಾಸ್ಯ.

ತರಗತಿಯಲ್ಲಿ ಅತ್ತ ಪಾಠ ನಡೆಯುತ್ತಿದ್ದರೆ ಇತ್ತ ಹುಡುಗ, ಹುಡುಗಿಯರ ನಡುವೆ ನಡೆಯುವ ಸಂಭಾಷಣೆ, ವಿಚಾರ, ಭಾವನೆ, ವಸ್ತುಗಳ ವಿನಿಮಯದ್ದೇ ಒಂದು ಬೇರೆ ಲೋಕ.

ಕಾಲೇಜು ಕಲಿಯುವ ಹದಿ ವಯಸ್ಸಿನಲ್ಲಿ ಹುಡುಗ-ಹುಡುಗಿಯರ ನಡುವೆ ಪರಸ್ಪರ ಆಕರ್ಷಣೆ, ಸೆಳೆತ, ಪ್ರೇಮ ಭಾವನೆಗಳು ಇರುವುದೇ ಇಲ್ಲ ಅಂದರೆ ಸುಳ್ಳಾಗುತ್ತದೆ. ಹಾಸ್ಯ, ಹರಟೆ, ತುಂಟಾಟಗಳು ನಡೆಯುವುದಿಲ್ಲವೆಂದರೆ ಅದು ತಪ್ಪೇ



ಬೆದರಿಸುವುದು, ಚೂರಿಯಿಂದ ಕೈಕತ್ತರಿಸಿಕೊಂಡು ರಕ್ತ ಸುರಿಸುವುದು ಇತ್ಯಾದಿ. ಮತ್ತೆ ಆಘಾತಕಾರಿಯಾಗಿ ನಾಯಕಿಯು ಇಂತಹ ಬೆದರಿಕೆ, ಬ್ಲಾಕ್ ಮೇಲ್‌ಗೆ ಮಣಿದು 'ಪ್ರೀತಿಸಲು' ಒಪ್ಪುವುದು. ಓಹೋಹೋ ಏನು ಬೋಧನೆ, ಸಿನಿಮಾಗಳ ಮೂಲಕ ವಿದ್ಯಾರ್ಥಿಗಳಿಗೆ!

ಓದು ಮತ್ತು ವಿಚಾರವಂತಿಕೆಯಲ್ಲಿ ಪ್ರತಿಭಾವಂತನಾದವನನ್ನೋ/ಳನ್ನೋ ಉತ್ತಮ ಕ್ರೀಡಾಪಟುವನ್ನೋ, ಅನ್ಯಾಯದ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿವವನನ್ನೋ/ಳನ್ನೋ ಮೆಚ್ಚಿಕೊಂಡು ಆ ಮೂಲಕ ಪ್ರೀತಿ ಪ್ರೇಮದ ಭಾವನೆಗಳು ಬೆಳೆಯುವುದೆಲ್ಲಾ ಯಾವುದೋ ಒಬಿರಾಯನ ಕಾಲದ ಗೊಡ್ಡು ಪುರಾಣ ಎನ್ನುವಂತಾಗಿಬಿಟ್ಟಿದೆ.

ಪ್ರಿನ್ಸಿಪಾಲರಿಗೆ, ಅಧ್ಯಾಪಕರಿಗೆ ಕನಿಷ್ಠ ಗೌರವವನ್ನು ಕೊಡದೆ ಉದ್ಧಟತನ ತೋರುವವನು, 'ಬೋರ್ ಆಗುತ್ತೆ... ಕುಯ್ಯುಬೇಡಿ.... ಕೊರಿಯಬೇಡಿ...' ಎನ್ನುತ್ತಾ ತರಗತಿಯಿಂದ ಎದ್ದು ಆಚೆ ಹೋಗುವವನೇ ಇತ್ತೀಚಿನ ಸಿನಿಮಾಗಳ ಹೀರೋ ಆಗಿ ಆತನೇ ವಿದ್ಯಾರ್ಥಿಗಳ ಪರಮ ಆದರ್ಶ ಎನ್ನುವಂತಹ ಚಿತ್ರಣವನ್ನು ನಮ್ಮ ಸಿನಿಮಾ ಮುಂದಿಡುತ್ತಿರುವುದು ಮಾತ್ರ ನಿಜಕ್ಕೂ ಅಪಾಯಕಾರಿಯಲ್ಲವೇ?

ಕಾಲೇಜಿನ ಕ್ಲಾಸ್ ರೂಂ, ಲೈಬ್ರರಿ, ಕ್ಯಾಂಟೀನ್, ಕಾರಿಡಾರು, ಕಾಂಪೌಂಡ್ ತುಂಬಾ ಎಲ್ಲೆಲ್ಲೂ ಇಷ್ಟೊಂದು ಪ್ರೀತಿ, ಅದೂ ಇಂಥಾ ಪ್ರೀತಿಯ ಹೊಳೆ ಹರೀತಾ ಇದೆ ಅನ್ನೋವಂತ ಚಿತ್ರಣವನ್ನು ನಮ್ಮ ಗ್ರಾಮೀಣ ಪ್ರದೇಶದ ತಂದೆ ತಾಯಿಗಳು, ಕೆಳಸ್ಥರದ, ಅನಕ್ಷರಸ್ಥ, ಅಥವಾ ಕಡಿಮೆ ಶಿಕ್ಷಣ ಪಡೆದ ಬಡ ಪೋಷಕರು ಟಿ.ವಿ.ಗಳಲ್ಲಿ ಸಿನಿಮಾಗಳಲ್ಲಿ ನೋಡಿದರೆ ತಮ್ಮ ಹೆಣ್ಣು ಮಕ್ಕಳನ್ನು ನಿಜವಾಗಿಯೂ ಕಾಲೇಜಿಗೆ ಕಳಿಸುತ್ತಾರೆಯೇ?

ಇಂದಿಗೂ ಪ್ರೌಢಶಾಲೆ ಮುಗಿದ ನಂತರ ಅಥವಾ ಹೈಸ್ಕೂಲು ಓದುತ್ತಿರುವಾಗಲೇ ಶಾಲೆ ಬಿಡಿಸಿ ಬಿಡಬೇಕು, ಕಾಲೇಜಿಗೆ ಹೋದರೆ ಹೆಣ್ಣು ಮಕ್ಕಳು ಕೆಟ್ಟು ಹೋಗುತ್ತಾರೆ ಎಂದು ಭಾವಿಸುವ ದೊಡ್ಡ ಸಂಖ್ಯೆಯ ತಂದೆ ತಾಯಿಗಳೂ ನಮ್ಮ ಸಮಾಜದಲ್ಲಿದ್ದಾರೆ. ಇಂತಹ ಭಾವನೆ ಬೆಳೆಯಲು ಈ ಸಿನಿಮಾಗಳ ಕೊಡುಗೆ ಎಷ್ಟು? ಅಂತಹ ಕುಟುಂಬಗಳ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಈ ಸಿನಿಮಾಗಳ ಚಿತ್ರಣ ಕಲ್ಲು ಹಾಕುತ್ತಿಲ್ಲವೇ? ಕೆಲವರಿಗೆ ಹಾಸ್ಯ. ಅಪಹಾಸ್ಯ ಮನರಂಜನೆಯಾಗಿರುವುದು ಮತ್ತಿನ್ಯಾರಿಗೋ ದುರಂತಗಳನ್ನು ತಂದೊಡ್ಡುವುದು ಎಂಥ ವಿಪರ್ಯಾಸ ಅಲ್ಲವೇ?

ಕವನ

ಅರಿತು ನಡೆವುದು ಚಂದ

ಮಹಿಳೆಯ ಬುದ್ಧಿ ಮೊಣಕಾಲ ಕೆಳಗಲ್ಲ
ಅವಳ ನೆಲೆ-ಸುಳಿ ಕೀಳೆಂದು ಆಡುವುದು ಸಲ್ಲ
ಹೆಣ್ಣು ಹುಣ್ಣಲ್ಲ, ಹಣ್ಣೂ ಅಲ್ಲ, ಜೀವನ
ಜಾಲದ ಕಣ್ಣು

ಸ್ತ್ರೀ ಚಂಚಲೆಯಲ್ಲ, ಅಬಲೆಯೂ ಅಲ್ಲ
ಬಾಳುವೆಯ ಸಾಧನೆಗೆ ಸಿರಿಮೆಟ್ಟಿಲು
ಅವಳು ಎಲ್ಲ ಕೆಡುಕಿನ ಮೂಲವಲ್ಲ
ಬದುಕಿನ ಚಾಲನೆಗೆ ಸಂಜೀವಿನಿ

ಆಯಿ, ಮಾಯಿ, ತಾಯಿ ಎಂಬ
ಬಿರುದಾವಳಿಗಳು ನಮಗೆ ಬೇಡ
ದೇವಿ, ರಾಣಿ, ಚಿನ್ನಾ ಎಂಬ
ಹೊಗಳಿಕೆಯ ಮಾತುಗಳೂ ಬೇಡ

ನಮ್ಮ ಕಣ್ಣು, ಕೆನ್ನೆ, ಬಣ್ಣ ಜಡೆಗಳ ಕುರಿತು
ಬಣ್ಣನೆಯ ಮಾಡಿ ಬರೆಯುವುದು ಬೇಡ
ಸೀಮೆ ಎಣ್ಣೆ ಹಾಕಿ 'ಅಗ್ನಿದೇವ'ನ ಜೊತೆಗೆ
ಸ್ವರ್ಗಕ್ಕೆ ಕಳಿಸುವುದೂ ಬೇಡ

ನಿಮ್ಮ ಮಾತಿನ ಮಂಟಪಕಿಂತ
ನಡತೆಯ ಗುಡಿಸಲು ಚಂದ
ನಮ್ಮ ಹಾಡಿ ಹೊಗಳುವುದಕ್ಕಿಂತ
ಅರಿತು ನಡೆವುದು ಚಂದ

ಪವಿತ್ರ ಮುಳ
ಗುಲ್ಬರ್ಗಾ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH